# ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ
# ಆರ್ಥಿಕ ವಲಯ

## ಮಾರ್ಚ್ 2014ಕ್ಕೆ ಕೊನೆಗೊಂಡ ವರ್ಷ

## ಕರ್ನಾಟಕ ಸರ್ಕಾರ

**2014ನೇ ವರ್ಷದ ವರದಿ ಸಂಖ್ಯೆ 8**

## ವಿಷಯ ಸೂಚಿ


| | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|
| ಪ್ರಸ್ತಾವನೆ | | iii |
| **ಅಧ್ಯಾಯ 1 – ಪರಿಚಯ** | | |
| ಈ ವರದಿಯ ಬಗ್ಗೆ | 1.1 | 1 |
| ಲೆಕ್ಕಪರಿಶೋಧನೆಗೊಳಪಡುವ ಸಂಸ್ಥೆಗಳ ಚಿತ್ರಣ | 1.2 | 1 |
| ಲೆಕ್ಕಪರಿಶೋಧನೆಗೆ ಅಧ್ಯಾದೇಶ | 1.3 | 2 |
| ಪ್ರಧಾನ ಮಹಾಲೇಖಾಪಾಲರು (ಆರ್ಥಿಕ ಮತ್ತು ರಾಜಸ್ವ ವಲಯ ಲೆಕ್ಕಪರಿಶೋಧನೆ), ಕರ್ನಾಟಕ, ಈ ಕಛೇರಿಯ ಸಾಂಸ್ಥಿಕ ರಚನೆ | 1.4 | 3 |
| ಲೆಕ್ಕಪರಿಶೋಧನೆಯ ಯೋಜನೆ ಮತ್ತು ಅನುಷ್ಠಾನ | 1.5 | 3 |
| ಪ್ರಮುಖ ಲೆಕ್ಕಪರಿಶೋಧನಾ ಅಭಿಪ್ರಾಯಗಳು | 1.6 | 3 |
| ಕರ್ನಾಟಕದಲ್ಲಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಚಟುವಟಿಕೆಗಳ ಅನುಷ್ಠಾನದ ಬಗ್ಗೆ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ | 1.6.1 | 4 |
| ಅನುಪಾಲನಾ ಲೆಕ್ಕಪರಿಶೋಧನೆ | 1.6.2 | 5 |
| ಲೆಕ್ಕಪರಿಶೋಧನೆಗೆ ಸರ್ಕಾರದ ಪ್ರತಿಕ್ರಿಯೆಯ ಕೊರತೆ | 1.7 | 6 |
| ಬಾಕಿ ಇರುವ ತಪಾಸಣಾ ವರದಿಗಳು | 1.7.1 | 6 |
| ಕರಡು ಕಂಡಿಕೆಗಳಿಗೆ ಇಲಾಖೆಗಳ ಪ್ರತಿಕ್ರಿಯೆ | 1.7.2 | 6 |
| ಲೆಕ್ಕಪರಿಶೋಧನಾ ವರದಿಗಳ ಮೇಲಿನ ಅನುಸರಣೆ | 1.7.3 | 6 |
| ಸಾರ್ವಜನಿಕ ಲೆಕ್ಕಪತ್ರ ಸಮಿತಿಯಿಂದ ಚರ್ಚೆಯಾಗಬೇಕಾಗಿರುವ ಕಂಡಿಕೆಗಳು | 1.7.4 | 6 |
| **ಅಧ್ಯಾಯ 2 – ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ** | | |
| **ಜಲ ಸಂಪನ್ಮೂಲ ಇಲಾಖೆ** | | |
| ಕರ್ನಾಟಕದಲ್ಲಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಚಟುವಟಿಕೆಗಳ ಅನುಷ್ಠಾನ | 2.1 | 9 |
| **ಅಧ್ಯಾಯ 3 – ಅನುಪಾಲನಾ ಲೆಕ್ಕಪರಿಶೋಧನೆ** | | |
| **ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ** | | |
| ಸಹಕಾರಿ ಸಕ್ಕರೆ ಕಾರ್ಖಾನೆಗಳ ಗುತ್ತಿಗೆ ಮತ್ತು ಸಮಾಪನೆ | 3.1 | 35 |
| ವಿವೇಚನೆಯಿಲ್ಲದ ತೀರ್ಮಾನದಿಂದ ನಷ್ಟ | 3.2 | 44 |
| ವೆಚ್ಚದ ವ್ಯತ್ಯಾಸದ ವಸೂಲಾತಿಯಲ್ಲಿ ವಿಳಂಬದಿಂದ ನಷ್ಟ | 3.3 | 46 |

| | | |
|---|---|---|
| **ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ** | | |
| ವರಮಾನದ ನಷ್ಟ | 3.4 | 47 |
| ಹೂಡಿಕೆಯ ದುರ್ನಿರ್ವಹಣೆ | 3.5 | 49 |
| **ಮೂಲಸೌಕರ್ಯ ಅಭಿವೃದ್ಧಿ ಇಲಾಖೆ** | | |
| ನಿಷ್ಫಲ ವೆಚ್ಚ | 3.6 | 52 |
| **ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ** | | |
| ತಪ್ಪು ವ್ಯಾಖ್ಯಾನದಿಂದ ಅಧಿಕ ಪಾವತಿ | 3.7 | 53 |
| ಅಸಮರ್ಥನೀಯ ವೆಚ್ಚ | 3.8 | 55 |
| ಇಟ್ಟಿಗೆ ಕಾರ್ಖಾನೆಯ ಗುತ್ತಿಗೆ ನೀಡುವಿಕೆಯಲ್ಲಿ ವರಮಾನದ ನಷ್ಟ | 3.9 | 57 |
| ಅಂಗೀಕರಿಸಲಾಗದ ಪಾವತಿ | 3.10 | 58 |
| **ಜಲ ಸಂಪನ್ಮೂಲ ಇಲಾಖೆ – ಸಣ್ಣ ನೀರಾವರಿ** | | |
| ನಿರರ್ಥಕ ಹೂಡಿಕೆ | 3.11 | 60 |
| ನಿಷ್ಫಲ ವೆಚ್ಚ | 3.12 | 62 |
| ಉಕ್ಕಿನ ಅನಾವಶ್ಯಕ ಬಳಕೆ | 3.13 | 64 |
| **ಜಲ ಸಂಪನ್ಮೂಲ ಇಲಾಖೆ – ತುಂಗಭದ್ರ ಯೋಜನೆ** | | |
| ಗುತ್ತಿಗೆದಾರನಿಗೆ ಅನುಚಿತ ಲಾಭ | 3.14 | 66 |


## ಅನುಬಂಧಗಳ ಪಟ್ಟಿ


| ಅನುಬಂಧ ಸಂಖ್ಯೆ | ವಿವರಗಳು | ಪುಟ ಸಂಖ್ಯೆ |
|---|---|---|
| 1.1 | ಸಹಕಾರ ಮತ್ತು ಜಲ ಸಂಪನ್ಮೂಲ (ಸಣ್ಣ ನೀರಾವರಿ) ಇಲಾಖೆಗಳಿಗೆ ಸಂಬಂಧಿಸಿದಂತೆ, ಮಾರ್ಚ್ 2014ರಲ್ಲಿದ್ದಂತೆ, ಬಾಕಿಯಿರುವ ತಪಾಸಣಾ ವರದಿಗಳ ಮತ್ತು ಕಂಡಿಕೆಗಳ ವರ್ಷಾವಾರು ವಿವರಗಳು | 71 |
| 1.2 | 31 ಜುಲೈ 2014ರಲ್ಲಿದ್ದಂತೆ ಬಾಕಿಯಿರುವ ಇಲಾಖಾ ಟಿಪ್ಪಣಿಗಳ ವಿವರಗಳು | 72 |
| 1.3 | 31 ಜುಲೈ 2014ರಲ್ಲಿದ್ದಂತೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯಿಂದ ಇನ್ನೂ ಚರ್ಚಿಸಲ್ಪಡಬೇಕಿರುವ ಕಂಡಿಕೆಗಳು | 73 |
| 2.1 | ಹೊಲಗಾಲುವೆಗಳು ಪೂರ್ಣವಾಗಿದ್ದರೂ ಯೋಜನೆಗಳ ಅಡಿಯಲ್ಲಿ ನೀರಾವರಿಗೊಳಗಾಗದ ಪ್ರದೇಶವನ್ನು ತೋರಿಸುವ ವಿವರಣಾ ಪಟ್ಟಿ | 74 |
| 3.1 | ಸರ್ಕಾರದಿಂದ ಬ್ಯಾಂಕ್‌ಗಳಿಗೆ ಮಾಡಲಾದ ಏಕಕಾಲ ತೀರುವಳಿ ಕಡೆಗೆ ಪಾವತಿಗಳು | 75 |
| 3.2 | ವೆಚ್ಚದ ವ್ಯತ್ಯಾಸದ ಸಂಗ್ರಹಣೆಯಲ್ಲಿ ವಿಳಂಬದಿಂದ ಬಡ್ಡಿಯ ನಷ್ಟವನ್ನು ತೋರಿಸುವ ವಿವರಣಾ ಪಟ್ಟಿ | 76 |
| 3.3 | ಅಧಿಕ ಪಾವತಿ ಮಾಡಿರುವುದನ್ನು ತೋರಿಸುವ ವಿವರಣಾ ಪಟ್ಟಿ | 78 |

# ಪ್ರಸ್ತಾವನೆ

1. ಮಾರ್ಚ್ 2014ಕ್ಕೆ ಕೊನೆಗೊಂಡ ವರ್ಷದ ಈ ವರದಿಯನ್ನು ಭಾರತದ ಸಂವಿಧಾನದ 151ನೆಯ ಅನುಚ್ಛೇದದಡಿ ಕರ್ನಾಟಕದ ರಾಜ್ಯಪಾಲರಿಗೆ ಸಲ್ಲಿಸುವುದಕ್ಕಾಗಿ ಸಿದ್ಧಪಡಿಸಲಾಗಿದೆ.

2. ಈ ವರದಿಯು, ಕರ್ನಾಟಕ ಸರ್ಕಾರದ ಆರ್ಥಿಕ ಸೇವೆಗಳಡಿಯಲ್ಲಿನ ವಾಣಿಜ್ಯ ಮತ್ತು ಕೈಗಾರಿಕೆ, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ, ಮೂಲಸೌಕರ್ಯ ಅಭಿವೃದ್ಧಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಹಾಗೂ ಜಲ ಸಂಪನ್ಮೂಲ ಇಲಾಖೆಗಳು ಸೇರಿದಂತೆ, 'ಕರ್ನಾಟಕದಲ್ಲಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಚಟುವಟಿಕೆಗಳ ಅನುಷ್ಠಾನ'ದ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಅಂಶಗಳನ್ನು ಮತ್ತು ಅನುಪಾಲನಾ ಲೆಕ್ಕಪರಿಶೋಧನೆಯ ಗಮನಾರ್ಹ ಫಲಿತಾಂಶಗಳನ್ನು ಒಳಗೊಂಡಿದೆ. ಆದಾಗ್ಯೂ, ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳ ಇಲಾಖೆ, ಆಹಾರ ಖಾತರಿ – ಸಾರ್ವಜನಿಕ ವಿತರಣಾ ವ್ಯವಸ್ಥೆ/ ನಾಗರಿಕ ಸರಬರಾಜು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್‌ಗಳನ್ನು ಹೊರಗಿಡಲಾಗಿದ್ದು, ಅವು ಸಾಮಾನ್ಯ ಮತ್ತು ಸಾಮಾಜಿಕ ಸೇವೆಗಳ ವರದಿಯಲ್ಲಿ ವ್ಯಾಪಿಸಲ್ಪಟ್ಟಿವೆ.

3. ಈ ವರದಿಯಲ್ಲಿ ನಮೂದಿತವಾಗಿರುವ ಪ್ರಕರಣಗಳು 2013–14ರ ವರ್ಷದಲ್ಲಿ ಲೆಕ್ಕಪತ್ರಗಳ ಪರೀಕ್ಷಾ–ತನಿಖೆಯ ಸಮಯದಲ್ಲಿ ಗಮನಕ್ಕೆ ಬಂದವುಗಳೇ ಅಲ್ಲದೆ ಅದಕ್ಕಿಂತ ಮುಂಚಿನ ವರ್ಷಗಳಲ್ಲಿ ಗಮನಿಸಿದ್ದಾದರೂ ಹಿಂದಿನ ವರದಿಗಳಲ್ಲಿ ಸೇರಿಸಲಾಗದೇ ಇರುವಂತಹವುಗಳಾಗಿವೆ; 2013–14ರ ತರುವಾಯದ ಅವಧಿಗೆ ಸಂಬಂಧಿಸಿದ ವಿಷಯಗಳನ್ನು ಕೂಡ, ಅವಶ್ಯವಿದ್ದೆಡೆಯಲ್ಲಿ, ಸೇರಿಸಲಾಗಿದೆ.

4. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಂದ ನೀಡಲ್ಪಟ್ಟ ಲೆಕ್ಕಪರಿಶೋಧನಾ ಮಾನಕಗಳಿಗೆ ಅನುಗುಣವಾಗಿ ಲೆಕ್ಕಪರಿಶೋಧನೆಯನ್ನು ನಿರ್ವಹಿಸಲಾಗಿದೆ.

5. ಈ ಭಾಷಾಂತರಿಸಿದ ಆವೃತ್ತಿಯಲ್ಲಿನ ಯಾವುದೇ ಸಂದೇಹಗಳಿಗೆ ಆಂಗ್ಲ ಭಾಷಾ ಆವೃತ್ತಿಯೇ ಅಧಿಕೃತವೆಂದು ಪರಿಗಣಿಸತಕ್ಕದ್ದು.

# ಅಧ್ಯಾಯ 1

## ಪರಿಚಯ

# ಅಧ್ಯಾಯ 1

# ಪರಿಚಯ

## 1.1 ಈ ವರದಿಯ ಬಗ್ಗೆ

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಈ ವರದಿಯು, ಆರ್ಥಿಕ ವಲಯದ ಅಡಿಯಲ್ಲಿ ಆಯ್ದ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ ಹಾಗೂ ಸರ್ಕಾರದ ಇಲಾಖೆಗಳು ಮತ್ತು ಸ್ವಾಯತ್ತ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಅನುಪಾಲನಾ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಂತಹ ಅಂಶಗಳಿಗೆ ಸಂಬಂಧಿಸಿದ್ದಾಗಿದೆ.

ಅನುಪಾಲನಾ ಲೆಕ್ಕಪರಿಶೋಧನೆಯು, ಭಾರತದ ಸಂವಿಧಾನದ ಅನುವುಗಳು, ಅನ್ವಯಗೊಳ್ಳುವ ಕಾನೂನುಗಳು, ನಿಯಮಗಳು, ನಿಯಂತ್ರಣಗಳು ಹಾಗೂ ಸಕ್ಷಮ ಅಧಿಕಾರಿಗಳಿಂದ ನೀಡಲ್ಪಟ್ಟ ವಿವಿಧ ಆದೇಶಗಳು ಮತ್ತು ನಿರ್ದೇಶನಗಳನ್ನು ಪಾಲಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಲೆಕ್ಕಪರಿಶೋಧನೆಗೆ ಒಳಪಟ್ಟ ಇಲಾಖೆಗಳ ವೆಚ್ಚಕ್ಕೆ ಸಂಬಂಧಿಸಿದಂತೆ ಮಾಡಲಾದ ವಹಿವಾಟುಗಳ ಪರಿಶೀಲನೆಗಳಿಗೆ ಸಂಬಂಧಿಸಿರುತ್ತದೆ.

ಈ ವರದಿಯ ಮೂಲ ಉದ್ದೇಶವು, ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಪ್ರಮುಖ ಫಲಿತಾಂಶಗಳನ್ನು ರಾಜ್ಯ ಶಾಸಕಾಂಗದ ಗಮನಕ್ಕೆ ತರುವುದು. ವರದಿ ಮಾಡುವುದಕ್ಕೆ ಪ್ರಕೃತತೆಯ ಮಟ್ಟವು ವ್ಯವಹಾರಗಳ ಸ್ವಭಾವ, ಗಾತ್ರ ಹಾಗೂ ವಿಸ್ತಾರಕ್ಕೆ ಅನುಗುಣವಾಗಿರುವ ಅಗತ್ಯತೆಯನ್ನು ಲೆಕ್ಕಪರಿಶೋಧನೆಯ ಮಾನದಂಡಗಳು ಹೊಂದಿವೆ. ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳು, ದೋಷಪರಿಹಾರಕ ಕ್ರಮಗಳನ್ನು ತೆಗೆದುಕೊಳ್ಳುವಂತೆ ಇರುವುದನ್ನು ಅಲ್ಲದೇ, ಸಂಸ್ಥೆಗಳ ಆರ್ಥಿಕ ನಿರ್ವಹಣೆಯನ್ನು ಉತ್ತಮಪಡಿಸುವತ್ತ ದಾರಿ ತೋರಿಸುವ ಕಾರ್ಯನೀತಿ ಮತ್ತು ನಿರ್ದೇಶನಗಳನ್ನು ರೂಪಿಸಲು ಹಾಗೂ ಈ ರೀತಿಯಾಗಿ ಉತ್ತಮ ಆಡಳಿತ ವ್ಯವಸ್ಥೆಗೆ ಅನುಕೂಲ ಕಲ್ಪಿಸುವಂತಿರುವುದನ್ನು ನಿರೀಕ್ಷಿಸಲಾಗುತ್ತದೆ.

ಈ ಅಧ್ಯಾಯವು, ಲೆಕ್ಕಪರಿಶೋಧನೆಯ ಯೋಜನೆ ಹಾಗೂ ವ್ಯಾಪ್ತಿಯನ್ನು ವಿವರಿಸುವುದರ ಜೊತೆಗೆ, ಆಯ್ದ ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿನ ಗಮನಾರ್ಹ ನ್ಯೂನತೆಗಳು ಹಾಗೂ ಸಾಧನೆಗಳು, ಅನುಪಾಲನಾ ಲೆಕ್ಕಪರಿಶೋಧನೆಯ ವೇಳೆಯಲ್ಲಿ ಗಮನಿಸಲಾದ ಗಮನಾರ್ಹ ಅಂಶಗಳು ಹಾಗೂ ಹಿಂದಿನ ಲೆಕ್ಕಪರಿಶೋಧನಾ ವರದಿಗಳ ಮೇಲೆ ಅನುಸರಣಾ ಕ್ರಮಗಳ ಬಗ್ಗೆ ಸ್ಥೂಲ ನಿರೂಪಣೆಯನ್ನು, ನೀಡುತ್ತದೆ. ಈ ವರದಿಯ ಅಧ್ಯಾಯ – 2 ಆಯ್ದುಕೊಳ್ಳಲಾದ ಕಾರ್ಯಕ್ರಮಗಳು/ಚಟುವಟಿಕೆಗಳು/ ಇಲಾಖೆಗಳ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳನ್ನು ಒಳಗೊಂಡಿದೆ. ಅಧ್ಯಾಯ – 3 ಸರ್ಕಾರಿ ಇಲಾಖೆಗಳ ಮತ್ತು ಸ್ವಾಯತ್ತ ಸಂಸ್ಥೆಗಳ ಅನುಪಾಲನಾ ಲೆಕ್ಕಪರಿಶೋಧನೆಯ ಅಂಶಗಳನ್ನು ಒಳಗೊಂಡಿದೆ.

## 1.2 ಲೆಕ್ಕಪರಿಶೋಧನೆಗೊಳಪಡುವ ಸಂಸ್ಥೆಗಳ ಚಿತ್ರಣ

ರಾಜ್ಯದಲ್ಲಿ, ನಿರ್ದೇಶಕರು/ಆಯುಕ್ತರು ಮತ್ತು ಅವರ ಅಡಿಯಲ್ಲಿನ ಅಧೀನ ಅಧಿಕಾರಿಗಳು, ಇವರ ಸಹಾಯದಿಂದ ಕಾರ್ಯನಿರ್ವಹಿಸುವ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಗಳ ನೇತೃತ್ವದಲ್ಲಿರುವ ಸಚಿವಾಲಯ ಮಟ್ಟದಲ್ಲಿ 17 ಇಲಾಖೆಗಳು ಹಾಗೂ 23 ಸ್ವಾಯತ್ತ ಸಂಸ್ಥೆಗಳಿದ್ದು ಇವುಗಳನ್ನು ಪ್ರಧಾನ ಮಹಾಲೇಖಪಾಲರು (ಆರ್ಥಿಕ ಮತ್ತು ರಾಜಸ್ವ ವಲಯ ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು, ಇವರು ಲೆಕ್ಕಪರಿಶೋಧನೆ ಮಾಡುವರು.

2012–13 ಮತ್ತು 2013–14 ಸಾಲುಗಳಲ್ಲಿ ಹಣಕಾಸಿನ ವ್ಯವಹಾರಗಳ ಸಾರಾಂಶವನ್ನು ಈ ಕೆಳಗಿನ **ಕೋಷ್ಟಕ 1ರಲ್ಲಿ** ನೀಡಲಾಗಿದೆ:

**ಕೋಷ್ಟಕ 1: ಹಣಕಾಸು ವ್ಯವಹಾರಗಳ ಸಾರಾಂಶ**

(₹ ಕೋಟಿಯಲ್ಲಿ)

| ಸ್ವೀಕೃತಿಗಳು | | | ವಿತರಣೆಗಳು | | | | |
|---|---|---|---|---|---|---|---|
| | 2012–13 | 2013–14 | | 2012–13 | 2013–14 | | |
| ಭಾಗ ಅ: ಆದಾಯ | | | | ಒಟ್ಟು | ಯೋಜನೇತರ | ಯೋಜನೆ | ಒಟ್ಟು |
| **ರಾಜಸ್ವ ಸ್ವೀಕೃತಿಗಳು** | **78,176.22** | **89,542.53** | **ರಾಜಸ್ವ ವೆಚ್ಚ** | **76,293.26** | **62,219.74** | **26,969.83** | **89,189.57** |
| ತೆರಿಗೆ ಆದಾಯ | 53,753.56 | 62,603.53 | ಸಾಮಾನ್ಯ ಸೇವೆಗಳು | 20,180.85 | 24,794.03 | 160.38 | 24,954.41 |
| ತೆರಿಗೆಯೇತರ ಆದಾಯ | 3,966.10 | 4,031.90 | ಸಾಮಾಜಿಕ ಸೇವೆಗಳು | 30,419.80 | 17,813.32 | 14,808.57 | 32,621.89 |
| ಕೇಂದ್ರ ತೆರಿಗೆಗಳು/ಸುಂಕಗಳ ಪಾಲು | 12,647.14 | 13,808.28 | ಆರ್ಥಿಕ ಸೇವೆಗಳು | 21,674.19 | 16,742.34 | 9,850.49 | 26,592.83 |
| ಸಹಾಯಾನುದಾನ ಮತ್ತು ಭಾರತ ಸರ್ಕಾರದಿಂದ ಕೊಡುಗೆ | 7,809.42 | 9,098.82 | ಸಹಾಯಾನುದಾನ ಮತ್ತು ಕೊಡುಗೆ | 4,018.42 | 2,870.05 | 2,150.39 | 5,020.44 |
| ಭಾಗ ಆ: ಬಂಡವಾಳ ಮತ್ತು ಇತರೆ | | | | | | | |
| **ಇತರ ಬಂಡವಾಳ ಸ್ವೀಕೃತಿಗಳು** | **33.04** | **87.94** | **ಬಂಡವಾಳ ವೆಚ್ಚ** | **15,478.47** | **326.75** | **16,620.11** | **16,946.86** |
| | | | ಸಾಮಾನ್ಯ ಸೇವೆಗಳು | 589.47 | 27.79 | 472.95 | 500.74 |
| | | | ಸಾಮಾಜಿಕ ಸೇವೆಗಳು | 2,915.99 | (–) 0.14 | 3,052.82 | 3,052.68 |
| | | | ಆರ್ಥಿಕ ಸೇವೆಗಳು | 11,973.01 | 299.10 | 13,094.34 | 13,393.44 |
| **ಸಾಲಗಳು ಮತ್ತು ಮುಂಗಡಗಳ ಸ್ವೀಕೃತಿ** | **157.61** | **109.28** | **ಸಾಲಗಳು ಮತ್ತು ಮುಂಗಡಗಳ ವಿತರಣೆ** | **1,102.37** | **25.82** | **669.61** | **695.43** |
| **ಸಾರ್ವಜನಿಕ ಋಣ ಸ್ವೀಕೃತಿ** | **13,464.66** | **17,286.81** | **ಸಾರ್ವಜನಿಕ ಋಣದ ಮರುಪಾವತಿ** | **3,727.06** | **3,816.84** | **–** | **3,816.84** |
| **ಸಾದಿಲ್ವಾರು ನಿಧಿ** | **0.51** | **–** | **ಸಾದಿಲ್ವಾರು ನಿಧಿ** | **–** | **–** | **–** | **–** |
| **ಸಾರ್ವಜನಿಕ ಲೆಕ್ಕ ಸ್ವೀಕೃತಿ** | **1,07,548.81** | **1,20,712.85** | **ಸಾರ್ವಜನಿಕ ಲೆಕ್ಕ ವಿತರಣೆ** | **1,01,877.94** | **–** | **–** | **1,12,971.74** |
| **ಪ್ರಾರಂಭದ ನಗದು ಶಿಲ್ಕು** | **9,609.49** | **10,511.24** | **ಮುಕ್ತಾಯ ನಗದು ಶಿಲ್ಕು** | **10,511.24** | **–** | **–** | **14,630.21** |
| **ಒಟ್ಟು** | **2,08,990.34** | **2,38,250.65** | **ಒಟ್ಟು** | **2,08,990.34** | | | **2,38,250.65** |

(ಆಧಾರ: ಹಣಕಾಸು ಲೆಕ್ಕಪತ್ರ)

## 1.3 ಲೆಕ್ಕಪರಿಶೋಧನೆಗೆ ಅಧ್ಯಾದೇಶ

ಭಾರತದ ಸಂವಿಧಾನದ ಕಲಮುಗಳು 149 ಮತ್ತು 151 ಹಾಗೂ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಕರ್ತವ್ಯಗಳು, ಅಧಿಕಾರಗಳು ಮತ್ತು ಸೇವಾ ಷರತ್ತುಗಳು) ಅಧಿನಿಯಮ, 1971 {ಸಿಎಜಿರವರ (ಡಿಪಿಸಿ) ಅಧಿನಿಯಮ} ಇದರಡಿ ಸಿಎಜಿರವರು ಅಧಿಕಾರವನ್ನು ಪಡೆಯುತ್ತಾರೆ. ಸಿಎಜಿರವರ (ಡಿಪಿಸಿ) ಅಧಿನಿಯಮದ ಪರಿಚ್ಛೇದ 13ರ[1] ಅಡಿಯಲ್ಲಿ ಕರ್ನಾಟಕ ಸರ್ಕಾರದ ಇಲಾಖೆಗಳ ವೆಚ್ಚಗಳನ್ನು ಸಿಎಜಿರವರು ಲೆಕ್ಕಪರಿಶೋಧನೆ ಮಾಡುತ್ತಾರೆ. ಅಧಿನಿಯಮದ ಪರಿಚ್ಛೇದ 19(2)[2], 19(3)[3] ಹಾಗೂ 20(1)ರ[4] ಅಡಿಯಲ್ಲಿ ಲೆಕ್ಕಪರಿಶೋಧನೆ ಮಾಡಲ್ಪಡುವ 23 ಸ್ವಾಯತ್ತ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಸಿಎಜಿರವರು ಏಕೈಕ ಲೆಕ್ಕಪರಿಶೋಧಕರಾಗಿರುತ್ತಾರೆ. ಅಲ್ಲದೇ, ಅಧಿನಿಯಮದ ಪರಿಚ್ಛೇದ 14ರ[5] ಅಡಿಯಲ್ಲಿ ಸರ್ಕಾರದಿಂದ ಗಮನಾರ್ಹ ಮೊತ್ತದ ಧನಸಹಾಯವನ್ನು ಪಡೆಯುವ ಇತರೆ 310 ಸ್ವಾಯತ್ತ ಸಂಸ್ಥೆಗಳ ಲೆಕ್ಕಪರಿಶೋಧನೆಯನ್ನೂ ಸಹ ಸಿಎಜಿರವರು ನಡೆಸುತ್ತಾರೆ. ವಿವಿಧ ಲೆಕ್ಕಪರಿಶೋಧನೆಗಳಿಗೆ ಮೂಲಭೂತ ತತ್ವಗಳನ್ನು ಹಾಗೂ ವಿಧಾನಗಳನ್ನು, ಸಿಎಜಿರವರು ನಿರ್ದಿಷ್ಟಪಡಿಸಿರುವ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರಗಳ ಮೇಲೆ ಲೆಕ್ಕಪರಿಶೋಧನೆಯ ಮಾನದಂಡಗಳು ಮತ್ತು ನಿಯಂತ್ರಣಗಳು, 2007, ಇದು ನಿರ್ದಿಷ್ಟಪಡಿಸಿದೆ.

---

[1] (ಅ) ರಾಜ್ಯದ ಸಂಚಿತ ನಿಧಿಯ ಎಲ್ಲಾ ವ್ಯವಹಾರಗಳು, (ಆ) ಸಾದಿಲ್ವಾರು ನಿಧಿ ಮತ್ತು ಸಾರ್ವಜನಿಕ ಲೆಕ್ಕಪತ್ರಗಳಿಗೆ ಸಂಬಂಧಿಸಿದ ಎಲ್ಲ ವ್ಯವಹಾರಗಳು, (ಇ) ಎಲ್ಲಾ ವ್ಯಾಪಾರ, ತಯಾರಿಕೆ, ಲಾಭ ಮತ್ತು ನಷ್ಟದ ಲೆಕ್ಕಪತ್ರಗಳು, ಆಸ್ತಿ–ಜವಾಬ್ದಾರಿ ತಃಖ್ತೆಗಳು ಹಾಗೂ ಇತರೆ ಉಪಾಂಗ–ಲೆಕ್ಕಪತ್ರಗಳ ಲೆಕ್ಕಪರಿಶೋಧನೆ

[2] ಸಂಬಂಧಿತ ಕಾಯಿದೆ/ಕಾನೂನುಗಳ ಅನುವುಗಳ ಪ್ರಕಾರ ಸಂಸತ್ತಿನಲ್ಲಿ ಜಾರಿಗೊಳಿಸಲಾದ ಕಾಯಿದೆಯ ಮೂಲಕ ಸ್ಥಾಪಿಸಲಾದ ನಿಗಮಗಳ (ಕಂಪನಿಗಳಲ್ಲ) ಲೆಕ್ಕಪತ್ರಗಳ ಲೆಕ್ಕಪರಿಶೋಧನೆ

[3] ರಾಜ್ಯಪಾಲರ ಕೋರಿಕೆಯ ಮೇರೆಗೆ, ರಾಜ್ಯ ಶಾಸಕಾಂಗದಿಂದ ಜಾರಿಗೊಳಿಸಲಾದ ಕಾಯಿದೆಯ ಮೂಲಕ ಸ್ಥಾಪಿಸಲಾದ ನಿಗಮಗಳ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ

[4] ಸಿಎಜಿ ಮತ್ತು ಸರ್ಕಾರದ ನಡುವೆ ಒಪ್ಪಿಕೊಳ್ಳಲ್ಪಟ್ಟ ಷರತ್ತುಗಳ ಮೇಲೆ ರಾಜ್ಯಪಾಲರ ಕೋರಿಕೆಯ ಮೇರೆಗೆ ಯಾವುದೇ ಸಂಸ್ಥೆ ಅಥವಾ ಪ್ರಾಧಿಕಾರದ ಲೆಕ್ಕಪತ್ರದ ಲೆಕ್ಕಪರಿಶೋಧನೆ

[5] ರಾಜ್ಯದ ಸಂಚಿತ ನಿಧಿಯಿಂದ ಅನುದಾನಗಳು ಅಥವಾ ಸಾಲಗಳ ಮುಖಾಂತರ ಬಹುಮಟ್ಟಿಗೆ ಹಣಕಾಸು ಒದಗಿಸುವ ಸಂಸ್ಥೆ/ ಪ್ರಾಧಿಕಾರದ ಎಲ್ಲ ಜಮೆ ಮತ್ತು ವೆಚ್ಚದ ಲೆಕ್ಕಪರಿಶೋಧನೆ ಮತ್ತು ರಾಜ್ಯದ ರಾಜ್ಯಪಾಲರ ಪೂರ್ವಾನುಮತಿಯೊಂದಿಗೆ ರಾಜ್ಯ ಸಂಚಿತ ನಿಧಿಯಿಂದ ₹ ಒಂದು ಕೋಟಿಗೂ ಕಡಿಮೆಯಿಲ್ಲದಂತೆ ಅನುದಾನ ಅಥವಾ ಸಾಲ ಪಡೆಯುವ ಯಾವುದೇ ಸಂಸ್ಥೆ ಅಥವಾ ಪ್ರಾಧಿಕಾರದ ಎಲ್ಲ ಜಮೆ ಮತ್ತು ವೆಚ್ಚಗಳ ಲೆಕ್ಕಪರಿಶೋಧನೆ

## 1.4 ಪ್ರಧಾನ ಮಹಾಲೇಖಾಪಾಲರು (ಆರ್ಥಿಕ ಮತ್ತು ರಾಜಸ್ವ ವಲಯ ಲೆಕ್ಕಪರಿಶೋಧನೆ), ಕರ್ನಾಟಕ, ಇವರ ಕಛೇರಿಯ ಸಾಂಸ್ಥಿಕ ರಚನೆ

ಸಿಎಜಿರವರ ನಿರ್ದೇಶನಗಳಂತೆ, ಪ್ರಧಾನ ಮಹಾಲೇಖಾಪಾಲರು (ಆರ್ಥಿಕ ಮತ್ತು ರಾಜಸ್ವ ವಲಯ ಲೆಕ್ಕಪರಿಶೋಧನೆ), ಕರ್ನಾಟಕ, ಇವರು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಹಾಗೂ ರಾಜ್ಯದಾದ್ಯಂತ ಇರುವ ಸರ್ಕಾರದ ಇಲಾಖೆಗಳು/ಕಛೇರಿಗಳು, ಸ್ವಾಯತ್ತ ಸಂಸ್ಥೆಗಳು/ಸಂಸ್ಥೆಗಳ ಲೆಕ್ಕಪರಿಶೋಧನೆಯನ್ನು ನಡೆಸುತ್ತಾರೆ. ಪ್ರಧಾನ ಮಹಾಲೇಖಾಪಾಲರು (ಆರ್ಥಿಕ ಮತ್ತು ರಾಜಸ್ವ ವಲಯ ಲೆಕ್ಕಪರಿಶೋಧನೆ), ಕರ್ನಾಟಕ, ಇವರು, ಮೂವರು ಉಪಮಹಾಲೇಖಪಾಲರುಗಳಿಂದ ಸಹಾಯ ಪಡೆಯುತ್ತಾರೆ.

## 1.5 ಲೆಕ್ಕಪರಿಶೋಧನೆಯ ಯೋಜನೆ ಮತ್ತು ಅನುಷ್ಠಾನ

ಭರಿಸಲಾದ ವೆಚ್ಚ, ಕಾರ್ಯಚಟುವಟಿಕೆಗಳ ವಿಷಮತೆ/ಜಟಿಲತೆ, ನೀಡಲಾಗಿರುವ ಹಣಕಾಸಿಗೆ ಸಂಬಂಧಿತ ಅಧಿಕಾರದ ಮಟ್ಟ, ಒಟ್ಟಾರೆ ಆಂತರಿಕ ನಿಯಂತ್ರಣಗಳು ಹಾಗೂ ಸಹಭಾಗಿಗಳ ಚಿಂತನೆ ಇವುಗಳ ಮೇಲೆ ಆಧಾರಿತವಾದಂತೆ, ಸರ್ಕಾರದ ವಿವಿಧ ಇಲಾಖೆಗಳು ಎದುರಿಸುವ ಅಪಾಯಗಳನ್ನು ನಿರ್ಧಾರಣೆ ಮಾಡುವುದರೊಂದಿಗೆ ಲೆಕ್ಕಪರಿಶೋಧನೆಯ ಪ್ರಕ್ರಿಯೆ ಪ್ರಾರಂಭಗೊಳ್ಳುತ್ತದೆ. ಹಿಂದಿನ ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದ ಅಂಶಗಳನ್ನೂ ಸಹ ಈ ಕಾರ್ಯಾಚರಣೆಯಲ್ಲಿ ಪರಿಗಣಿಸಲಾಗುವುದು. ಇದರ ಆಧಾರದ ಮೇರೆಗೆ, ಸಂಭಾವ್ಯ ಅಪಾಯದ ನಿರ್ಧಾರಣೆ, ಲೆಕ್ಕಪರಿಶೋಧನೆಯ ಆವರ್ತನೆ ಹಾಗೂ ವ್ಯಾಪ್ತಿಯನ್ನು ನಿರ್ಣಯಿಸಲಾಗುವುದು.

ಘಟಕ ಕಛೇರಿಗಳ ಲೆಕ್ಕಪರಿಶೋಧನೆಯು ಪೂರ್ಣಗೊಂಡನಂತರ, ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳು ಒಳಗೊಂಡಂತೆ ತಪಾಸಣಾ ವರದಿಗಳನ್ನು ಇಲಾಖೆಗಳ ಮುಖ್ಯಸ್ಥರಿಗೆ ನೀಡಲಾಗುವುದು. ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳಿಗೆ ತಪಾಸಣಾ ವರದಿಗಳು ತಲುಪಿದ ದಿನಾಂಕದಿಂದ ಒಂದು ತಿಂಗಳ ಒಳಗೆ ತಮ್ಮ ಉತ್ತರಗಳನ್ನು ಒದಗಿಸುವಂತೆ ಇಲಾಖೆಗಳನ್ನು ಕೋರಲಾಗುವುದು. ಉತ್ತರಗಳು ಬಂದಂತೆಲ್ಲಾ, ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳನ್ನು ಇತ್ಯರ್ಥಗೊಳಿಸಲಾಗುವುದು ಅಥವ ಮುಂದಿನ ಅನುಸರಣಾ ಕ್ರಮವನ್ನು ತೆಗೆದುಕೊಳ್ಳುವಂತೆ ಸಲಹೆ ನೀಡಲಾಗುವುದು. ಈ ತಪಾಸಣಾ ವರದಿಗಳ ಕಾರಣ ಉದ್ಭವಿಸುವ ಪ್ರಮುಖ ಲೆಕ್ಕಪರಿಶೋಧನಾ ಅಭಿಪ್ರಾಯಗಳನ್ನು ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸುವ ಸಲುವಾಗಿ ಸಂಸ್ಕರಿಸಲಾಗುವುದು ಹಾಗೂ ಭಾರತದ ಸಂವಿಧಾನದ ಕಲಮು 151ರ ಅಡಿಯಲ್ಲಿ ರಾಜ್ಯದ ರಾಜ್ಯಪಾಲರಿಗೆ ಸಲ್ಲಿಸಲಾಗುವುದು.

2013–14ರಲ್ಲಿ ಆರ್ಥಿಕ ವಲಯ ಲೆಕ್ಕಪರಿಶೋಧನೆಯಲ್ಲಿ 206 ಘಟಕಗಳ ಲೆಕ್ಕಪರಿಶೋಧನೆ ಮತ್ತು ಒಂದು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ನಿರ್ವಹಿಸಲು 1,490 ತಂಡ ದಿನಗಳನ್ನು ಬಳಸಲಾಯಿತು.

## 1.6 ಪ್ರಮುಖ ಲೆಕ್ಕಪರಿಶೋಧನಾ ಅಭಿಪ್ರಾಯಗಳು

ಕಳೆದ ಕೆಲವು ವರ್ಷಗಳಲ್ಲಿ ಲೆಕ್ಕಪರಿಶೋಧನೆಯು, ವಿವಿಧ ಕಾರ್ಯಕ್ರಮಗಳು/ಕಾರ್ಯಚಟುವಟಿಕೆಗಳನ್ನು ಕಾರ್ಯಗತಗೊಳಿಸುವಲ್ಲಿ, ಗಮನಾರ್ಹವಾದ ಅನೇಕ ನ್ಯೂನತೆಗಳ ಬಗ್ಗೆ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳ ಮೂಲಕ ವರದಿ ಮಾಡಿತು ಹಾಗೂ ಅಲ್ಲದೇ ಆಯ್ದ ಇಲಾಖೆಗಳಲ್ಲಿ ಆಂತರಿಕ ನಿಯಂತ್ರಣದ ಗುಣಮಟ್ಟದ ಬಗ್ಗೆಯೂ ಕೂಡ ವರದಿ ಮಾಡಿತು; ಇವು ಇಲಾಖೆಗಳ ಕಾರ್ಯವೈಖರಿ ಮತ್ತು ಕಾರ್ಯಕ್ರಮಗಳ ಯಶಸ್ಸಿನ ಮೇಲೆ ಪ್ರಭಾವ ಬೀರುವುವು. ಅದೇ ರೀತಿ, ಸರ್ಕಾರಿ ಇಲಾಖೆಗಳು/ಸಂಸ್ಥೆಗಳ ಅನುಸರಣಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ನ್ಯೂನತೆಗಳನ್ನೂ ಸಹ ವರದಿ ಮಾಡಲಾಗಿದ್ದಿತು.

ಪ್ರಸಕ್ತ ವರದಿಯು ಒಂದು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ ಮತ್ತು 14 ಕಂಡಿಕೆಗಳನ್ನು ಒಳಗೊಂಡಿದೆ. ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಂತಹ ಗಮನಾರ್ಹ ಅಂಶಗಳನ್ನು ಈ ಕೆಳಗೆ ಚರ್ಚಿಸಲಾಗಿದೆ:

### 1.6.1 ಕರ್ನಾಟಕದಲ್ಲಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಚಟುವಟಿಕೆಗಳ ಅನುಷ್ಠಾನದ ಬಗ್ಗೆ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ

ನೀರಾವರಿಗಾಗಿ ನೀರಿನ ಬಳಕೆಯಿಂದ ಅತಿಸಣ್ಣ ಮಟ್ಟದ ಮೂಲಸೌಕರ್ಯಗಳ ಮೂಲಕ ಬಳಸಲಾದ ನೀರಾವರಿ ಸಾಮರ್ಥ್ಯ ಮತ್ತು ಸೃಜಿಸಲಾದ ನೀರಾವರಿ ಸಾಮರ್ಥ್ಯದ ನಡುವಿನ ಅಂತರವನ್ನು ತುಂಬುವ ಉದ್ದೇಶದೊಂದಿಗೆ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಕಾರ್ಯಕ್ರಮವು ಭಾರತ ಸರ್ಕಾರದಿಂದ 1974ರಲ್ಲಿ ಪ್ರಾರಂಭವಾಯಿತು. ಕರ್ನಾಟಕದಲ್ಲಿನ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಚಟುವಟಿಕೆಗಳು ನೀರಾವರಿ ಕಾಲುವೆಗಳು, ಬಸಿಗಾಲುವೆಗಳ ನಿರ್ಮಾಣ, ಭೂಮಟ್ಟ ಮಾಡುವಿಕೆ, ಜೌಗು ಪ್ರದೇಶಗಳ ಪುನರ್ ಸುಧಾರಣೆ, ವಿತರಣಾ ನಾಲೆಗಳವರೆಗೆ ಹೊರತೂಬು ವ್ಯವಸ್ಥೆಯ ಕೊರತೆಗಳ ಸರಿಪಡಿಸುವಿಕೆ, ಮುಂತಾದ ಕ್ಷೇತ್ರಾಭಿವೃದ್ಧಿ ಕಾಮಗಾರಿಗಳಿಂದ ಕೂಡಿದೆ. ಅವುಗಳಲ್ಲಿ ವಿಸ್ತರಣಾ ಸೇವೆಗಳಾದ ಕ್ಷೇತ್ರ ಅಳವಡಿಕೆ ಪ್ರಯೋಗ, ಬೆಳೆ ಪ್ರಾತ್ಯಕ್ಷತೆ ಮತ್ತು ಸಿಬ್ಬಂದಿ ಹಾಗೂ ರೈತರಿಗೆ ತರಬೇತಿ, ಮುಂತಾದವು ಕೂಡ ಸೇರಿವೆ.

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಚಟುವಟಿಕೆಗಳ ಮೇಲಿನ ವೆಚ್ಚವು ಕ್ಷೇತ್ರಾಭಿವೃದ್ಧಿ ಕಾಮಗಾರಿಗಳಿಗಾಗಿ 50:50 ಅನುಪಾತದಲ್ಲಿ ಮತ್ತು ವಿಸ್ತರಣಾ ಸೇವೆಗಳಿಗಾಗಿ 75:25 ಅನುಪಾತದಲ್ಲಿ ಕೇಂದ್ರ ಮತ್ತು ರಾಜ್ಯದಿಂದ ಹಂಚಿಕೊಳ್ಳಲ್ಪಡುತ್ತವೆ. 2009–14ರಲ್ಲಿ ರಾಜ್ಯ ಸರ್ಕಾರವು, ಆರು ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಮತ್ತು ಮೂರು ನೀರಾವರಿ ನಿಗಮಗಳಲ್ಲಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ, ₹ 2,037.99 ಕೋಟಿಯನ್ನು ಆಯವ್ಯಯದಲ್ಲಿ ಹಂಚಿತು.

ಕರ್ನಾಟಕದಲ್ಲಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಚಟುವಟಿಕೆಗಳ ಅನುಷ್ಠಾನದ ಮೇಲಿನ 2009–14ರ ಅವಧಿಯನ್ನು ವ್ಯಾಪಿಸುವ ಒಂದು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯು ಕೆಳಕಂಡವುಗಳನ್ನು ತೋರಿಸಿತು:

- ನೀರಾವರಿ ಕಾಲುವೆಗಳು ನಿರ್ಮಾಣವಾಗದ ಕಾರಣ, ಮಾರ್ಚ್ 2014ರಲ್ಲಿದ್ದಂತೆ, ಸೃಜಿಸಲಾದ ಮತ್ತು ಬಳಕೆಯಾದ ನೀರಾವರಿ ಸಾಮರ್ಥ್ಯಗಳ ನಡುವೆ 4.10 ಲಕ್ಷ ಹೆಕ್ಟೇರ್‌ನಷ್ಟು ಅಂತರವಿದ್ದಿತು. 2009–14ರ ಅವಧಿಯ 7.48 ಲಕ್ಷ ಹೆಕ್ಟೇರ್ ಸಂಚಿತ ಗುರಿಗೆ ಪ್ರತಿಯಾಗಿ ಕೇವಲ 2.25 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ (ಗುರಿಯ ಶೇಕಡ 30) ನೀರಾವರಿ ಕಾಲುವೆಗಳು ನಿರ್ಮಾಣವಾದವು.
- ಹಣಕಾಸಿನ ನಿರ್ವಹಣೆಯು ಕೊರತೆಯಿಂದ ಕೂಡಿತ್ತು ಏಕೆಂದರೆ ರಾಜ್ಯ ಸರ್ಕಾರವು ಅನುಷ್ಠಾನಗೊಳಿಸುವ ಏಜೆನ್ಸಿಗಳು ಕೋರಿದ್ದಕ್ಕಿಂತ ಹೆಚ್ಚಿನ ಅನುದಾನಗಳನ್ನು ಹಂಚಿತು. ಫಲಿತವಾಗಿ, 2009–14ರ ಅವಧಿಯಲ್ಲಿ, ಹಂಚಿಕೆಯ ಶೇಕಡ 59ರಷ್ಟಿದ್ದ ₹ 1,206.52 ಕೋಟಿಯು ಅಧ್ಯರ್ಪಿತವಾದವು/ನಷ್ಟವಾದವು.
- ಹದಿನಾರು ಯೋಜನೆಗಳಲ್ಲಿ, ₹ 915 ಕೋಟಿ ಬೆಳೆ ನಷ್ಟದಲ್ಲಿ ಪರಿಣಮಿಸುವಂತೆ, ನೀರಾವರಿ ಕಾಲುವೆಗಳ ನಿರ್ಮಾಣವಾದರೂ 2.71 ಹೆಕ್ಟೇರ್ ನೀರಾವರಿಗೊಳಪಡಲಿಲ್ಲ.
- ಒಡಂಬಡಿಕೆಯ ಪ್ರಕಾರ ಗುರಿಯನ್ನು ಸಾಧಿಸುವಲ್ಲಿ ಕೊರತೆಯಿಂದ, 2009–14ರ ಅವಧಿಯಲ್ಲಿ ರಾಜ್ಯ ಸರ್ಕಾರದಿಂದ ಕೇಂದ್ರ ಸಹಾಯಿತ ಯೋಜನೆಗಳ ಸಂಬಂಧದಲ್ಲಿ ಮಾಡಲ್ಪಟ್ಟ ₹ 130 ಕೋಟಿ ವೆಚ್ಚವನ್ನು ಭಾರತ ಸರ್ಕಾರವು ಪುನರ್ಭರ್ತಿ ಮಾಡಲಿಲ್ಲ. ಎಲ್ಲಾ 15 ಯೋಜನೆಗಳಲ್ಲೂ ಗುರಿಗಳನ್ನು ಸಾಧಿಸುವಲ್ಲಿ ಕೊರತೆಯಿಂದ ₹ 733 ಕೋಟಿ ಕೇಂದ್ರ ಸಹಾಯವು ಸಹ ಬಳಕೆಯಾಗಲಿಲ್ಲ.
- ನೀರು ನಿರ್ವಹಣೆ ಮತ್ತು ಅಚ್ಚುಕಟ್ಟು ಪ್ರದೇಶ ಪೋಷಣೆಯಲ್ಲಿ ರೈತರ ಭಾಗವಹಿಸುವಿಕೆಯನ್ನು ನಿಶ್ಚಯಿಸುವ ಸಹಯೋಗದ ನೀರಾವರಿ ವ್ಯವಸ್ಥಾಪನೆಯ ಉದ್ದೇಶವು ಈಡೇರಲಿಲ್ಲ. ಏಕೆಂದರೆ ಅವು ನೀರು ಬಳಕೆದಾರರ ಸಹಕಾರ ಸಂಘಗಳಿಂದ ನಿರ್ವಹಿಸಲ್ಪಡುತ್ತಿರಲಿಲ್ಲ.

***(ಕಂಡಿಕೆ 2.1)***

### 1.6.2 ಅನುಪಾಲನಾ ಲೆಕ್ಕಪರಿಶೋಧನೆ

ಸರ್ಕಾರಿ ಇಲಾಖೆಗಳ ಪರಿಣಾಮಕಾರಿಯಾದಂತಹ ಕಾರ್ಯವೈಖರಿಯ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಉಂಟುಮಾಡುವಂತಹ ನಿರ್ಣಾಯಕ ಕ್ಷೇತ್ರಗಳಲ್ಲಿನ ಅನೇಕ ಗಮನಾರ್ಹವಾದ ನ್ಯೂನತೆಗಳನ್ನು ಸಹ ಲೆಕ್ಕಪರಿಶೋಧನೆಯು ವರದಿ ಮಾಡಿದೆ. ಅವು ಈ ಕೆಳಗಿನಂತಿವೆ:

ಸಹಕಾರಿ ಸಕ್ಕರೆ ಕಾರ್ಖಾನೆಗಳ ಗುತ್ತಿಗೆ ನೀಡುವಿಕೆಯು, ಸಂಪನ್ಮೂಲಗಳ ಸಂಗ್ರಹಣೆಯಿಂದ ಮತ್ತು ಜವಾಬ್ದಾರಿಗಳ ಕನಿಷ್ಠಗೊಳಿಸುವಿಕೆಯಿಂದ ಸಮರ್ಥನೀಯ ಆರ್ಥಿಕ ಚಟುವಟಿಕೆ ಹಾಗೂ ಪ್ರಾದೇಶಿಕ ಅಭಿವೃದ್ಧಿಯನ್ನು ಸಾಧಿಸಲು ಕಬ್ಬು ಬೆಳೆಗಾರರಿಗೆ ಮತ್ತು ಸಹಕಾರಿ ಸಕ್ಕರೆ ಕಾರ್ಖಾನೆಗಳ ಉದ್ಯೋಗಿಗಳಿಗೆ ಸಹಾಯ ಮಾಡುವ ಉದ್ದೇಶ ಹೊಂದಿತ್ತು. ಆಯುಕ್ತರ ದಾಖಲೆಗಳ ನಮ್ಮ ಪರಿಶೀಲನೆಯು, ಸಹಕಾರಿ ಸಕ್ಕರೆ ಕಾರ್ಖಾನೆಗಳ ಗುತ್ತಿಗೆ ನೀಡುವಿಕೆಯಲ್ಲಿ ಆಯುಕ್ತರ ಅಸಮರ್ಥನೀಯ ತೀರ್ಮಾನಗಳನ್ನು ತೋರಿದವು; ಇವು ಅವುಗಳ ಪುನಃ ಸ್ಥಾಪನೆಯ ಪ್ರಕ್ರಿಯೆಯನ್ನು ಪರಾಭವಗೊಳಿಸಿದ್ದಲ್ಲದೆ ಬಾಡಿಗೆಗಳ ಶೂನ್ಯ ವಸೂಲಾತಿಯಲ್ಲಿ ಮತ್ತು ಸಹಕಾರಿ ಸಕ್ಕರೆ ಕಾರ್ಖಾನೆಗಳ ಮುಂದುವರೆದ ಕಾರ್ಯರಹಿತವಾಗಿರುವಿಕೆಯಲ್ಲಿ ಸಹ ಫಲಿಸಿತು. ಬಿಡ್ ದಾಖಲೆ ಅಥವಾ ಒಪ್ಪಂದವು ಗುತ್ತಿಗೆದಾರನಿಂದ ಗುತ್ತಿಗೆ ಒಪ್ಪಂದಗಳ ಪೂರ್ವ–ಸಮಾಪ್ತಿ ಮತ್ತು ಗುತ್ತಿಗೆ ಷರತ್ತುಗಳ ಉಲ್ಲಂಘನೆಯ ಸಂದರ್ಭದಲ್ಲಿ ಸರ್ಕಾರದ ಹಿತಾಸಕ್ತಿಯನ್ನು ಕಾಪಾಡಲು ಯಾವುದೇ ದಂಡನೆಯ ವಿಧಿಗಳನ್ನು ಹೇಳಲಿಲ್ಲ. ಸಮಾಪನಾ ಪ್ರಕ್ರಿಯೆಯ ಮುಗಿಯುವಿಕೆಯಲ್ಲಿ ಅಸಾಧಾರಣ ವಿಳಂಬವಿದ್ದುದು ಸರ್ಕಾರಕ್ಕೆ ಮತ್ತು ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಜವಾಬ್ದಾರಿಗಳ ಹೆಚ್ಚಾಗುವಿಕೆಯಲ್ಲಿ ಫಲಿಸಿತು.

***(ಕಂಡಿಕೆ 3.1)***

ಒಂದು ಕಂಪನಿಗೆ ಬಿಡದಿ ಕೈಗಾರಿಕಾ ಪ್ರದೇಶದಲ್ಲಿ ಇಳಿಸಿದ ದರದಲ್ಲಿ ಜಮೀನಿನ ಹಂಚಿಕೆಯು ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಗೆ ₹ 5.40 ಕೋಟಿ ನಷ್ಟ ಉಂಟುಮಾಡಿತು.

***(ಕಂಡಿಕೆ 3.2)***

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಸರ್ಕಾರದ ಸೂಚನೆಗಳ ಕಡೆಗಣಿಸುವಿಕೆ ಮತ್ತು ಅಗತ್ಯ ಕಾರ್ಯಶ್ರದ್ಧೆಯನ್ನು ಚಲಾಯಿಸದಿರುವಿಕೆಯ ಜೊತೆಗೆ ನಿಶ್ಚಿತ ಠೇವಣಿ ದೃಢೀಕರಣ ಪತ್ರಗಳ ಸಂಗ್ರಹಣೆಯಲ್ಲಿ ಅಸಾಮಾನ್ಯ ವಿಳಂಬವು ₹ 10 ಕೋಟಿ ಹೂಡಿಕೆ ಮತ್ತು ₹ 93 ಲಕ್ಷ ಬಡ್ಡಿಯ ನಗದೀಕರಣವಾಗದಿರುವಲ್ಲಿ ಫಲಿಸಿತು.

***(ಕಂಡಿಕೆ 3.5)***

ಒಂದು ರಸ್ತೆಯ ನಿರ್ಮಾಣಕ್ಕಾಗಿ ಜಮೀನುಗಳ ಸ್ವಾಧೀನಪಡಿಸಿಕೊಳ್ಳುವಿಕೆಯಲ್ಲಿ ನಿಧಿಗಳನ್ನು ಪಡೆಯುವಲ್ಲಿ ಅಸಾಮಾನ್ಯ ವಿಳಂಬವು ₹ 10.56 ಕೋಟಿ ಅಧಿಕ ಹೊರೆಯತ್ತ ಒಯ್ದಿತು. ಬಡ್ಡಿಯ ತಪ್ಪು ಲೆಕ್ಕಹಾಕುವಿಕೆಯು ಬಡ್ಡಿಯ ಕಡೆಗೆ ₹ 3.96 ಕೋಟಿ ಅಧಿಕ ಪಾವತಿಯಲ್ಲಿ ಪರಿಣಮಿಸಿತು.

***(ಕಂಡಿಕೆ 3.7)***

ಒಂದು ಇಟ್ಟಿಗೆ ಕಾರ್ಖಾನೆಯ ಗುತ್ತಿಗೆ ಒಪ್ಪಂದದಲ್ಲಿ ವಿಧಿಸಿದ್ದಂತೆ ಗುತ್ತಿಗೆ ಬಾಡಿಗೆಯ ಪರಿಷ್ಕರಣ ಮಾಡದಿದ್ದುದು ₹ 2.29 ಕೋಟಿ ವರಮಾನದ ನಷ್ಟದಲ್ಲಿ ಫಲಿಸಿತು.

***(ಕಂಡಿಕೆ 3.9)***

ಓರ್ವ ಗುತ್ತಿಗೆದಾರರಿಗೆ ವ್ಯತ್ಯಾಸದ ಅಂಶಗಳಿಗಾಗಿ ದರ ಹೊಂದಾಣಿಕೆ ಮೊತ್ತ ₹ 1.02 ಕೋಟಿಯು, ಗುತ್ತಿಗೆ ವಿಧಿಗಳ ಉಲ್ಲಂಘನೆಯಲ್ಲಿ, ಪಾವತಿಯಾಯಿತು.

***(ಕಂಡಿಕೆ 3.10)***

ರಕ್ಷಣಾ ಗೋಡೆಯ ನಿರ್ಮಾಣದ ಕಾಮಗಾರಿಯಲ್ಲಿ ಮೂಲತಃ ಹೇಳಿದ್ದಕ್ಕೆ ಬದಲಾಗಿ ಹೆಚ್ಚಿನ ದರ್ಜೆಯ ಉಕ್ಕಿನ ಬಳಕೆಯಿಂದ ಸಂಭವಿಸಿದ ವಿನ್ಯಾಸದ ಪರಿಷ್ಕರಣೆಯಲ್ಲಿ ವಿಫಲತೆಯು ₹ 1.80 ಕೋಟಿ ಅಧಿಕ ವೆಚ್ಚದಲ್ಲಿ ಪರಿಣಮಿಸಿತು.

***(ಕಂಡಿಕೆ 3.13)***

## 1.7 ಲೆಕ್ಕಪರಿಶೋಧನೆಗೆ ಸರ್ಕಾರದ ಪ್ರತಿಕ್ರಿಯೆಯ ಕೊರತೆ

### *1.7.1 ಬಾಕಿ ಇರುವ ತಪಾಸಣಾ ವರದಿಗಳು*

ಲೆಕ್ಕಪರಿಶೋಧನೆಯ ಅಭಿಪ್ರಾಯಗಳ ತ್ವರಿತಗತಿಯ ಇತ್ಯರ್ಥಕ್ಕಾಗಿ ಆರ್ಥಿಕ ಇಲಾಖೆಯಿಂದ 2001ರಲ್ಲಿ ಹೊರಡಿಸಲಾದ ಸೂಚನೆಗಳ ಕೈಪಿಡಿಯು ನಿಗದಿಪಡಿಸಿದ ನಿಯಮಗಳು ಮತ್ತು ಕಾರ್ಯವಿಧಾನಗಳ ಅನುಸರಣೆಯಿಂದ ಸರಿಪಡಿಕೆ ಕ್ರಮಗಳ ಮತ್ತು ತಪಾಸಣೆಯಲ್ಲಿ ಗಮನಿಸಿದ ನ್ಯೂನತೆಗಳು, ಲೋಪಗಳು, ಮುಂತಾದವುಗಳಿಗಾಗಿ ಹೊಣೆಗಾರಿಕೆಯನ್ನು ಖಾತರಿಪಡಿಸಿಕೊಳ್ಳಲು ಮಹಾಲೇಖಪಾಲರಿಂದ ನೀಡಲಾದ ತಪಾಸಣಾ ವರದಿಗಳಿಗೆ ಕಾರ್ಯಾಂಗದಿಂದ ಚುರುಕಾದ ಪ್ರತಿಕ್ರಿಯೆಗಾಗಿ ಉಪಬಂಧಿಸುತ್ತವೆ. ಕಛೇರಿಗಳ ಮುಖ್ಯಸ್ಥರು ಮತ್ತು ನಂತರದ ಮೇಲಧಿಕಾರಿಗಳು ತಪಾಸಣಾ ವರದಿಗಳಲ್ಲಿರುವ ಅಭಿಪ್ರಾಯಗಳನ್ನು ಅನುಪಾಲಿಸಬೇಕು, ಲೋಪದೋಷಗಳನ್ನು ಸರಿಪಡಿಸಬೇಕು ಮತ್ತು ಮಹಾಲೇಖಾಪಾಲರಿಗೆ ವರದಿಯನ್ನು ಕಳುಹಿಸಬೇಕು. ಅವರು ಲೆಕ್ಕಪರಿಶೋಧನಾ ಅಭಿಪ್ರಾಯಗಳ ಮೇಲ್ವಿಚಾರಣೆಗೆ ಅನುವಾಗಲು ಬಾಕಿ ಇರುವ ತಪಾಸಣಾ ವರದಿಗಳ ಅರ್ಧವಾರ್ಷಿಕ ವರದಿಯೊಂದನ್ನು ಇಲಾಖೆಯ ಕಾರ್ಯದರ್ಶಿಗೆ ಕಳುಹಿಸುತ್ತಾರೆ.

ಮಾರ್ಚ್ 2014ರಲ್ಲಿದ್ದಂತೆ, ಸಹಕಾರ ಮತ್ತು ಜಲ ಸಂಪನ್ಮೂಲ (ಸಣ್ಣ ನೀರಾವರಿ) ಇಲಾಖೆಗಳ 196 ತಪಾಸಣಾ ವರದಿಗಳು (800 ಕಂಡಿಕೆಗಳು) ಬಾಕಿ ಉಳಿದಿದ್ದವು. ಬಾಕಿ ಇರುವ ತಪಾಸಣಾ ವರದಿಗಳ ಮತ್ತು ಕಂಡಿಕೆಗಳ ವರ್ಷಾವಾರು ವಿವರಗಳನ್ನು **ಅನುಬಂಧ 1.1ರಲ್ಲಿ** ನೀಡಲಾಗಿದೆ.

2001–02 ಮತ್ತು 2013–14ರ ನಡುವೆ ನೀಡಿದ 201 ಕಂಡಿಕೆಗಳನ್ನೊಳಗೊಂಡ 18 ತಪಾಸಣಾ ವರದಿಗಳಿಗೆ ಕಛೇರಿಗಳ ಮುಖ್ಯಸ್ಥರು ಪ್ರಾಥಮಿಕ ಉತ್ತರಗಳನ್ನೂ ಸಹ ಕಳುಹಿಸಿಲ್ಲವೆಂದು ಉತ್ತರ ಬಾರದೇ ಬಾಕಿ ಉಳಿದಿರುವ ತಪಾಸಣಾ ವರದಿಗಳ ಪರಿಶೀಲನೆಯು ತಿಳಿಯಪಡಿಸಿತು.

### *1.7.2 ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳಿಗೆ ಇಲಾಖೆಗಳ ಪ್ರತಿಕ್ರಿಯೆ*

ಕರಡು ಕಂಡಿಕೆಗಳು/ಕಾರ್ಯನಿರ್ವಹಣಾ ಸಮೀಕ್ಷೆಗಳನ್ನು, ಆರು ವಾರಗಳ ಒಳಗೆ ತಮ್ಮ ಪ್ರತಿಕ್ರಿಯೆಗಳನ್ನು ಕಳುಹಿಸಿಕೊಡುವಂತೆ ಕೋರಿ, ಸಂಬಂಧಿತ ಇಲಾಖೆಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ಜೂನ್ ಮತ್ತು ಸೆಪ್ಟೆಂಬರ್ 2014ರ ನಡುವಿನ ಅವಧಿಯಲ್ಲಿ ಕಳುಹಿಸಿಕೊಡಲಾಗಿದ್ದಿತು. ಈ ವರದಿಯಲ್ಲಿರುವ 14 ಅಂಶಗಳ ಪೈಕಿ ನಾಲ್ಕು ಅಂಶಗಳಿಗೆ ಸರ್ಕಾರದ ಉತ್ತರವನ್ನು ಸ್ವೀಕರಿಸಲಾಗಿದೆ. ಸ್ವೀಕರಿಸಲಾಗಿರುವ ಉತ್ತರಗಳನ್ನು ವರದಿಯಲ್ಲಿ ಸೂಕ್ತವಾಗಿ ಅಳವಡಿಸಿಕೊಳ್ಳಲಾಗಿದೆ.

### *1.7.3 ಲೆಕ್ಕಪರಿಶೋಧನಾ ವರದಿಗಳ ಮೇಲೆ ಅನುಸರಣಾ ಕ್ರಮಗಳು*

ಲೆಕ್ಕಪರಿಶೋಧನಾ ವರದಿಗಳಲ್ಲಿ ಗಮನಿಸಲಾಗಿರುವ ಅಂಶಗಳಿಗೆ ಕರ್ನಾಟಕ ಶಾಸಕಾಂಗದ ಸಚಿವಾಲಯಕ್ಕೆ, ಶಾಸಕಾಂಗದಲ್ಲಿ ಮಂಡಿಸಿದ ದಿನಾಂಕದಿಂದ ನಾಲ್ಕು ತಿಂಗಳ ಒಳಗೆ ಸರ್ಕಾರದ ಎಲ್ಲಾ ಇಲಾಖೆಗಳು, ಕ್ರಮಗಳನ್ನು ತೆಗೆದುಕೊಂಡ ಬಗ್ಗೆ ಟಿಪ್ಪಣಿಗಳ ನಮೂನೆಯಲ್ಲಿ ಸವಿವರ ವಿವರಣೆಗಳನ್ನು ಒದಗಿಸತಕ್ಕದ್ದು ಹಾಗೂ ಅವುಗಳ ಪ್ರತಿಗಳನ್ನು ಲೆಕ್ಕಪರಿಶೋಧನಾ ಕಛೇರಿಗೆ ಸಲ್ಲಿತಕ್ಕದ್ದು ಎಂದು ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಕಾರ್ಯವಿಧಾನಗಳ (ಆಂತರಿಕ ಕಾರ್ಯನಿರ್ವಹಣೆ) ನಿಯಮಗಳು, 1999, ಇದು ಅನುವು ಮಾಡಿದೆ.

ಆಡಳಿತಾತ್ಮಕ ಇಲಾಖೆಗಳು ಈ ನಿರ್ದೇಶನಗಳನ್ನು ಅನುಸರಿಸಲಿಲ್ಲ ಹಾಗೂ **ಅನುಬಂಧ 1.2ರಲ್ಲಿ** ವಿವರಿಸಿರುವಂತೆ ಎಂಟು ಇಲಾಖೆಗಳು 2003–04ರಿಂದ 2012–13ರ ಅವಧಿಯ 27 ಕಂಡಿಕೆಗಳಿಗೆ ಕ್ರಮಗಳನ್ನು ತೆಗೆದುಕೊಂಡ ಬಗ್ಗೆ ಟಿಪ್ಪಣಿಗಳನ್ನು ಸಲ್ಲಿಸಿರಲಿಲ್ಲ.

### *1.7.4 ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಚರ್ಚಿಸಬೇಕಿರುವ ಕಂಡಿಕೆಗಳು*

ಜುಲೈ 2014ರಲ್ಲಿದ್ದಂತೆ, ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಚರ್ಚಿಸಲು ಬಾಕಿಯಿರುವ ಕಂಡಿಕೆಗಳ ವಿವರಗಳನ್ನು (ಸಾಮಾನ್ಯ ಮತ್ತು ಸಾಂಖ್ಯಿಕಗಳನ್ನು ಹೊರತುಪಡಿಸಿದಂತೆ) **ಅನುಬಂಧ 1.3ರಲ್ಲಿ** ನೀಡಲಾಗಿದೆ.

********

# ಅಧ್ಯಾಯ 2

# ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ

## 2.1 ಕರ್ನಾಟಕದಲ್ಲಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಚಟುವಟಿಕೆಗಳ ಅನುಷ್ಠಾನ

# ಅಧ್ಯಾಯ 2

# ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ

## ಜಲ ಸಂಪನ್ಮೂಲ ಇಲಾಖೆ

## 2.1 ಕರ್ನಾಟಕದಲ್ಲಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಚಟುವಟಿಕೆಗಳ ಅನುಷ್ಠಾನ


**ಕಾರ್ಯನಿರ್ವಹಣಾ ಸಾರಾಂಶ**

ನೀರಾವರಿಗಾಗಿ ನೀರಿನ ಬಳಕೆಯಿಂದ ಅತಿಸಣ್ಣ ಮಟ್ಟದ ಮೂಲಸೌಕರ್ಯಗಳ ಮೂಲಕ ಬಳಸಲಾದ ನೀರಾವರಿ ಸಾಮರ್ಥ್ಯ ಮತ್ತು ಸೃಜಿಸಲಾದ ನೀರಾವರಿ ಸಾಮರ್ಥ್ಯದ ನಡುವಿನ ಅಂತರವನ್ನು ತುಂಬುವ ಉದ್ದೇಶದೊಂದಿಗೆ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಕಾರ್ಯಕ್ರಮವು ಭಾರತ ಸರ್ಕಾರದಿಂದ 1974ರಲ್ಲಿ ಪ್ರಾರಂಭವಾಯಿತು. ಕರ್ನಾಟಕದಲ್ಲಿನ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಚಟುವಟಿಕೆಗಳು ಹೊಲಗಾಲುವೆಗಳು, ಬಸಿಗಾಲುವೆಗಳ ನಿರ್ಮಾಣ, ಭೂಮಟ್ಟ ಮಾಡುವಿಕೆ, ಜೌಗು ಪ್ರದೇಶಗಳ ಮನರ್ ಸುಧಾರಣೆ, ಉಪನಾಲೆಗಳವರೆಗೆ ಹೊರತೂಬು ವ್ಯವಸ್ಥೆಯ ಕೊರತೆಗಳ ಸರಿಪಡಿಸುವಿಕೆ, ಮುಂತಾದ ಕ್ಷೇತ್ರಾಭಿವೃದ್ಧಿ ಕಾಮಗಾರಿಗಳಿಂದ ಕೂಡಿದೆ. ಅವುಗಳಲ್ಲಿ ವಿಸ್ತರಣಾ ಸೇವೆಗಳಾದ ಕ್ಷೇತ್ರ ಅಳವಡಿಕೆ ಪ್ರಯೋಗ, ಬೆಳೆ ಪ್ರದರ್ಶನ ಹಾಗೂ ಸಿಬ್ಬಂದಿ ಮತ್ತು ರೈತರಿಗೆ ತರಬೇತಿ, ಮುಂತಾದವು ಕೂಡ ಸೇರಿವೆ.

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಚಟುವಟಿಕೆಗಳ ಮೇಲಿನ ವೆಚ್ಚವು ಕ್ಷೇತ್ರಾಭಿವೃದ್ಧಿ ಕಾಮಗಾರಿಗಳಿಗಾಗಿ 50:50 ಅನುಪಾತದಲ್ಲಿ ಮತ್ತು ವಿಸ್ತರಣಾ ಸೇವೆಗಳಿಗಾಗಿ 75:25 ಅನುಪಾತದಲ್ಲಿ ಕೇಂದ್ರ ಮತ್ತು ರಾಜ್ಯದಿಂದ ಹಂಚಿಕೊಳ್ಳಲ್ಪಡುತ್ತವೆ. 2009–14ರಲ್ಲಿ, ಆರು ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಮತ್ತು ಮೂರು ನೀರಾವರಿ ನಿಗಮಗಳಲ್ಲಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರವು, ₹ 2,037.99 ಕೋಟಿಯನ್ನು ಆಯವ್ಯಯದಲ್ಲಿ ಹಂಚಿತು.

ಕರ್ನಾಟಕದಲ್ಲಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಚಟುವಟಿಕೆಗಳ ಅನುಷ್ಠಾನದ ಮೇಲಿನ 2009–14ರ ಅವಧಿಯನ್ನು ವ್ಯಾಪಿಸುವ ಒಂದು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ಫೆಬ್ರವರಿಯಿಂದ ಜುಲೈ 2014ರ ಅವಧಿಯಲ್ಲಿ ಮಾಡಲಾಯಿತು. ಲೆಕ್ಕಪರಿಶೋಧನೆಯಲ್ಲಿ ಕಂಡಬಂದ ಪ್ರಮುಖ ಅಂಶಗಳು ಈ ಕೆಳಗಿನಂತಿವೆ:

- ಹೊಲಗಾಲುವೆಗಳು ನಿರ್ಮಾಣವಾಗದ ಕಾರಣ, ಮಾರ್ಚ್ 2014ರಲ್ಲಿದ್ದಂತೆ, ಸೃಜಿಸಲಾದ ಮತ್ತು ಬಳಕೆಯಾದ ನೀರಾವರಿ ಸಾಮರ್ಥ್ಯಗಳ ನಡುವೆ 4.10 ಲಕ್ಷ ಹೆಕ್ಟೇರ್‌ನಷ್ಟು ಅಂತರವಿದ್ದಿತು. 2009–14ರ ಅವಧಿಯ 7.48 ಲಕ್ಷ ಹೆಕ್ಟೇರ್ ಸಂಚಿತ ಗುರಿಗೆ ಪ್ರತಿಯಾಗಿ ಕೇವಲ 2.25 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ (ಗುರಿಯ ಶೇಕಡ 30) ಹೊಲಗಾಲುವೆಗಳು ನಿರ್ಮಾಣವಾದವು.
- ಹಣಕಾಸಿನ ನಿರ್ವಹಣೆಯು ಕೊರತೆಯಿಂದ ಕೂಡಿತ್ತು ಏಕೆಂದರೆ ರಾಜ್ಯ ಸರ್ಕಾರವು, ಅನುಷ್ಠಾನಗೊಳಿಸುವ ಏಜೆನ್ಸಿಗಳು ಕೋರಿದ್ದಕ್ಕಿಂತ ಹೆಚ್ಚಿನ ಅನುದಾನಗಳನ್ನು ಹಂಚಿತು. ಫಲಿತವಾಗಿ, 2009–14ರ ಅವಧಿಯಲ್ಲಿ, ಹಂಚಿಕೆಯ ಶೇಕಡ 59ರಷ್ಟಿದ್ದ ₹ 1,206.52 ಕೋಟಿಯು ಅಧ್ಯರ್ಪಿತವಾದವು/ನಷ್ಟವಾದವು.
- ಹದಿನಾರು ಯೋಜನೆಗಳಲ್ಲಿ ಹೊಲಗಾಲುವೆಗಳ ನಿರ್ಮಾಣವಾದರೂ 2.71 ಲಕ್ಷ ಹೆಕ್ಟೇರ್ ನೀರಾವರಿಗೊಳಪಡದಿದ್ದುದು ₹ 915 ಕೋಟಿ ಬೆಳೆ ನಷ್ಟದಲ್ಲಿ ಪರಿಣಮಿಸಿತು.
- ಪರಸ್ಪರ ತಿಳುವಳಿಕೆಯ ಪ್ರಕಾರ ಗುರಿಯನ್ನು ಸಾಧಿಸುವಲ್ಲಿ ಕೊರತೆಯಿಂದ, 2009–14ರ ಅವಧಿಯಲ್ಲಿ ರಾಜ್ಯ ಸರ್ಕಾರದಿಂದ ಕೇಂದ್ರ ಸಹಾಯಿತ ಯೋಜನೆಗಳ ಸಂಬಂಧದಲ್ಲಿ ಮಾಡಲ್ಪಟ್ಟ ₹ 130 ಕೋಟಿ ವೆಚ್ಚವನ್ನು ಭಾರತ ಸರ್ಕಾರವು ಮನರ್ಭರ್ತಿ ಮಾಡಲಿಲ್ಲ. ಎಲ್ಲಾ 15 ಯೋಜನೆಗಳಲ್ಲೂ ಗುರಿಗಳನ್ನು ಸಾಧಿಸುವಲ್ಲಿ ಕೊರತೆಯಿಂದ ₹ 733 ಕೋಟಿ ಕೇಂದ್ರ ಸಹಾಯವು ಸಹ ಬಳಕೆಯಾಗಲಿಲ್ಲ.
- ನೀರು ನಿರ್ವಹಣೆ ಮತ್ತು ಅಚ್ಚುಕಟ್ಟು ಪ್ರದೇಶ ವ್ಯವಸ್ಥಾಪನೆಯಲ್ಲಿ ರೈತರ ಭಾಗವಹಿಸುವಿಕೆಯನ್ನು ನಿಶ್ಚಯಿಸುವ ಸಹಭಾಗಿತ್ವದ ನೀರಾವರಿ ನಿರ್ವಹಣೆಯ ಉದ್ದೇಶವು ಈಡೇರಲಿಲ್ಲ. ಏಕೆಂದರೆ ಅವು ನೀರು ಬಳಕೆದಾರರ ಸಹಕಾರ ಸಂಘಗಳಿಂದ ನಿರ್ವಹಿಸಲ್ಪಡುತ್ತಿರಲಿಲ್ಲ.

## 2.1.1 ಪೀಠಿಕೆ

ಭಾರಿ ಮತ್ತು ಮಧ್ಯಮ ಪ್ರಮಾಣದ ನೀರಾವರಿ ಯೋಜನೆಗಳ ಅಚ್ಚುಕಟ್ಟು ಪ್ರದೇಶಗಳ ಸಂಘಟಿತ ಹಾಗೂ ಸಮಗ್ರ ಅಭಿವೃದ್ಧಿಗಾಗಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಕಾರ್ಯಕ್ರಮವನ್ನು ಕರ್ನಾಟಕದಲ್ಲಿ 1974ರಲ್ಲಿ ಜಾರಿಗೊಳಿಸಲಾಯಿತು. ಈ ಉದ್ದೇಶಕ್ಕಾಗಿ, ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಅಧಿನಿಯಮವನ್ನು 1980ರಲ್ಲಿ ಜಾರಿಗೊಳಿಸಲಾಯಿತು ಹಾಗೂ ತುಂಗಭದ್ರಾ ಯೋಜನೆ (ಮುನಿರಾಬಾದ್), ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು (ಬೆಳಗಾವಿ), ಕಾವೇರಿ ಜಲಾನಯನ ಯೋಜನೆಗಳು (ಮೈಸೂರು), ಕೃಷ್ಣಾ ಮೇಲ್ದಂಡೆ ಯೋಜನೆ (ಭೀಮರಾಯನಗುಡಿ), ಭದ್ರಾ ಯೋಜನೆ (ಶಿವಮೊಗ್ಗ) ಮತ್ತು ನೀರಾವರಿ ಯೋಜನಾ ವಲಯ (ಕಲ್ಬುರ್ಗಿ), ಇವುಗಳಿಗಾಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರಗಳನ್ನು (ಕಾಡಾ) 1974 ಮತ್ತು 2000ದ ನಡುವೆ ರಚಿಸಲಾಯಿತು. ಮಾರ್ಚ್ 2014ರಲ್ಲಿದ್ದಂತೆ, 35 ಲಕ್ಷ ಹೆಕ್ಟೇರ್‌ಗಳಷ್ಟು ನಿವ್ವಳ ಅಚ್ಚುಕಟ್ಟು ಪ್ರದೇಶದೊಂದಿಗೆ, ಕರ್ನಾಟಕದಲ್ಲಿ 101 ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿದ್ದವು. ಇವುಗಳ ಪೈಕಿ, 76 ಯೋಜನೆಗಳು ಕಾಡಾಗಳ ನಿಯಂತ್ರಣಲ್ಲಿದ್ದವು ಹಾಗೂ ಉಳಿದ 25 ಯೋಜನೆಗಳು ನೀರಾವರಿ ನಿಗಮಗಳ ನಿಯಂತ್ರಣದಲ್ಲಿದ್ದವು.

ಹೊಲಗಾಲುವೆಗಳು ಮತ್ತು ಬಸಿನಾಲೆಗಳ ನಿರ್ಮಾಣ, ಜೌಗು ಪ್ರದೇಶಗಳ ಪುನರ್ಸುಧಾರಣೆ, ವಾರಾಬಂದಿಯನ್ನು[6] ಅಳವಡಿಸಿಕೊಳ್ಳುವುದು, ಇತ್ಯಾದಿಗಳನ್ನು ಕಾಡಾಗಳ ಕಾರ್ಯಚಟುವಟಿಕೆಗಳು ಒಳಗೊಂಡಿವೆ.

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ಜಲ ನಿರ್ವಹಣಾ ಕಾರ್ಯಕ್ರಮವನ್ನು ರಾಜ್ಯ ವಲಯ ಯೋಜನೆಗಳನ್ನಾಗಿ 2008–09ರಿಂದ ಕಾರ್ಯಗತಗೊಳಿಸಲಾಗುತ್ತಿದೆ. ಕಾರ್ಯಕ್ರಮವನ್ನು ಜುಲೈ 2010 ಮತ್ತು ಡಿಸೆಂಬರ್ 2013ರಲ್ಲಿ ಮಾರ್ಪಡಿಸಲಾಯಿತು. ಮಾರ್ಪಡಿಸಲಾದ ಮಾರ್ಗಸೂಚಿಗಳ ಪ್ರಕಾರ ಪ್ರತಿಯೊಂದು ಯೋಜನೆಗೂ ಕರ್ನಾಟಕ ಸರ್ಕಾರವು ಕೇಂದ್ರ ಸರ್ಕಾರದ ಜೊತೆ ಒಂದು ಪರಸ್ಪರ ತಿಳುವಳಿಕೆ ಪತ್ರವನ್ನು, ಅದರಲ್ಲಿ ನಮೂದಿಸಲಾಗಿರುವ ಗುರಿಗಳ ಕಟ್ಟುನಿಟ್ಟಾದ ಅನುಷ್ಠಾನಕ್ಕಾಗಿ, ಮಾಡಿಕೊಳ್ಳಬೇಕಾಗಿದ್ದಿತು. ಕಾಡಾದ ಅಡಿಯಲ್ಲಿ ಒಳಗೊಂಡಿದ್ದ 16 ಭಾಗಗಳ ಪೈಕಿ ಎರಡು[7] ಭಾಗಗಳ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ತನ್ನ ಪಾಲಿನ ವೆಚ್ಚವನ್ನು ಭರಿಸುವುದಕ್ಕಾಗಿ ಕರ್ನಾಟಕ ಸರ್ಕಾರವು 2011–12 ಸಾಲಿನಿಂದ ನಬಾರ್ಡ್‌ನಿಂದಲೂ[8] ಹಣಕಾಸಿನ ನೆರವನ್ನು ಪಡೆದುಕೊಂಡಿದ್ದಿತು. 2009–14ರ ಅವಧಿಯಲ್ಲಿ, ಕರ್ನಾಟಕದಲ್ಲಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಚಟುವಟಿಕೆಗಳ ಮೇಲೆ ₹ 831.47 ಕೋಟಿ ವೆಚ್ಚವನ್ನು ಭರಿಸಲಾಗಿದ್ದಿತು.

ಒಂದು ಯೋಜನೆಯ ಅಚ್ಚುಕಟ್ಟು ಪ್ರದೇಶದ ಅಭಿವೃದ್ಧಿಯು ಪೂರ್ಣಗೊಂಡನಂತರ ವಾಸ್ತವಿಕ ನೀರಾವರಿಯು ಕೈಗೂಡುತ್ತದೆ, ಇದು ಬೆಳೆ ಉತ್ಪಾದನೆಯು ಅಧಿಕವಾಗಲು ಸಹಾಯ ಮಾಡುವುದಲ್ಲದೇ ಜನರಿಗೆ ಆಹಾರ ಭದ್ರತೆಯನ್ನು ಒದಗಿಸುತ್ತದೆ. ಅದು ರೈತರ ಸಾಮಾಜಿಕ–ಆರ್ಥಿಕ ಸ್ಥಿತಿಯನ್ನು ಸುಧಾರಿಸುವಲ್ಲಿಯೂ ಒಂದು ಪ್ರಮುಖ ಪಾತ್ರವನ್ನು ವಹಿಸುತ್ತದೆ.

## 2.1.2 ಸಾಂಸ್ಥಿಕ ರಚನೆ

ಸರ್ಕಾರದ ಮಟ್ಟದಲ್ಲಿ, ಜಲ ಸಂಪನ್ಮೂಲ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಚಟುವಟಿಕೆಗಳನ್ನು ಒಟ್ಟಾರೆಯಾಗಿ ಕಾರ್ಯಗತಗೊಳಿಸಲು ಜವಾಬ್ದಾರಿಯುತರಾಗಿರುತ್ತಾರೆ. ಅವರು, ಜಲ ಸಂಪನ್ಮೂಲ ಇಲಾಖೆಯ ಕಾರ್ಯದರ್ಶಿಯವರ ಸಹಾಯದಿಂದ ಕಾರ್ಯನಿರ್ವಹಿಸುತ್ತಾರೆ. ಕಾಡಾದ ಒಟ್ಟಾರೆ ನಿರ್ವಹಣಾ ಜವಾಬ್ದಾರಿಯು

[6] ಆವರ್ತನೀಯ ನೀರು ಸರಬರಾಜು ವ್ಯವಸ್ಥೆ
[7] ಸುಧಾರಣೆ ಮತ್ತು ಆಯಕಟ್ಟು ರಸ್ತೆಗಳು
[8] ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗಾಗಿ ರಾಷ್ಟ್ರೀಯ ಬ್ಯಾಂಕು

ಪ್ರತಿಯೊಂದು ಕಾಡಾದ ಆಡಳಿತಾಧಿಕಾರಿಯವರಲ್ಲಿರುತ್ತದೆ. ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಚಟುವಟಿಕೆಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಡಿಸೆಂಬರ್ 2012ರಲ್ಲಿ, ಇಬ್ಬರು ಜಂಟಿ ನಿರ್ದೇಶಕರ ಸಹಾಯದಿಂದ ಕಾರ್ಯನಿರ್ವಹಿಸುವ ಓರ್ವ ನಿರ್ದೇಶಕರ ನೇತೃತ್ವವನ್ನು ಹೊಂದಿರುವ ಅಚ್ಚುಕಟ್ಟು ಪ್ರದೇಶಾಭಿವದ್ಧಿ ಪ್ರಾಧಿಕಾರಗಳ ಒಂದು ನಿರ್ದೇಶನಾಲಯವನ್ನು ರಾಜ್ಯ ಮಟ್ಟದಲ್ಲಿ ಹಾಗೂ ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಸಹಾಯದಿಂದ ಕಾರ್ಯನಿರ್ವಹಿಸುವ ಒಂಬತ್ತು ವಿಭಾಗಗಳನ್ನು ಕ್ಷೇತ್ರ ಮಟ್ಟದಲ್ಲಿ ಸ್ಥಾಪಿಸಲಾಯಿತು.

### 2.1.3 ಲೆಕ್ಕಪರಿಶೋಧನೆಯ ಉದ್ದೇಶಗಳು

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಉದ್ದೇಶಗಳು ಈ ಕೆಳಗಿನವುಗಳನ್ನು ನಿರ್ಧಾರಣೆ ಮಾಡುವುದಾಗಿದ್ದಿತು:

- ಯೋಜನೆ ಹಾಗೂ ಆಯವ್ಯಯ ನಿಯಂತ್ರಣಗಳು ಸಮರ್ಥ ಹಾಗೂ ಪರಿಣಾಮಕಾರಿಯಾಗಿದ್ದವು;
- ಆರೀತಿ ರೂಪಿಸಲಾದ ಯೋಜನೆಗಳ ವಾಸ್ತವಿಕ ಅನುಷ್ಠಾನದ ಫಲಿತಾಂಶಗಳು;
- ನೀರು ಬಳಕೆದಾರರ ಸಹಕಾರ ಸಂಘಗಳು ವ್ಯವಸ್ಥೆಯನ್ನು ವಹಿಸಿಕೊಂಡನಂತರ, ಸಮರ್ಪಕ ಜಲ ವ್ಯವಸ್ಥಾಪನೆ ಹಾಗೂ ನಿರ್ಮಾಣಗಳ ನಿರ್ವಹಣೆಗಾಗಿ ಸಹಭಾಗಿತ್ವದ ನೀರಾವರಿ ವ್ಯವಸ್ಥಾಪನೆಯ ಫಲಿತಾಂಶಗಳು.

### 2.1.4 ಲೆಕ್ಕಪರಿಶೋಧನೆಯ ವ್ಯಾಪ್ತಿ ಹಾಗೂ ವಿಧಾನ

ಕಾಡಾಗಳ ನಿರ್ದೇಶನಾಲಯ ಮತ್ತು ಜಲ ಸಂಪನ್ಮೂಲ ಇಲಾಖೆಯ ಕಾರ್ಯದರ್ಶಿಯವರ ದಾಖಲೆಗಳನ್ನು ಸಮೀಕ್ಷಿಸುವುದರ ಜೊತೆಗೆ, ಆರು ಕಾಡಾಗಳ ಪೈಕಿ ನಾಲ್ಕು[9] ಕಾಡಾಗಳಿಗೆ ಸಂಬಂಧಿಸಿದ ದಾಖಲೆಗಳನ್ನು 2009–10ರಿಂದ 2013–14ರ ಅವಧಿಯನ್ನು ವ್ಯಾಪಿಸಿದಂತೆ ಸವಿವರವಾಗಿ ಪರಿಶೀಲಿಸಲಾಯಿತು. ಮಾದರಿ ಆಯ್ಕೆಯು ಭೌಗೋಳಿಕ ಸ್ಥಳ, ಭರಿಸಲಾದ ವೆಚ್ಚ ಹಾಗೂ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಚಟುವಟಿಕೆಗಳಿಗಾಗಿ ಕೇಂದ್ರ ಸರ್ಕಾರದ ಸಹಾಯಧನ, ಇವುಗಳನ್ನು ಪರಿಗಣಿಸಿ ವಿವೇಚನಾತ್ಮಕ ಮಾದರಿ ಆಯ್ಕೆ ಪದ್ಧತಿಯ ಆಧಾರದ ಮೇರೆಗೆ ಆಗಿದ್ದಿತು. ನಮೂನೆಗಳನ್ನು ನೀಡುವ ಮೂಲಕ ಎಲ್ಲಾ ಕಾಡಾಗಳಿಂದ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆಯೂ ಮಾಹಿತಿಯನ್ನು ಪಡೆದುಕೊಳ್ಳಲಾಯಿತು. ಉಗ್ರಾಣಗಳ ನಿರ್ಮಾಣ, ವಸತಿ ಸೌಕರ್ಯ, ವಿಶೇಷ ಅಭಿವೃದ್ಧಿ ಕಾರ್ಯಕ್ರಮ ಹಾಗೂ ಸೃಷ್ಟಿಸಲಾದ ನೀರಾವರಿ ಸಾಮರ್ಥ್ಯದ ಜಂಟಿ ತನಿಖೆ, ಇವುಗಳಿಗೆ ಸಂಬಂಧಿಸಿದ ಚಟುವಟಿಕೆಗಳು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯಲ್ಲಿ ವ್ಯಾಪಿಸಲ್ಪಟ್ಟಿಲ್ಲ.

ಪ್ರವೇಶ ಸಭೆಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಜಲ ಸಂಪನ್ಮೂಲ ಇಲಾಖೆ, ಕರ್ನಾಟಕ, ಇವರ ಜೊತೆ 4 ಜೂನ್ 2014ರಂದು ನಡೆಸಲಾಯಿತು ಹಾಗೂ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಉದ್ದೇಶಗಳು, ವ್ಯಾಪ್ತಿ, ಮಾನದಂಡಗಳನ್ನು ಚರ್ಚಿಸಲಾಯಿತು. ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳನ್ನು 9 ಅಕ್ಟೋಬರ್ 2014ರಂದು ನಡೆದ ನಿರ್ಗಮನ ಸಭೆಯಲ್ಲಿ ಚರ್ಚಿಸಲಾಯಿತು. ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ನಡೆಸುವಲ್ಲಿ ಜಲ ಸಂಪನ್ಮೂಲ ಇಲಾಖೆಯು ನೀಡಿದ ಸಹಕಾರಕ್ಕಾಗಿ ಲೆಕ್ಕಪರಿಶೋಧನೆಯು ಈ ಮೂಲಕ ಕೃತಜ್ಞತೆಯನ್ನು ಸಲ್ಲಿಸುತ್ತಿದೆ.

[9] ಬೆಳಗಾವಿ, ಮುನಿರಾಬಾದ್, ಮೈಸೂರು ಹಾಗೂ ಶಿವಮೊಗ್ಗ

## 2.1.5 ಲೆಕ್ಕಪರಿಶೋಧನೆಯ ಮಾನದಂಡಗಳು

ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳನ್ನು ಈ ಕೆಳಗಿನ ಮಾನದಂಡಗಳಿಗೆ ಸಂಬಂಧಿಸಿದಂತೆ ಗುರುತಿಸಲಾಯಿತು:

- ❖ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಅಧಿನಿಯಮ, 1980;
- ❖ ಕರ್ನಾಟಕ ಸರ್ಕಾರ ಮತ್ತು ಭಾರತ ಸರ್ಕಾರ ನೀಡಿದ್ದ ಮಾರ್ಗಸೂಚಿಗಳು ಮತ್ತು ಕೈಪಿಡಿಗಳು;
- ❖ ಕರ್ನಾಟಕ ನೀರಾವರಿ ಅಧಿನಿಯಮ, 1965;
- ❖ ರಾಷ್ಟ್ರೀಯ/ಕರ್ನಾಟಕ ಜಲನೀತಿ.

## ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳು

### *2.1.6.1 ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಚಟುವಟಿಕೆಗಳ ಸ್ಥಿತಿಗತಿ*

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ, ಭಾರತ ಸರ್ಕಾರದ ಯೋಜಿತ ಅಭಿವೃದ್ಧಿಯ ಕೇಂದ್ರ–ರಾಜ್ಯ ಪಾಲುದಾರಿಕೆಯಾಗಿ ಇಡಲಾದ ಪ್ರಾರಂಭಿಕ ಹೆಜ್ಜೆಗಳು, ನೀರಾವರಿಯ ಅತ್ಯಧಿಕ ಪ್ರಯೋಜನಗಳನ್ನು ಯಾವುದೇ ವಿಳಂಬಗಳಿಲ್ಲದೆಯೇ ಪಡೆಯುವುದಕ್ಕಾಗಿ ನಾಲೆಗಳ ಹಾಗೂ ಕ್ಷೇತ್ರಾಭಿವೃದ್ಧಿ ಕಾಮಗಾರಿಗಳೆರಡೂ ಏಕಕಾಲಿಕವಾಗಿ ಪೂರ್ಣಗೊಳ್ಳುವುದನ್ನು ಹೇಳಿದ್ದವು. ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಕಾರ್ಯಕ್ರಮಗಳನ್ನು 1974ರಿಂದ ಮುಂದಕ್ಕೆ ಕಾರ್ಯಗತಗೊಳಿಸಿದ್ದಾಗ್ಯೂ, ಅಂತರವಿದ್ದಿತಾದ್ದರಿಂದ ಫಲಿತಾಂಶಗಳು ಉತ್ತೇಜನಕಾರಿಯಾಗಿರಲಿಲ್ಲ.

ಮಾರ್ಚ್ 2009ರಲ್ಲಿದ್ದಂತೆ, ಸೃಷ್ಟಿಸಲಾದ ನೀರಾವರಿ ಸಾಮರ್ಥ್ಯ (27.67 ಲಕ್ಷ ಹೆಕ್ಟೇರ್) ಹಾಗೂ ಬಳಸಿಕೊಳ್ಳಲಾದ ನೀರಾವರಿ ಸಾಮರ್ಥ್ಯದ (22.02 ಲಕ್ಷ ಹೆಕ್ಟೇರ್) ನಡುವೆ 5.65 ಲಕ್ಷ ಹೆಕ್ಟೇರ್‌ಗಳ ಅಂತರವಿದ್ದಿತು. ಬಳಸದ 5.65 ಲಕ್ಷ ಹೆಕ್ಟೇರ್ ವಿಸ್ತೀರ್ಣಕ್ಕೆ ಕ್ಷೇತ್ರಾಭಿವೃದ್ಧಿ ಕಾಮಗಾರಿಗಳ ಯೋಜನೆಯನ್ನು ತದನಂತರದ ವರ್ಷಗಳಲ್ಲಿ ತಯಾರಿಸಬೇಕಿದ್ದಿತು ಹಾಗೂ ನಿರ್ಮಿಸಬೇಕಿದ್ದಿತು; ಇವುಗಳ ಫಲಿತಾಂಶಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ:

### *2.1.6.2 ಯೋಜನೆ*

ವಾಸ್ತವಿಕ ಬಳಕೆಗಾಗಿ ಸೃಷ್ಟಿಸಲಾದ ಜಲ ಸಂಪನ್ಮೂಲಗಳ ಬಳಕೆಯಲ್ಲಿನ ಒಟ್ಟಾರೆ ದಕ್ಷತೆಯನ್ನು ಸಾಧಿಸುವಲ್ಲಿ, ಕ್ಷೇತ್ರಗಳವರೆಗೂ ನೀರಾವರಿ ನೀರಿನ ಹರಿವು ಹಾಗೂ ಕ್ಷೇತ್ರಗಳ ವಿವಿಧ ಮಾಲೀಕರುಗಳಿಗೆ ಅದರ ವಿತರಣೆಯು ಪ್ರಮುಖ ಅಂಶವಾಗಿದೆ. ಒಂದು ಯೋಜಿಸಲಾದ ಮಾರ್ಗವು, ಪ್ರದೇಶಗಳನ್ನು ಗುರುತಿಸುವಲ್ಲಿ ಹಾಗೂ ಹಂತಾನುಹಂತವಾಗಿ ಸಮಸ್ಯಾತ್ಮಕ ಕ್ಷೇತ್ರಗಳನ್ನು ಎದುರಿಸುವಲ್ಲಿ ಆದ್ಯತೆಯನ್ನು ನೀಡುವ ಸಲುವಾಗಿ ಒಂದು ದತ್ತಸಂಚಯವನ್ನು ಸೃಷ್ಟಿಸುವ ಸಲುವಾಗಿ ಸರ್ಕಾರದ ಮಧ್ಯಸ್ಥಿಕೆಯ ಅಗತ್ಯತೆಯನ್ನು ಹೊಂದಿರುತ್ತದೆ.

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಅಧಿನಿಯಮ, 1980ರ ಪರಿಚ್ಛೇದ 12ರ ಅಡಿಯಲ್ಲಿ, ಪ್ರತಿಯೊಂದು ಕಾಡಾವೂ ಅಚ್ಚುಕಟ್ಟು ಪ್ರದೇಶದ ಅಥವಾ ಅದರ ಯಾವುದೇ ಹಂತದ ಸಮಗ್ರ ಅಭಿವೃದ್ಧಿಗಾಗಿ ಸೂಚಿತ ಮಾದರಿಯಲ್ಲಿ ಒಂದು ಯೋಜನೆಯನ್ನು ತಯಾರಿಸತಕ್ಕದ್ದು. ಆ ರೀತಿ ತಯಾರಿಸಲಾದ ಯಾವುದೇ ಯೋಜನೆಯು, ಕ್ಷೇತ್ರವನ್ನು ವ್ಯಾಪಿಸಲು ಪ್ರಸ್ತಾವಿಸಲ್ಪಟ್ಟ ಹಂತಗಳು, ಯೋಜನೆಯನ್ನು ಹಂತಗೊಳಿಸುವಿಕೆ, ಪ್ರಸ್ತಾವಿತ ಕ್ಷೇತ್ರದ ನಕಾಶೆ, ವ್ಯಾಪಿಸಲ್ಪಡುವ ಸರ್ವೇ ಸಂಖ್ಯೆಗಳು, ಕಾರ್ಯಗತಗೊಳಿಸಬೇಕಾದ ಕಾಮಗಾರಿಗಳು, ಇತ್ಯಾದಿಗಳ ಬಗ್ಗೆ ಸ್ಪಷ್ಟವಾಗಿ ತಿಳಿಸತಕ್ಕದ್ದು.

ಪರೀಕ್ಷಾ ತನಿಖೆ ಮಾಡಲಾದ ಯಾವುದೇ ಕಾಡಾಗಳೂ, ಅವು ವಾರ್ಷಿಕ ಕ್ರಿಯಾ ಯೋಜನೆಗಳನ್ನು ತಯಾರಿಸಿದ್ದರೂ, ಅಧಿನಿಯಮದ ಅಡಿಯಲ್ಲಿ ನಿರ್ದಿಷ್ಟಪಡಿಸಿರುವಂತೆ ಒಂದು ಸಮಗ್ರ/ದೀರ್ಘಾವಧಿ ದೃಷ್ಟಿಕೋನದ ಯೋಜನೆಯನ್ನು ತಯಾರಿಸಿರಲಿಲ್ಲ ಎನ್ನುವುದನ್ನು ನಾವು ಗಮನಿಸಿದೆವು.

ಸಮೀಕ್ಷೆ ಹಾಗೂ ಯೋಜನೆಗಳನ್ನು ತಯಾರಿಸುವುದಕ್ಕಾಗಿ ಕ್ರೋಢೀಕೃತ ಪ್ರಸ್ತಾವನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ ಹಾಗೂ ಅಂತಿಮ ಹಂತದಲ್ಲಿವೆಯೆಂದು ಕಾಡಾ, ಮುನಿರಾಬಾದ್ ಉತ್ತರಿಸಿತು (ಜೂನ್ 2014). ಯೋಜನೆಯ ಈ ಮುಂಚಿನ ಹಂತಗಳ ಸಮಗ್ರ ಪ್ರಧಾನ ಯೋಜನೆಯನ್ನು ತಯಾರಿಸುವುದರಿಂದ ಯಾವ ಉದ್ದೇಶವೂ ಈಡೇರುವುದಿಲ್ಲವೆಂದು ಕಾಡಾ, ಮೈಸೂರು ಉತ್ತರಿಸಿತು (ಜೂನ್ 2014). ಸಮಗ್ರ ಸಮೀಕ್ಷೆಗಳನ್ನು ನಡೆಸಲಾಗಿಲ್ಲವೆಂದು ಕಾಡಾ, ಶಿವಮೊಗ್ಗ ಮತ್ತು ಬೆಳಗಾವಿ ಉತ್ತರಿಸಿದವು (ಜುಲೈ ಮತ್ತು ಅಕ್ಟೋಬರ್ 2014).

ಆದ್ದರಿಂದ, ಒಂದು ಸಮಗ್ರ ಯೋಜನೆ ಹಾಗೂ ಸಮೀಕ್ಷೆಯ ಅನುಪಸ್ಥಿತಿಯಲ್ಲಿ, ವಿವಿಧ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಚಟುವಟಿಕೆಗಳಿಗೆ ವಾರ್ಷಿಕ ಗುರಿಗಳನ್ನು ನಿಗದಿಪಡಿಸಿದ್ದುದು, ಅದರ ಅನುಷ್ಠಾನದ ಮೇಲೆ ನಕಾರಾತ್ಮಕ ಪರಿಣಾಮ ಉಂಟು ಮಾಡುವಂತೆ, ವಾಸ್ತವಿಕವಾಗಿರಲಿಲ್ಲ.

### *2.1.6.3 ಹಣಕಾಸಿನ ಹಂಚಿಕೆ*

ಕಾಡಾಗಳ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗುವುದಕ್ಕಾಗಿ ಕೇಂದ್ರ ಮತ್ತು ರಾಜ್ಯ ಯೋಜನೆಗಳಾದ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ಜಲ ನಿರ್ವಹಣೆ, ವಿಶೇಷ ಅಭಿವೃದ್ಧಿ ಯೋಜನೆ, ವಿಶೇಷ ಘಟಕ ಯೋಜನೆ, ಬುಡಕಟ್ಟು ಉಪ–ಯೋಜನೆ, ನಬಾರ್ಡ್ ಸಹಾಯದ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಧಿ XVI ಕಾಮಗಾರಿಗಳಿಗಾಗಿ ನಿಧಿಯನ್ನು ರಾಜ್ಯ ಸರ್ಕಾರದ ಆಯವ್ಯಯದ ಮೂಲಕ ಒದಗಿಸಲಾಗುವುದು. ಬಿಡುಗಡೆಯಾದ ಈ ನಿಧಿಯನ್ನು ವೆಚ್ಚಗಳನ್ನು ಭರಿಸುವುದಕ್ಕಾಗಿ ಕಾಡಾಗಳ ಬ್ಯಾಂಕ್ ಖಾತೆಗಳಲ್ಲಿ ಇಡಲಾಗುವುದು. 2009–14ರಲ್ಲಿ ಕಾಡಾಗಳು ಕೋರಿದ್ದ ನಿಧಿ, ರಾಜ್ಯ ಸರ್ಕಾರವು ಆಯವ್ಯಯದಲ್ಲಿ ಮಾಡಿದ್ದ ಹಂಚಿಕೆ, ನಿಧಿಗಳ ಬಿಡುಗಡೆ ಮತ್ತು ಬಳಕೆ, ಕಾಡಾಗಳಿಂದ ಜಮಾ ಮಾಡಲ್ಪಟ್ಟ ಹಾಗೂ ನಷ್ಟವಾದ/ಅಧ್ಯರ್ಪಿತವಾದ ನಿಧಿಯ ವಿವರಗಳನ್ನು **ಕೋಷ್ಟಕ 2.1**ರಲ್ಲಿ ತೋರಿಸಲಾಗಿದೆ:

**ಕೋಷ್ಟಕ 2.1: ಆಯವ್ಯಯ ಹಂಚಿಕೆ, ಬಿಡುಗಡೆಯಾದ ಮೊತ್ತ ಮತ್ತು ವೆಚ್ಚದ ವಿವರಗಳು**

(₹ ಕೋಟಿಯಲ್ಲಿ)

| ಕಾಡಾದ ಹೆಸರು | ಕೋರಿದ್ದ ಅನುದಾನ | ಆಯವ್ಯಯ ಹಂಚಿಕೆ | ಬಿಡುಗಡೆಯಾದ ಮೊತ್ತ | ಬಳಕೆಯಾದ ಮೊತ್ತ | ಬಳಸದ ಅನುದಾನ (ಅಧ್ಯರ್ಪಣೆ/ ನಷ್ಟ) | ಜಮಾ | ಬಿಡುಗಡೆಗೆ (4) ಬಳಕೆಯ (5) ಶೇಕಡಾವಾರು | ಕೋರಿದ್ದ ಅನುದಾನಕ್ಕೆ ಬಳಕೆಯಾದ ನಿಧಿಯ ಶೇಕಡಾವಾರು |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| ಮೈಸೂರು | 159.65 | 230.44 | 184.98 | 153.61 | 76.83 | 32.03 | 83 | 96 |
| ಭೀಮರಾಯನಗುಡಿ | 355.95 | 392.54 | 108.28 | 90.09 | 302.45 | 19.16 | 83 | 25 |
| ಮುನಿರಾಬಾದ್ | 509.07 | 349.56 | 222.28 | 206.97 | 142.59 | 14.71 | 93 | 41 |
| ಶಿವಮೊಗ್ಗ | 263.35 | 260.55 | 173.66 | 161.07 | 99.48 | 10.35 | 93 | 61 |
| ಬೆಳಗಾವಿ | 179.89 | 563.90 | 179.89 | 134.61 | 429.29 | 44.33 | 75 | 75 |
| ಕಲ್ಬುರ್ಗಿ | 171.45 | 241.00 | 119.28 | 85.12 | 155.88 | 34.76 | 71 | 50 |
| **ಒಟ್ಟು** | **1,639.29** | **2,037.99** | **988.37** | **831.47** | **1,206.52** | **155.34** | **84** | |

(ಆಧಾರ: ಇಲಾಖೆಯಿಂದ ಸಲ್ಲಿಸಲಾದ ಮಾಹಿತಿ)

ಮೇಲಿನ ಕೋಷ್ಟಕದಿಂದ, ಈ ಕೆಳಗಿನ ಹಣಕಾಸು ನಿರ್ವಹಣೆಯ ಲೋಪದೋಷಗಳನ್ನು ಗಮನಿಸಲಾಯಿತು;

- ❖ ನಾಲ್ಕು[10] ಕಾಡಾಗಳಿಗೆ ಸಂಬಂಧಿಸಿದಂತೆ, ಈ ಕಾಡಾಗಳು ಕೋರಿದ್ದ ನಿಧಿಗಿಂತ ₹ 560.94 ಕೋಟಿ ಮೊತ್ತದಷ್ಟು ಅಧಿಕ ಮೊತ್ತವನ್ನು ಸರ್ಕಾರವು ಹಂಚಿಕೆ ಮಾಡಿದ್ದಿತು.
- ❖ ಎಲ್ಲಾ ಕಾಡಾಗಳಿಂದ ಬಳಸಲ್ಪಟ್ಟ ಮೊತ್ತವು ಕೋರಲಾಗಿದ್ದ ಮೊತ್ತಕ್ಕಿಂತ ಕಡಿಮೆಯಿದ್ದುದು, ಕಳಪೆ ಆಯವ್ಯಯ ಯೋಜನೆಯನ್ನು ಸೂಚಿಸುತ್ತಿದ್ದಿತು.
- ❖ ಕಾಡಾಗಳು ಆಯವ್ಯಯ ಹಂಚಿಕೆಯ ಶೇಕಡಾ 41ರಷ್ಟು ನಿಧಿಯನ್ನು ಮಾತ್ರ ಬಳಸಿಕೊಂಡಿದ್ದು, ಗುರಿಗಳ ಪ್ರಕಾರ ಕಾರ್ಯಕ್ರಮದ ಅನುಷ್ಠಾನದ ಮೇಲೆ ಪ್ರತಿಕೂಲ ಪರಿಣಾಮ ಬೀರಿತು.
- ❖ ಕಾಡಾಗಳಿಂದ ನಿಧಿಯ ಕಡಿಮೆ ಪ್ರಮಾಣದ ಬಳಕೆಗೆ ಕಾರಣಗಳನ್ನು ವಿಶ್ಲೇಷಿಸುವುದಕ್ಕಾಗಿ ಪ್ರಯತ್ನಗಳನ್ನು ಮಾಡಿರಲಿಲ್ಲವಾದ್ದರಿಂದ, ಸರ್ಕಾರವು ಪ್ರತೀ ವರ್ಷವೂ ನಿಧಿಯನ್ನು ಅಧಿಕ ಪ್ರಮಾಣದಲ್ಲಿ ಹಂಚಿಕೆ ಮಾಡುತ್ತಿದ್ದುದು ತತ್ಪೂರ್ತತೆಯನ್ನು ಸೂಚಿಸುತ್ತಿದ್ದಿತು.
- ❖ ಸರ್ಕಾರದಿಂದ ಬಿಡುಗಡೆಯಾದ ₹ 988.37 ಕೋಟಿಯ ಪೈಕಿ ಕೇವಲ ₹ 831.47 ಕೋಟಿಯು ಕಾಡಾಗಳಿಂದ ಬಳಸಲ್ಪಟ್ಟು, ₹ 155.34 ಕೋಟಿಯು ಸರ್ಕಾರದ ಲೆಕ್ಕಕ್ಕೆ ಪುನರ್–ಜಮೆಯಾಯಿತು ಹಾಗೂ ಬಾಕಿ ₹ 1.56 ಕೋಟಿ ಮೊತ್ತವು ಕಾಡಾಗಳಿಂದ ಉಳಿಸಿಕೊಳ್ಳಲ್ಪಟ್ಟವು.
- ❖ ರಾಜ್ಯದ ಪಾಲಿನ ವೆಚ್ಚವನ್ನು ಭರಿಸುವುದಕ್ಕಾಗಿ 2011–13ರಲ್ಲಿ[11] ನಬಾರ್ಡ್‌ನ ಸಹಾಯಧನದ ಅಡಿಯಲ್ಲಿನ ₹ 262.64 ಕೋಟಿ ಆಯವ್ಯಯ ಹಂಚಿಕೆಯು ಬಳಕೆಯಾಗದೇ ಉಳಿದಿತ್ತು.

ಹೆಚ್ಚಿನ ಪ್ರಮಾಣದಲ್ಲಿ ನಿಧಿಯನ್ನು ಹಂಚಿಕೆ ಮಾಡುವ ಮೊದಲು ಬಳಸಿಕೊಳ್ಳದಿರುವಿಕೆಗೆ ಕಾರಣಗಳನ್ನು ಗುರುತಿಸುವಲ್ಲಿ ಹಾಗೂ ಬಗೆಹರಿಸುವಲ್ಲಿ ವಿಫಲತೆಯು ಆಯವ್ಯಯ ಪ್ರಕ್ರಿಯೆಯಲ್ಲಿನ ಉದಾಸೀನತೆಯನ್ನು ಸೂಚಿಸುತ್ತಿದ್ದಿತು. ಕಾಡಾಗಳಿಗೆ ಆಯವ್ಯಯ ಹಂಚಿಕೆಯು ಹಿಂದಿನ ವರ್ಷಗಳಲ್ಲಿ ಸಾಮಾನ್ಯವಾಗಿ ಕಡಿಮೆ ಪ್ರಮಾಣದಲ್ಲಿರುತ್ತಿತ್ತು ಎಂದು ಜಲ ಸಂಪನ್ಮೂಲ ಇಲಾಖೆಯ ಕಾರ್ಯದರ್ಶಿಯವರು ನಿರ್ಗಮನ ಸಭೆಯ ವೇಳೆಯಲ್ಲಿ ತಿಳಿಸಿದರು (ಅಕ್ಟೋಬರ್ 2014). ಆದರೆ, ಇತ್ತೀಚಿನ ವರ್ಷಗಳಲ್ಲಿ ಆಯವ್ಯಯ ಹಂಚಿಕೆಯಲ್ಲಿ ಅಸಾಮಾನ್ಯ ಏರಿಕೆಯ ಕಾರಣ, ಕಾಡಾಗಳು ಹಂಚಿಕೆಯಾದ ನಿಧಿಯನ್ನು ಲಭ್ಯ ಮೂಲಸೌಕರ್ಯದೊಂದಿಗೆ ಪೂರ್ಣವಾಗಿ ಬಳಸಿಕೊಳ್ಳಲಾಗಲಿಲ್ಲ.

## 2.1.7 ಕಾರ್ಯಕ್ರಮ ನಿರ್ವಹಣೆ

### *2.1.7.1 ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ಜಲ ನಿರ್ವಹಣಾ ಕಾರ್ಯಕ್ರಮ*

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಕಾರ್ಯಕ್ರಮಕ್ಕಾಗಿ, 1974ರಲ್ಲಿ ಕೇಂದ್ರದ ಸಹಾಯಧನವನ್ನು ಒಂದು ಕೇಂದ್ರ ಪುರಸ್ಕೃತ ಯೋಜನೆಯ ರೂಪದಲ್ಲಿ ಪ್ರಾರಂಭಿಸಲಾಯಿತು. ಮೌಲ್ಯಮಾಪನ ಮತ್ತು ಪ್ರಭಾವ ನಿರ್ಧಾರಣೆಗಳ ಆಧಾರದ ಮೇರೆಗೆ ಹೊಸ ಭಾಗಗಳನ್ನು ಸೇರ್ಪಡೆಗೊಳಿಸುವ ಮೂಲಕ ಭಾರತ ಸರ್ಕಾರವು ಅದರ ವ್ಯಾಪ್ತಿಯನ್ನು ವಿಸ್ತರಿಸಿತು (ಜುಲೈ 2010 ಮತ್ತು ಡಿಸೆಂಬರ್ 2013ರಲ್ಲಿ), ಆದಾಗ್ಯೂ, ಸೃಷ್ಟಿಸಲಾದ ನೀರಾವರಿ ಸಾಮರ್ಥ್ಯದ ತ್ವರಿತ ಬಳಕೆ ಹಾಗೂ ನೀರಾವರಿಗೊಳಪಡುವ ಜಮೀನಿನಿಂದ ಗರಿಷ್ಠ ಉತ್ಪಾದನೆ ಪಡೆಯುವ ಮೂಲ ಉದ್ದೇಶವು ಹಾಗೆಯೇ ಉಳಿದಿದ್ದಿತು.

2008–09ರಿಂದ ಜಾರಿಗೆ ಬರುವಂತೆ, ಕಾರ್ಯಕ್ರಮವನ್ನು ರಾಜ್ಯ ವಲಯದ ಯೋಜನೆಯಂತೆ ಕಾರ್ಯಗತಗೊಳಿಸಲು ಭಾರತ ಸರ್ಕಾರವು ನಿಶ್ಚಯಿಸಿತು. ಕೇಂದ್ರದ ಸಹಾಯಧನವನ್ನು ಕೋರುವ ರಾಜ್ಯ ಸರ್ಕಾರವು, ಅನುಮೋದನೆಗೊಂಡಿದ್ದ ಪ್ರತಿಯೊಂದು ಯೋಜನೆಗೂ, ಅನುಷ್ಠಾನದ ಷೆಡ್ಯೂಲುಗಳನ್ನು ಒಳಗೊಂಡ ಒಂದು ಪರಸ್ಪರ ತಿಳುವಳಿಕೆ ಪತ್ರವನ್ನು ಮಾಡಿಕೊಳ್ಳುವ ಅಗತ್ಯವಿದೆ. ಶೇಕಡಾ 10ರ ಕೊರತೆಯ ಸಹನೀಯ ಮಿತಿಯೊಂದಿಗೆ, ಅನುಷ್ಠಾನದ ಷೆಡ್ಯೂಲುಗಳ ಪ್ರಕಾರ

[10] ಮೈಸೂರು, ಭೀಮರಾಯನಗುಡಿ, ಬೆಳಗಾವಿ, ಕಲ್ಬುರ್ಗಿ
[11] 2013–14ರಲ್ಲಿ ಯಾವುದೇ ಸಹಾಯಧನವನ್ನು ಒದಗಿಸಲಿಲ್ಲ

ಕಟ್ಟುನಿಟ್ಟಿನ ಕಾರ್ಯಗತಗೊಳಿಸುವಿಕೆಯನ್ನು ನಿರ್ದಿಷ್ಟಪಡಿಸಲಾಗಿದೆ. ಕೊರತೆಯುಂಟಾದ ಸಂದರ್ಭದಲ್ಲಿ, ಅದು ಕೇಂದ್ರ ಸಹಾಯಧನದ ನಷ್ಟಕ್ಕೆ ಗುರಿಯಾಗುವುದಲ್ಲದೇ, ಪ್ರಕರಣವಾರು ಆಧಾರದ ಮೇರೆಗೆ ಷೆಡ್ಯೂಲಿನ ಪರಿವರ್ತಿತ ಕಾರ್ಯಗತಗೊಳಿಸುವಿಕೆಗಾಗಿ ಒಂದು ಪರಿಷ್ಕೃತ ಪರಸ್ಪರ ತಿಳುವಳಿಕೆ ಪತ್ರವನ್ನು ಮಾಡಿಕೊಳ್ಳಬೇಕಾಗುವುದು. ಕ್ಷೇತ್ರಾಭಿವೃದ್ಧಿ ಕಾಮಗಾರಿಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರವು ವೆಚ್ಚವನ್ನು ಸಮನಾಗಿ ಹಂಚಿಕೊಳ್ಳುತ್ತವೆ ಹಾಗೂ ವಿಸ್ತರಣಾ ಸೇವೆಗಳ[12] ಅಡಿಯಲ್ಲಿನ ಭಾಗಗಳಿಗೆ, ಪ್ರತಿಯೊಂದು ಭಾಗಕ್ಕೂ ಘಟಕ ವೆಚ್ಚವನ್ನು ನಿಗದಿಗೊಳಿಸುವ ಷರತ್ತಿಗೆ ಒಳಪಟ್ಟು ಶೇಕಡಾ 75ರಷ್ಟು ಕೇಂದ್ರದ ಸಹಾಯಧನವು ಲಭ್ಯವಿದೆ.

### *2.17.2 ಕೇಂದ್ರ ಸಹಾಯಧನದ ನಷ್ಟ*

ಕೇಂದ್ರ ಸರ್ಕಾರವು XIIನೇ ಪಂಚ ವಾರ್ಷಿಕ ಯೋಜನೆಯ (2009–14) ಅಡಿಯಲ್ಲಿ 15 ಭಾರಿ ಹಾಗೂ ಮಧ್ಯಮ ಪ್ರಮಾಣದ ನೀರಾವರಿ ಯೋಜನೆಗಳಿಗೆ ಸಹಾಯಧನವನ್ನು ಅನುಮೋದಿಸಿದ್ದಿತು. ಯೋಜನೆಗಳ ವಿವರಗಳು, ಪೂರ್ಣಗೊಳ್ಳಲು ನಿರ್ದಿಷ್ಟಗೊಂಡಿದ್ದ ಅವಧಿ ಹಾಗೂ ಅವುಗಳ ಅನುಷ್ಠಾನದಲ್ಲಿನ ಸ್ಥಿತಿಗತಿಗಳನ್ನು **ಕೋಷ್ಟಕ 2.2**ರಲ್ಲಿ ನೀಡಲಾಗಿದೆ;

**ಕೋಷ್ಟಕ 2.2: ಕೇಂದ್ರ ಸಹಾಯಧನದ ಯೋಜನೆಗಳ ವಿವರಗಳು**

(₹ ಕೋಟಿಯಲ್ಲಿ)

| ಯೋಜನೆಗಳ ಹೆಸರು/ ಕಾಡಾದ ಹೆಸರು | ಪರಸ್ಪರ ತಿಳುವಳಿಕೆ ಪತ್ರದ ಅವಧಿ | ಪರಸ್ಪರ ತಿಳುವಳಿಕೆ ಪತ್ರದಂತೆ ಒಟ್ಟು ಕೇಂದ್ರ ಸಹಾಯಧನ | ಪರಸ್ಪರ ತಿಳುವಳಿಕೆ ಪತ್ರದಂತೆ 2013–14ರ ವರೆಗೆ ಕೇಂದ್ರ ಸಹಾಯಧನ | ವಾಸ್ತವ ವೆಚ್ಚದಂತೆ ಕೋರಿದ ಕೇಂದ್ರ ಸಹಾಯಧನ | 2013–14ರ ವರೆಗೆ ಕೇಂದ್ರ ಸಹಾಯಧನದ ಕೊರತೆ ಉಪಯೋಗ | ಯೋಜನೆಯ ಸ್ಥಿತಿಗತಿ |
|---|---|---|---|---|---|---|
| ಗಂಡೋರಿನಾಲ/ಕಲ್ಬುರ್ಗಿ | 2010–11 | 7.06 | 7.06 | 1.68 | 5.38 | ಪರಸ್ಪರ ತಿಳುವಳಿಕೆ ಪತ್ರದಂತೆ ಪೂರ್ಣವಾಗಿಲ್ಲ |
| ಬೆಣ್ಣೆತೊರೆ/ಕಲ್ಬುರ್ಗಿ | 2010–12 | 10.09 | 10.09 | 7.37 | 2.72 | ಕೇಂದ್ರ ಸಹಾಯಧನ ನಿಂತಿದೆ |
| ಕೆಳ ಮುಲ್ಲಾಮರಿ/ಕಲ್ಬುರ್ಗಿ | 2010–12 | 9.95 | 9.95 | ಏನೂ ಇಲ್ಲ | 9.95 | ಕೇಂದ್ರ ಸಹಾಯಧನ ನಿಂತಿದೆ |
| ಮೇಲುಮುಲ್ಲಾಮರಿ/ಕಲ್ಬುರ್ಗಿ | 2010–12 | 4.77 | 4.77 | 0.57 | 4.20 | ಕೇಂದ್ರ ಸಹಾಯಧನ ನಿಂತಿದೆ |
| ಚುಲ್ಕಿನಾಲೆ/ಕಲ್ಬುರ್ಗಿ | 2010–12 | 5.52 | 5.52 | 0.03 | 5.49 | ಕೇಂದ್ರ ಸಹಾಯಧನ ನಿಂತಿದೆ |
| ಅಮರ್ಜ/ಕಲ್ಬುರ್ಗಿ | 2010–13 | 10.82 | 10.82 | 3.60 | 7.22 | ಕೇಂದ್ರ ಸಹಾಯಧನ ನಿಂತಿದೆ |
| ಕಾರಂಜ/ಕಲ್ಬುರ್ಗಿ | 2010–15 | 27.63 | 19.99 | 5.50 | 14.49 | ಪ್ರಗತಿಯಲ್ಲಿದೆ |
| ಭೀಮ ಏತ/ಕಲ್ಬುರ್ಗಿ | 2012–15 | 32.14 | 18.31 | 0.14 | 18.17 | ಪ್ರಗತಿಯಲ್ಲಿದೆ |
| ತುಂಗಭದ್ರ/ಮುನಿರಾಬಾದ್ | 2010–15 | 323.26 | 217.74 | 49.45 | 168.29 | ಪ್ರಗತಿಯಲ್ಲಿದೆ |
| ಮಲಪ್ರಭ/ಬೆಳಗಾವಿ | 2010–15 | 153.96 | 338.17 | 42.45 | 295.72 | ಪ್ರಗತಿಯಲ್ಲಿದೆ |
| ಘಟಪ್ರಭ/ಬೆಳಗಾವಿ | 2010–15 | 206.07 | | | | ಪ್ರಗತಿಯಲ್ಲಿದೆ |
| ಹಿಪ್ಪರ್ಗಿ/ಬೆಳಗಾವಿ | 2012–15 | 109.84 | | | | ಪ್ರಗತಿಯಲ್ಲಿದೆ |
| ಧೂದ್‌ಗಂಗ/ಬೆಳಗಾವಿ | 2013–16 | 5.94 | | | | ಪ್ರಗತಿಯಲ್ಲಿದೆ |
| ಯುಕೆಪಿ/ಭೀಮರಾಯನಗುಡಿ | 2010–15 | 245.88 | 201.92 | 37.40 | 164.52 | ಪ್ರಗತಿಯಲ್ಲಿದೆ |
| ಭದ್ರ/ಶಿವಮೊಗ್ಗ | 2010–15 | 107.28 | 83.31 | 46.46 | 36.85 | ಪ್ರಗತಿಯಲ್ಲಿದೆ |
| | **ಒಟ್ಟು** | **1,260.21** | **927.65** | **194.65** | **733.00** | |

(ಆಧಾರ: ಪರಸ್ಪರ ತಿಳುವಳಿಕೆ ಪತ್ರಗಳು ಮತ್ತು ಪ್ರಗತಿ ವರದಿಗಳು)

ಪರಸ್ಪರ ತಿಳುವಳಿಕೆ ಪತ್ರದ ಪ್ರಕಾರ ಎಲ್ಲಾ ಯೋಜನೆಗಳಲ್ಲಿಯೂ ಗುರಿಗಳ ಸಾಧನೆಯಲ್ಲಿನ ಕೊರತೆಯ ಕಾರಣ, ₹ 733 ಕೋಟಿ ಮೊತ್ತದಷ್ಟು ಕೇಂದ್ರದ ಸಹಾಯಧನವನ್ನು ಉಪಯೋಗಿಸಿಕೊಳ್ಳಲಾಗಲಿಲ್ಲ. ಸಹಾಯಧನವನ್ನು ಮುಂದುವರೆಸುವುದಕ್ಕಾಗಿ ರಾಜ್ಯ ಸರ್ಕಾರವು ಹೊಸದಾಗಿ ಪ್ರಸ್ತಾವನೆಗಳನ್ನು ಸಲ್ಲಿಸುವಂತೆ ಭಾರತ ಸರ್ಕಾರವು ಒತ್ತಾಯಪಡಿಸಿದ್ದಿತು (ಆಗಸ್ಟ್ 2014).

[12] ಸ್ವೀಕರಾರ್ಹ ಪ್ರಯೋಗಗಳು ಹಾಗೂ ಪ್ರದರ್ಶನಗಳು, ತರಬೇತಿ, ಇತ್ಯಾದಿ

ಮುಂದುವರೆದು, ಪರಸ್ಪರ ತಿಳುವಳಿಕೆ ಪತ್ರಗಳಲ್ಲಿ ತಿಳಿಸಲಾಗಿದ್ದಂತೆ, ಸಾಧನೆಯಲ್ಲಿನ ಕೊರತೆಯು ಸೂಚಿತ ಮಿತಿಗಿಂತ ಅಧಿಕವಾಗಿದ್ದಿತಾದ್ದರಿಂದ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ಜಲ ನಿರ್ವಹಣೆಯ ಅಡಿಯಲ್ಲಿ ಸಹಾಯಧನವನ್ನು ಪಡೆಯುತ್ತಿದ್ದಂತಹ 12 ಯೋಜನೆಗಳ ಮೇಲೆ ಭರಿಸಲಾಗಿದ್ದ ವೆಚ್ಚವನ್ನು ಕೇಂದ್ರ ಸರ್ಕಾರವು ತುಂಬಿಕೊಡಲಿಲ್ಲ. ಕಳುಹಿಸಲಾಗಿದ್ದ ಪ್ರಸ್ತಾವನೆಗಳು ಹಾಗೂ ಕೇಂದ್ರ ಸಹಾಯಧನದ ವಾಸ್ತವಿಕ ಬಿಡುಗಡೆಯ ವಿವರಗಳನ್ನು **ಕೋಷ್ಟಕ 2.3**ರಲ್ಲಿ ನೀಡಲಾಗಿದೆ;

**ಕೋಷ್ಟಕ 2.3: ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ಜಲ ನಿರ್ವಹಣೆಯ ಅಡಿಯಲ್ಲಿ ಸ್ವೀಕರಿಸಲಾದ ಕೇಂದ್ರ ಸಹಾಯಧನದ ವಿವರಗಳು**

(₹ ಕೋಟಿಯಲ್ಲಿ)

| ಕ್ರಮ ಸಂಖ್ಯೆ | ವರ್ಷ | ಕಳುಹಿಸಲಾದ ಪ್ರಸ್ತಾವನೆ* | ಪ್ರಸ್ತಾವನೆಯಂತೆ* ಅರ್ಹ ಕೇಂದ್ರ ಸಹಾಯಧನ | ಭಾರತ ಸರ್ಕಾರದಿಂದ ಬಿಡುಗಡೆಯಾದ ಮೊತ್ತ | ಬಿಡುಗಡೆಯಾದ ಮೊತ್ತ ಮುಂಚಿತವಾಗಿ (+)/ ಬಿಡುಗಡೆಯಾಗದ್ದು (–) |
|---|---|---|---|---|---|
| 1 | 2010–11 | 69.65 | 34.71 | 53.42 | (+) 18.71 |
| 2 | 2011–12 | 368.17 | 76.28 | 53.08 | (–) 23.20 |
| 3 | 2012–13 | 277.18 | 87.57 | 39.53 | (–) 48.04 |
| 4 | 2013–14 | 289.42 | 77.46 | – | (–) 77.46 |
| | | **ಒಟ್ಟು** | **276.02** | **146.03** | **(–) 129.99** |

(ಆಧಾರ: ಜಲಸಂಪನ್ಮೂಲ ಇಲಾಖೆ ಕಾರ್ಯದರ್ಶಿಯಿಂದ ಸಲ್ಲಿಸಲ್ಪಟ್ಟ ವಿವರಗಳು)
* ಇದು ಹಿಂದಿನ ವರ್ಷಗಳಿಂದ ಉಳಿದುಕೊಂಡು ಬಂದಿರುವ ಬಾಕಿ ಮೊತ್ತಗಳನ್ನು ಒಳಗೊಂಡಿದೆ

ಪುನರ್ಭರ್ತಿಯಾಗಬೇಕಿದ್ದ ₹ 276.02 ಕೋಟಿ ವೆಚ್ಚಕ್ಕೆ ಪ್ರತಿಯಾಗಿ, ಕೇಂದ್ರ ಸರ್ಕಾರವು ಕೇವಲ ₹ 146.03 ಕೋಟಿಯನ್ನು ಬಿಡುಗಡೆ ಮಾಡಿತು ಹಾಗೂ ಭರಿಸಲಾಗಿದ್ದ ₹ 130 ಕೋಟಿ ಮೊತ್ತದಷ್ಟು ವೆಚ್ಚವನ್ನು ನಿರಂತರ ವೈಫಲ್ಯಗಳ ಕಾರಣ ಪುನರ್ಭರ್ತಿ ಮಾಡಲಿಲ್ಲವಾದ್ದರಿಂದ ರಾಜ್ಯದ ಬೊಕ್ಕಸಕ್ಕೆ ಹೆಚ್ಚುವರಿ ಹೊರೆಯಾಗಿ ಪರಿಣಮಿಸಿತು ಎನ್ನುವುದನ್ನು ಮೇಲಿನ ಕೋಷ್ಟಕದಿಂದ ಕಾಣಬಹುದು. ಜೊತೆಗೆ, 2004–10ರಲ್ಲಿ ಭರಿಸಲಾಗಿದ್ದ ರಾಜ್ಯದ ಪಾಲಿನ ₹ 37.19 ಕೋಟಿ ವೆಚ್ಚವನ್ನು ಭಾರತ ಸರ್ಕಾರವು ಇನ್ನೂ ಪುನರ್ಭರ್ತಿ ಮಾಡಬೇಕಿದೆ. ಹೀಗೆ, ಪರಸ್ಪರ ತಿಳುವಳಿಕೆ ಪತ್ರಗಳ ಅಡಿಯಲ್ಲಿ ಅಗತ್ಯವಿದ್ದಂತೆ ಷೆಡ್ಯೂಲಿಗೆ ಬದ್ಧವಾಗಿರುವಲ್ಲಿ ವಿಫಲತೆಯಿಂದ ರಾಜ್ಯ ಸರ್ಕಾರವು ₹ 130 ಕೋಟಿ ಮೊತ್ತದಷ್ಟು ಕೇಂದ್ರ ಸಹಾಯಧನವನ್ನು ಕಳೆದುಕೊಂಡಿದ್ದರ ಜೊತೆಗೆ ₹ 37.19 ಕೋಟಿಯು ಇನ್ನೂ ಪುನರ್ಭರ್ತಿಯಾಗಬೇಕಿದೆ.

### *2.1.7.3 ವ್ಯವಸ್ಥಿತ ವಾರ್ಷಿಕ ಯೋಜನೆಯ ಅನುಪಸ್ಥಿತಿ*

ದೀರ್ಘಾವಧಿ ದೃಷ್ಟಿಕೋನದ ಯೋಜನೆಯನ್ನು ಅನುಸರಿಸಿ, ಇಲಾಖೆಯಿಂದ ತಯಾರಾದ ವಾರ್ಷಿಕ ಕ್ರಿಯಾ ಯೋಜನೆಯು, ತನ್ನ ಯೋಜನೆಗಳನ್ನು ಒಂದು ಕಾಲಮಿತಿಯಲ್ಲಿ ಪೂರ್ಣಗೊಳಿಸುವುದನ್ನು ಖಚಿತಪಡಿಸುತ್ತದೆ. ಆದಾಗ್ಯೂ, ಪೂರ್ಣಗೊಳಿಸಲಾದ ಸಮೀಕ್ಷೆಯ ವ್ಯಾಪ್ತಿಯನ್ನು ಪರಿಗಣಿಸದೆಯೇ ವಾರ್ಷಿಕ ಕ್ರಿಯಾ ಯೋಜನೆ/ಸಂಘಟಿತ ಯೋಜನೆಗಳನ್ನು ಒಂದು ವಾಡಿಕೆಯ ರೀತಿಯಲ್ಲಿ ತಯಾರಿಸಲಾಗಿದ್ದಿತು ಎನ್ನುವುದನ್ನು ಗಮನಿಸಲಾಯಿತು, ಇದು ಕ್ಷೇತ್ರಾಭಿವೃದ್ಧಿ ಕಾಮಗಾರಿಗಳಿಗೆ ವಾಸ್ತವಿಕವಲ್ಲದ ಗುರಿಗಳನ್ನು ನಿಗದಿಗೊಳಿಸುವಲ್ಲಿ ಪರಿಣಮಿಸಿತು. 2009–14ರ ಅವಧಿಯಲ್ಲಿ, ಕೇಂದ್ರ ಮತ್ತು ರಾಜ್ಯ ಯೋಜನೆಗಳೆರಡರಲ್ಲಿಯೂ, ಎಲ್ಲಾ ಕಾಡಾಗಳಿಂದ ನಿರ್ವಹಿಸಲ್ಪಟ್ಟ ಅಚುಕಟ್ಟು ಪ್ರದೇಶಾಭಿವೃದ್ಧಿ ಚಟುವಟಿಕೆಗಳ ವಿವಿಧ ಭಾಗಗಳ ಗುರಿಗಳು ಮತ್ತು ಸಾಧನೆಗಳನ್ನು **ಕೋಷ್ಟಕ 2.4ರಲ್ಲಿ** ತೋರಿಸಲಾಗಿದೆ:

**ಕೋಷ್ಟಕ 2.4: ಕೇಂದ್ರ ಮತ್ತು ರಾಜ್ಯ ಯೋಜನೆಗಳ ಅಡಿಯಲ್ಲಿ ಗುರಿ ಮತ್ತು ಸಾಧನೆ**

(ವಿಸ್ತೀರ್ಣ ಹೆಕ್ಟೇರ್‌ನಲ್ಲಿ)

| ವರ್ಷ | | ಸಮೀಕ್ಷೆ | ಹೊಲ ಗಾಲುವೆ (ಕ್ಷೇತ್ರಾಭಿವೃದ್ಧಿ) | ಬಸಿಗಾಲುವೆ | ವ್ಯವಸ್ಥೆ ನ್ಯೂನತೆಗಳ ಸರಿಪಡಿಸುವಿಕೆ | ಸಹಭಾಗಿತ್ವದ ನೀರಾವರಿ ನಿರ್ವಹಣೆ | ಭೂ ಪುನರ್ ಸುಧಾರಣೆ | *ವಾರಾಬಂದಿ* | ಆಯಕಟ್ಟು ರಸ್ತೆ | ಅಳವಡಿಕೆ ಪ್ರಯೋಗಗಳು ಮತ್ತು ಪ್ರದರ್ಶನ | ತರಬೇತಿ |
|---|---|---|---|---|---|---|---|---|---|---|---|
| **2009–10** | ಗು | 12,242 | 66,304 | 34,760 | 3,336 | 31,106 | 3,569 | 20,583 | 310 | 1,531 | 22,377 |
| | ಸಾ | 10,174 | 14,294 | 33,348 | 1,251 | 32,039 | 3,821 | 2,183 | 275 | 1,128 | 22,428 |
| **2010–11** | ಗು | 10,426 | 98,038 | 33,028 | 5,700 | 30,383 | 15,155 | 33,333 | 664 | 1,366 | 29,105 |
| | ಸಾ | 9,816 | 61,298 | 34,697 | 3,944 | 29,661 | 11,549 | 22,936 | 694 | 1,417 | 22,376 |
| **2011–12** | ಗು | 1,65,352 | 2,22,083 | 2,81,105 | 78,022 | 1,90,053 | 89,786 | 12,510 | 454 | 3,310 | 38,351 |
| | ಸಾ | 42,981 | 50,725 | 1,46,832 | 3,326 | 73,511 | 21,168 | 843 | 364 | 3,304 | 59,432 |
| **2012–13** | ಗು | 1,23,482 | 1,87,701 | 2,39,539 | 28,570 | 1,04,639 | 80,325 | 2,000 | 560 | 5,370 | 29,724 |
| | ಸಾ | 9,004 | 49,185 | 1,93,252 | 255 | 57,436 | 27,064 | 1,586 | 517 | 5,466 | 58,115 |
| **2013–14** | ಗು | 6,845 | 1,73,844 | 1,52,432 | 17,900 | 59,704 | 78,052 | ಏನೂ ಇಲ್ಲ | 254 | 1,212 | 17,373 |
| | ಸಾ | 2,748 | 49,755 | 1,28,661 | 1,156 | 35,729 | 4,013 | ಏನೂ ಇಲ್ಲ | 282 | 1,450 | 22,579 |
| ಒಟ್ಟು | ಗು | **3,18,347** | **7,47,970** | **7,40,864** | **1,33,528** | **4,15,885** | **2,66,887** | **68,426** | **2,242** | **12,789** | **1,36,930** |
| | ಸಾ | **74,723** | **2,25,257** | **5,36,790** | **9,932** | **2,28,376** | **67,615** | **27,548** | **2,132** | **12,765** | **1,84,930** |

(ಗು: ಗುರಿ, ಸಾ: ಸಾಧನೆ) (ಆಧಾರ: ಜಲ ಸಂಪನ್ಮೂಲ ಇಲಾಖೆ ಕಾರ್ಯದರ್ಶಿಯಿಂದ ಸಲ್ಲಿಸಲ್ಪಟ್ಟ ಪ್ರಗತಿ ವರದಿ)

ತರಬೇತಿಯನ್ನು ಹೊರತುಪಡಿಸಿ, ಎಲ್ಲಾ ಚಟುವಟಿಕೆಗಳಲ್ಲಿ ಭೌತಿಕ ಗುರಿಗಳನ್ನು ಸಾಧಿಸುವಲ್ಲಿ ಗಮನಾರ್ಹ ಕೊರತೆಗಳಿದ್ದವು ಎನ್ನುವುದನ್ನು ಮೇಲಿನ ಕೋಷ್ಟಕದಿಂದ ಕಾಣಬಹುದು. ವಿಪರೀತ ಕೊರತೆಗಳು ವ್ಯವಸ್ಥೆ ನ್ಯೂನತೆಗಳ ಸರಿಪಡಿಸುವಿಕೆ[13] (ಶೇಕಡಾ 93), ಸಮೀಕ್ಷೆ (ಶೇಕಡಾ 77), ಭೂ ಪುನರ್ಸುಧಾರಣೆ (ಶೇಕಡಾ 75) ಹಾಗೂ ಕ್ಷೇತ್ರಾಭಿವೃದ್ಧಿ (ಶೇಕಡಾ 70), ಇವುಗಳ ಅಡಿಯಲ್ಲಿದ್ದವು. ಕಾಡಾಗಳಲ್ಲಿ ಭಾರಿ ಸಂಖ್ಯೆಯಲ್ಲಿ ಖಾಲಿ ಹುದ್ದೆಗಳಿದ್ದುದರಿಂದ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಚಟುವಟಿಕೆಗಳನ್ನು ಜಾರಿಗೊಳಿಸುವಲ್ಲಿ ಅವು ತೊಂದರೆಗಳನ್ನು ಅನುಭವಿಸುತ್ತಿದ್ದವೆಂದು ಜಲ ಸಂಪನ್ಮೂಲ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ನಿರ್ಗಮನ ಸಭೆಯಲ್ಲಿ ತಿಳಿಸಿದರು. ಈ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನಗಳನ್ನು ಮಾಡಲಾಗಿದ್ದಿತು ಎಂಬುದಾಗಿಯೂ ತಿಳಿಸಿದರು.

### *2.1.7.4 ಅಚ್ಚುಕಟ್ಟು ಪ್ರದೇಶದ ಸಮೀಕ್ಷೆ ಮಾಡುವಲ್ಲಿ ಕೊರತೆ*

ಕ್ಷೇತ್ರಾಭಿವೃದ್ಧಿ ಕಾಮಗಾರಿಗಳ ಯೋಜನೆ ಮತ್ತು ರೂಪುರೇಖೆಗಳನ್ನು ತಯಾರಿಸುವುದಕ್ಕಾಗಿ, ಅಚ್ಚುಕಟ್ಟು ಪ್ರದೇಶದ ಸ್ವರೂಪಕ್ಕೆ ಸಂಬಂಧಿಸಿದಂತೆ ಸಮೀಕ್ಷೆ ಕೈಗೊಳ್ಳುವುದನ್ನು ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ಜಲ ನಿರ್ವಹಣೆಯ ಮಾರ್ಗಸೂಚಿಗಳು/ಜಲ ನಿರ್ವಹಣಾ ಕೈಪಿಡಿಗಳು ನಿರ್ದಿಷ್ಟಪಡಿಸಿವೆ. ಮಣ್ಣಿನ ಸಮೀಕ್ಷೆಯನ್ನು ಭೂ ಸಾಮರ್ಥ್ಯ ವರ್ಗೀಕರಣಕ್ಕಾಗಿ, ಬೆಳೆಗಳನ್ನು ಬೆಳೆಯುವುದಕ್ಕೆ ಯೋಜನೆಯನ್ನು ತಯಾರಿಸುವ ಸಲುವಾಗಿ ಅವುಗಳ ಯೋಗ್ಯತೆಯನ್ನು ಅರಿಯಲು ಹಾಗೂ ಅವುಗಳ ಸಂಪೂರ್ಣ ಸಾಮರ್ಥ್ಯವನ್ನು ಪಡೆದುಕೊಳ್ಳುವುದಕ್ಕಾಗಿ ಸಮರ್ಪಕ ಸಂಸ್ಕರಣಾ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕಾಗಿ ಕೈಗೊಳ್ಳಲಾಗುವುದು.

ಆರು ಕಾಡಾಗಳ ಪೈಕಿ ಎರಡು ಕಾಡಾಗಳಲ್ಲಿ (ಮುನಿರಾಬಾದ್ ಮತ್ತು ಭೀಮರಾಯನಗುಡಿ) ಸಮೀಕ್ಷೆಯನ್ನು ನಡೆಸಲು ಗುರಿಗಳನ್ನು ನಿಗದಿಪಡಿಸಿರಲಿಲ್ಲ; ಶಿವಮೊಗ್ಗ, ಬೆಳಗಾವಿ ಮತ್ತು ಕಲ್ಬುರ್ಗಿಯ ಕಾಡಾಗಳಲ್ಲಿ ಕೊರತೆಯು ಕ್ರಮವಾಗಿ ಶೇಕಡಾ 100, ಶೇಕಡಾ 86 ಹಾಗೂ ಶೇಕಡಾ 4ರಷ್ಟಿದ್ದಿತು ಎನ್ನುವುದನ್ನು ನಾವು ಗಮನಿಸಿದೆವು. ಕಾಡಾ, ಮೈಸೂರು ಮಾತ್ರ ಶೇಕಡಾ 100ರಷ್ಟು ಪ್ರಗತಿಯನ್ನು ದಾಖಲಿಸಿದ್ದಿತು.

[13] *ಹೂಳು ಹಾಗೂ ಕಳೆಗಳನ್ನು ತೆಗೆಯುವ ಮೂಲಕ ನಾಲೆಗಳನ್ನು ಸ್ವಚ್ಛಗೊಳಿಸುವುದು, ಏರಿ/ಒಡ್ಡುಗಳ ಮಣ್ಣಿನಕೆಲಸ/ತಳಮಟ್ಟ ಹಾಗೂ ಇಳಿಜಾರುಗಳನ್ನು ಸಮತಟ್ಟುಗೊಳಿಸುವುದು, ಅಡಿಭಾಗಗಳನ್ನು ತೆಗೆದುಹಾಕುವುದು, ದಂಡೆಗಳನ್ನು ಬಲಗೊಳಿಸುವುದು, ಗೇಟುಗಳು/ಎತ್ತುಗ (ಹಾಯಿಸ್ಟ್) ಯಂತ್ರಗಳ ಬದಲಾವಣೆ ಹಾಗೂ ಅವುಗಳ ಲೋಹದ ಭಾಗಗಳಿಗೆ ಬಣ್ಣ ಹಚ್ಚುವುದು, ಇತ್ಯಾದಿ ಚಟುವಟಿಕೆಗಳು*

ಸಮೀಕ್ಷೆಗಳನ್ನು ನಡೆಸುವಲ್ಲಿನ ಕೊರತೆಗೆ ಕಾರಣಗಳು ದಾಖಲೆಗಳಲ್ಲಿ ಲಭ್ಯವಿರಲಿಲ್ಲ. ಸಮೀಕ್ಷೆಯಲ್ಲಿನ ಕೊರತೆಗಳು ಅತೀವ ನಿಖರತೆಯಿರದ ಆಯವ್ಯಯ ಹಂಚಿಕೆಗಳಲ್ಲಿ ಪರಿಣಮಿಸಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಚಟುವಟಿಕೆಗಳ ಪ್ರಗತಿಯ ಮೇಲೆ ಪ್ರತಿಕೂಲ ಪರಿಣಾಮ ಬೀರಿತು.

### *2.1.7.5 ಹೊಲಗಾಲುವೆಗಳು*

ಕಿರು ನಾಲೆಗಳು/ವಿತರಕಗಳು, ಇತ್ಯಾದಿಗಳ ಹೊರತೂಬುಗಳಿಂದ ಅಂತ್ಯಭಾಗದವರೆಗೂ ಅತ್ಯಲ್ಪ ಸಮಯದಲ್ಲಿ ನೀರನ್ನು ಸಾಗಿಸುವುದಕ್ಕೆ ಹಾಗೂ ಅದರಿಂದಾಗಿ ಸೋರಿಕೆ ನಷ್ಟವನ್ನು ತಡೆಯುವುದಕ್ಕೆ ಹೊಲಗಾಲುವೆಗಳು ಅನುಕೂಲ ಕಲ್ಪಿಸುವುದರಿಂದ, ಅವು ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಕಾರ್ಯಕ್ರಮದ ಒಂದು ಪ್ರಮುಖ ಭಾಗವಾಗಿವೆ. ಹೊಲಗಾಲುವೆಗಳು, ಸೃಷ್ಟಿಸಲಾದ ನೀರಾವರಿ ಸಾಮರ್ಥ್ಯ ಹಾಗೂ ಬಳಸಿಕೊಳ್ಳಲಾದ ನೀರಾವರಿಗಳ ನಡುವೆ ಒಂದು ನಿರ್ಧಾರಕ ಕೊಂಡಿಗಳಾಗಿರುತ್ತವೆ ಹಾಗೂ ಬೆಳೆ ಉತ್ಪಾದನೆಯನ್ನು ಅಧಿಕಗೊಳಿಸುವಲ್ಲಿ ಸಹಾಯಕವಾಗಿರುತ್ತವೆ. 2009–14ರಲ್ಲಿ ವಿವಿಧ ಕಾಡಾಗಳಲ್ಲಿನ ಗುರಿ, ಸಾಧನೆ ಮತ್ತು ಕೊರತೆಯನ್ನು **ಕೋಷ್ಟಕ 2.5**ರಲ್ಲಿ ತೋರಿಸಲಾಗಿದೆ:

**ಕೋಷ್ಟಕ 2.5: ಹೊಲಗಾಲುವೆಗಳಲ್ಲಿ ಸಾಧನೆ**

(ವಿಸ್ತೀರ್ಣ ಹೆಕ್ಟೇರ್‌ನಲ್ಲಿ)

| ಕಾಡಾದ ಹೆಸರು | ಗುರಿ | ಸಾಧನೆ | ಕೊರತೆ | ಕೊರತೆ (ಶೇಕಡ) |
|---|---|---|---|---|
| ಮೈಸೂರು | 1,27,687 | 62,997 | 64,690 | 51 |
| ಮುನಿರಾಬಾದ್ | 22,219 | 164 | 22,055 | 99 |
| ಶಿವಮೊಗ್ಗ | 1,61,881 | 72,310 | 89,571 | 55 |
| ಬೆಳಗಾವಿ | 1,48,079 | 25,166 | 1,22,913 | 83 |
| ಭೀಮರಾಯನಗುಡಿ | 2,04,877 | 56,406 | 1,48,471 | 72 |
| ಕಲ್ಬುರ್ಗಿ | 83,227 | 8,214 | 75,013 | 90 |
| **ಒಟ್ಟು** | **7,47,970**[14] | **2,25,257** | **5,22,713** | **70** |

(ಆಧಾರ: ಜಲ ಸಂಪನ್ಮೂಲ ಇಲಾಖೆಯ ಕಾರ್ಯದರ್ಶಿಯಿಂದ ಸಲ್ಲಿಸಲ್ಪಟ್ಟ ಪ್ರಗತಿ ವರದಿ)

ಮೇಲಿನ ಕೋಷ್ಟಕದಿಂದ ಕಾಣಬಹುದಾದಂತೆ, ಗುರಿಯಾಗಿದ್ದ ಒಟ್ಟಾರೆ 7.48 ಲಕ್ಷ ಹೆಕ್ಟೇರ್‌ಗಳಿಗೆ ಪ್ರತಿಯಾಗಿ, ಕೇವಲ 2.25 ಲಕ್ಷ ಹೆಕ್ಟೇರ್‌ಗಳಲ್ಲಿ ಮಾತ್ರ ಹೊಲಗಾಲುವೆಗಳ ನಿರ್ಮಾಣವಾಗಿದ್ದಿದು, 5.23 ಲಕ್ಷ ಹೆಕ್ಟೇರ್‌ಗಳ (ಶೇಕಡಾ 70) ಕೊರತೆಯಲ್ಲಿ ಪರಿಣಮಿಸಿತು. ಹೊಲಗಾಲುವೆಗಳ ನಿರ್ಮಾಣದ ಗುರಿಯ ಶೇಕಡಾ 50ರಷ್ಟನ್ನೂ ಯಾವೊಂದು ಕಾಡಾವೂ ಸಾಧಿಸಲಾಗಿರಲಿಲ್ಲ, ಇದು ಈ ಚಟುವಟಿಕೆಯ ಮಂದಗತಿಯ ಅನುಷ್ಠಾನವನ್ನು ಸೂಚಿಸುತ್ತದೆ. ಕಾಮಗಾರಿಗಳನ್ನು ಕೇವಲ ಬೆಳೆಗಳನ್ನು ಬೆಳೆಯದ ಅವಧಿಯಲ್ಲಿ (ಮಾರ್ಚ್–ಮೇ) ಮಾತ್ರ ಕೈಗೊಳ್ಳಲಾದ ವಾಸ್ತವಾಂಶ ಹಾಗೂ ಜಲ ಸಂಪನ್ಮೂಲ, ಕೃಷಿ ಮುಂತಾದ ಇಲಾಖೆಗಳ ನಡುವೆ ಸಮನ್ವಯದ ಕೊರತೆಯ ಜೊತೆಗೆ ಕುಗ್ಗಿಸಲ್ಪಟ್ಟಿದ್ದ ಸಿಬ್ಬಂದಿ ಸಂಖ್ಯೆಯೊಂದಿಗೆ ಅತೀ ಮಹತ್ವಾಕಾಂಕ್ಷೆಯ ಗುರಿಗಳನ್ನು ನಿಗದಿಪಡಿಸಿದ್ದು ಕೊರತೆಗಳಿಗೆ ಕಾರಣವೆಂದು ಕಾಡಾಗಳು ಆರೋಪಿಸಿದವು. ಕಾರ್ಯಗತಗೊಳಿಸುವ ಅವಧಿಯ ಅರಿವು ಜಾರಿಗೊಳಿಸುವ ಪ್ರಾಧಿಕಾರಗಳಿಗೆ ಉತ್ತಮವಾಗಿಯೇ ಇದ್ದಿತಾದ್ದರಿಂದ ಹಾಗೂ ಅದರ ಪ್ರಕಾರವೇ ಯೋಜನೆಯನ್ನು ರೂಪಿಸಬೇಕಿದ್ದಿತಾದ್ದರಿಂದ ಉತ್ತರವನ್ನು ಲೆಕ್ಕಪರಿಶೋಧನೆಯಲ್ಲಿ ಒಪ್ಪಲಾಗಲಿಲ್ಲ. ಅಲ್ಲದೇ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಚಟುವಟಿಕೆಗಳ ಮೇಲಿನ ವಾಸ್ತವಿಕ ಅಗತ್ಯತೆಗಳನ್ನು ಪೂರೈಸುವುದಕ್ಕಾಗಿ ಒಂದು ಸಹಭಾಗಿತ್ವದ ಕ್ರಿಯಾ ಯೋಜನೆಯ ಮೂಲಕ ಇಲಾಖೆಯು ಸಮಸ್ಯೆಗಳನ್ನು ಬಗೆಹರಿಸಬೇಕಿದ್ದಿತು.

[14] ಇದು ಹಿಂದಿನ ವರ್ಷಗಳಿಂದ ಉಳಿದಿರುವ ಬಾಕಿ ಮತ್ತು ಹೊಸ ಸೇರ್ಪಡೆಗಳನ್ನು, ಇದ್ದರೆ, ಒಳಗೊಂಡಿದೆ

### *2.1.7.6 ಬಸಿಗಾಲುವೆಗಳ ನಿರ್ಮಾಣ*

ಕೃಷಿ ಭೂಮಿಯಲ್ಲಿರುವ ಹೆಚ್ಚುವರಿ ನೀರನ್ನು ಪ್ರಧಾನ ಹಾಗೂ ಆವೃತ ಸುರಂಗ ಕಾಲುವೆಗಳಿಗೆ ಹೊರ ಹಾಕುವಲ್ಲಿ ಬಸಿಗಾಲುವೆಗಳು ಸಹಾಯ ಮಾಡುತ್ತವೆ. ಇದು ಕೃಷಿ ಭೂಮಿಯಲ್ಲಿ ನೀರು ನಿಲ್ಲುವುದನ್ನು ತಡೆದು ಕೃಷಿ ಉತ್ಪಾದನೆಯನ್ನು ಅಧಿಕಗೊಳಿಸಲು ಸಹಾಯ ಮಾಡುತ್ತದೆ. ಬಸಿಗಾಲುವೆಗಳ ಅಡಿಯಲ್ಲಿ, ವೈಯಕ್ತಿಕ ಹೊಲಗದ್ದೆಗಳಿಂದ ನೀರನ್ನು ಹೊರಹಾಕುವ ಕಾಲುವೆಗಳಿಂದ ನೀರನ್ನು ಹೊರಹಾಕುವ ಸರ್ಕಾರಿ ಕಾಲುವೆಗಳಿಗೆ ಅಥವಾ ನೀರಿನ ಹೊರತೂಬುಗಳ ಹೊರಗೆ ಇರುವಂತಹ ಸ್ವಾಭಾವಿಕ ನೀರನ್ನು ಹೊರಹಾಕುವ ಕಾಲುವೆಗಳಿಗೆ ನೀರನ್ನು ಹೊರಹಾಕುವ ಕಾಲುವೆಗಳನ್ನು ನಿರ್ಮಿಸಲಾಗುವುದು. ಬಸಿಗಾಲುವೆಗಳ ಮೇಲಿನ ವೆಚ್ಚವು ಭೂ ಅಗೆತ, ರಸ್ತೆ ಅಗೆತ, ಇಳಿಜಾರು ನಿರ್ಮಾಣ, ಇತ್ಯಾದಿ ವೆಚ್ಚವನ್ನು ಒಳಗೊಂಡಿರುತ್ತದೆ.

2009–14ರಲ್ಲಿ ಬಸಿಗಾಲುವೆಗಳ ನಿರ್ಮಾಣದ ಗುರಿಗಳು ಮತ್ತು ಸಾಧನೆಗಳನ್ನು **ಕೋಷ್ಟಕ 2.6**ರಲ್ಲಿ ತೋರಿಸಲಾಗಿದೆ:

**ಕೋಷ್ಟಕ 2.6: ವಿವಿಧ ಕಾಡಾಗಳಿಂದ ಸಾಧಿಸಲ್ಪಟ್ಟ ಭೌತಿಕ ಗುರಿಗಳು**

(ವಿಸ್ತೀರ್ಣ ಹೆಕ್ಟೇರ್‌ನಲ್ಲಿ)

| ಕಾಡಾದ ಹೆಸರು | ಗುರಿ[15] | ಸಾಧನೆ | ಸಾಧನೆ (ಶೇಕಡ) |
|---|---|---|---|
| ಮೈಸೂರು | 2,302 | 2,102 | 91 |
| ಮುನಿರಾಬಾದ್ | 2,85,609 | 2,79,982 | 98 |
| ಶಿವಮೊಗ್ಗ | 98,027 | 64,362 | 66 |
| ಬೆಳಗಾವಿ | 2,01,530 | 1,10,178 | 55 |
| ಭೀಮರಾಯನಗುಡಿ | 63,750 | 32,030 | 50 |
| ಕಲ್ಬುರ್ಗಿ | 89,646 | 48,136 | 54 |
| **ಒಟ್ಟು** | **7,40,864** | **5,36,790** | **51** |

(ಆಧಾರ: ಜಲ ಸಂಪನ್ಮೂಲ ಇಲಾಖೆಯ ಕಾರ್ಯದರ್ಶಿಯಿಂದ ಸಲ್ಲಿಸಲ್ಪಟ್ಟ ಪ್ರಗತಿ ವರದಿ)

ಮುನಿರಾಬಾದ್ ಮತ್ತು ಮೈಸೂರಿನ ಕಾಡಾಗಳು ಶೇಕಡಾ 90ಕ್ಕಿಂತ ಅಧಿಕ ಸಾಧನೆಯನ್ನು ಮಾಡಿದ್ದರೆ, ಶಿವಮೊಗ್ಗ, ಬೆಳಗಾವಿ, ಭೀಮರಾಯನಗುಡಿ ಮತ್ತು ಕಲ್ಬುರ್ಗಿಯ ಕಾಡಾಗಳ ಕೊರತೆಯು ಶೇಕಡಾ 34ರಿಂದ ಶೇಕಡಾ 50ರವರೆಗೆ ಇದ್ದಿತು.

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ಅಧ್ಯಯನ ವರದಿ 2009ರ (2003ರಲ್ಲಿ ನಡೆಸಿದ್ದುದು) ಪ್ರಕಾರ, ಕರ್ನಾಟಕದಲ್ಲಿ 85 ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳ ಅಚ್ಚುಕಟ್ಟು ಪ್ರದೇಶದಲ್ಲಿ, ಜೌಗು ಹಾಗೂ ಲವಣ ಪ್ರಭಾವಿತ ಪ್ರದೇಶಗಳು ಕ್ರಮವಾಗಿ 11,974 ಹೆಕ್ಟೇರ್‌ಗಳು ಹಾಗೂ 5,781 ಹೆಕ್ಟೇರ್‌ಗಳಷ್ಟಿದ್ದವು. ಇದರ ಪೈಕಿ, 12 ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳ ಸಂಬಂಧದಲ್ಲಿ, ಭಾರತ ಸರ್ಕಾರದ ಜೊತೆ ಮಾಡಿಕೊಳ್ಳಲಾಗಿದ್ದ ಪರಸ್ಪರ ತಿಳುವಳಿಕೆ ಪತ್ರದ ಪ್ರಕಾರ, ಕರ್ನಾಟಕ ಸರ್ಕಾರವು ನಿರ್ಧಾರಣೆ ಮಾಡಿದಂತೆ (2010) ಪ್ರಭಾವಕ್ಕೊಳಗಾಗಿದ್ದ ಪ್ರದೇಶದ ವಿಸ್ತೀರ್ಣವು 2.41 ಲಕ್ಷ ಹೆಕ್ಟೇರ್ ಆಗಿತ್ತು. ಈ ರೀತಿಯಾಗಿ, ಕೆಲವು ವರ್ಷಗಳ ಅತ್ಯಲ್ಪ ಅವಧಿಯಲ್ಲಿ ಪ್ರಭಾವಕ್ಕೊಳಗಾಗಿದ್ದ ಪ್ರದೇಶಗಳು ಗಮನಾರ್ಹವಾಗಿ ಹೆಚ್ಚಾದವು ಹಾಗೂ ಇದನ್ನು ಹೆಚ್ಚುವರಿ ನೀರನ್ನು ಹೊರಹಾಕುವ ಬಸಿಗಾಲುವೆಗಳ ಅನುಪಸ್ಥಿತಿ ಹಾಗೂ ಅಸಮರ್ಪಕ ಚರಂಡಿ ವ್ಯವಸ್ಥೆಗೆ ಅಧ್ಯಾರೋಪಿಸಬಹುದು. ಇತರೆ ಯೋಜನೆಗಳಿಗೆ ಸಂಬಂಧಿಸಿದಂತೆ, ಪ್ರಭಾವಕ್ಕೊಳಗಾದ ಪ್ರದೇಶಗಳ ಮಾಹಿತಿಯು ಲಭ್ಯವಿರಲಿಲ್ಲ.

[15] ಇದು ಹಿಂದಿನ ವರ್ಷಗಳಿಂದ ಉಳಿದಿರುವ ಬಾಕಿ ಮತ್ತು ಹೊಸ ಸೇರ್ಪಡೆಗಳನ್ನು, ಇದ್ದರೆ, ಒಳಗೊಂಡಿದೆ

### *2.1.7.7 ಪ್ರಮಾಣಕಗಳಿಂದ ಮಾರ್ಗಪಲ್ಲಟ*

ಕೇಂದ್ರ ಸರ್ಕಾರವು ನೀಡಿದ್ದ ಮಾರ್ಗಸೂಚಿಗಳ (ಏಪ್ರಿಲ್ 2008) ಪ್ರಕಾರ, ಪ್ರಸ್ತುತ ಇರುವ ಬಸಿಗಾಲುವೆಗಳನ್ನು ಭೂ ಮಾಲೀಕರು ಅಥವಾ ಕಾಡಾಗಳು ನೀರು ಬಳಕೆ ಸಹಕಾರ ಸಂಘಗಳನ್ನು ರಚಿಸಿದನಂತರ ಆ ಸಂಬಂಧಿತ ಸಂಘಗಳು ನಿರ್ವಹಿಸಬೇಕು ಮತ್ತು ಕಾಡಾಗಳು ಅವುಗಳ ನಿರ್ವಹಣೆಗಾಗಲೀ ಅಥವಾ ಸುಧಾರಣೆಗಾಗಲೀ ವೆಚ್ಚ ಭರಿಸುವಂತಿಲ್ಲ. ಕಾಡಾ, ಬೆಳಗಾವಿಯಲ್ಲಿ, 2011–12 ಹಾಗೂ 2012–13ರ ನಡುವಿನ ಅವಧಿಯಲ್ಲಿ ಪ್ರಸ್ತುತ ಇದ್ದಂತಹ ಬಸಿಗಾಲುವೆಗಳ ಆಳವನ್ನು ಹೆಚ್ಚಿಸುವ/ಅಗಲಗೊಳಿಸುವುದಕ್ಕೆ ಸಂಬಂಧಿಸಿದ 239 ಕಾಮಗಾರಿಗಳ ಮೇಲೆ ಪ್ರಮಾಣಕಗಳ ಉಲ್ಲಂಘನೆಯಲ್ಲಿ ₹ 17.13 ಕೋಟಿ ವೆಚ್ಚವನ್ನು, ಈ ಬಸಿಗಾಲುವೆಗಳು ಮೊದಲು ನಿರ್ಮಿತವಾಗಿರಲಿಲ್ಲವೆಂದು ಪ್ರಮಾಣೀಕರಿಸುವ ಮೂಲಕ ಭರಿಸಲಾಗಿದ್ದಿತು. ಅಂದಾಜುಗಳ ಜೊತೆಯಲ್ಲಿ ಲಗತ್ತಿಸಲಾಗಿದ್ದ ನಕಾಶೆಗಳು ನೀರನ್ನು ಬಿಡುಗಡೆ ಮಾಡುವ ಮೂಲ ವಿಭಾಗವಲ್ಲದೇ ನಿರ್ಮಿಸಲು ಪ್ರಸ್ತಾಪಿಸಿದ್ದ ಅಧಿಕ ನೀರನ್ನು ಬಿಡುಗಡೆ ಮಾಡುವ ವಿಭಾಗವನ್ನೂ ತೋರಿಸುತ್ತಿದ್ದವು. ಈ ರೀತಿಯಾಗಿ ಕಾಲುವೆಗಳ ಆಳವನ್ನು ಹೆಚ್ಚಿಸುವ/ಅಗಲಗೊಳಿಸುವುದಕ್ಕೆ ಸಂಬಂಧಿಸಿದಂತೆ, ಇವುಗಳನ್ನು ಈ ಹಿಂದೆ ನಿರ್ಮಿಸಿರಲಿಲ್ಲವೆಂದು ಪ್ರಮಾಣೀಕರಿಸುವ ಮೂಲಕ ಭರಿಸಲಾದ ₹ 17.13 ಕೋಟಿ ವೆಚ್ಚವು ವಾಸ್ತವಾಂಶವನ್ನು ತಪ್ಪಾಗಿ ನಿರೂಪಿಸಿತ್ತು ಹಾಗೂ ಈ ರೀತಿಯಾಗಿ ನಿಯಮಬಾಹಿರವಾಗಿದ್ದಿತು.

ಜಲ ನಿರ್ವಹಣೆ ಕೈಪಿಡಿಯ ರೂಪುರೇಖೆ ಮಾರ್ಗಸೂಚಿಗಳ ಪ್ರಕಾರ, ನೀರನ್ನು ಹೊರ ಬಿಡುವುದಕ್ಕಾಗಿ 5.38 ಕ್ಯುಮೆಕ್ಸ್[16] ಸಾಮರ್ಥ್ಯದ ನೀರನ್ನು ಸಾಗಿಸುವ ಒಂದು ನಾಲೆಯು 2,000 ಹೆಕ್ಟೇರ್‌ಗಳಷ್ಟು ಜಮೀನಿಗೆ ಸಾಕಾಗುತ್ತದೆ. ಕಾಡಾ, ಬೆಳಗಾವಿಯಲ್ಲಿ 249 ಅಂದಾಜುಗಳ ಪರೀಕ್ಷಾ ತನಿಖೆಯು, ಬಸಿಗಾಲುವೆಗಳ ಮೂಲಕ ನೀರನ್ನು ಹೊರಹಾಕುವ ನಾಲೆಗೆ ಪ್ರಸ್ತಾಪಿಸಲಾಗಿದ್ದ ಪ್ರದೇಶವು 38ರಿಂದ 318 ಹೆಕ್ಟೇರ್‌ಗಳಾಗಿದ್ದು, ಅದಕ್ಕಾಗಿ 0.86 ಕ್ಯುಮೆಕ್ಸ್ ನೀರನ್ನು ಹೊರಬಿಡುವ ಸಾಮರ್ಥ್ಯದ 2.50 ಚದರ ಮೀಟರ್ (ನಾಲ್ಕು ಮೀಟರುಗಳ ಮೇಲ್ತುದಿ ಅಗಲ, ನಾಲ್ಕು ಮೀಟರುಗಳ ಅಡಿಭಾಗ, ಒಂದು ಮೀಟರು ಎತ್ತರ 1:1.5 ಅನುಪಾತದ ಪಾರ್ಶ್ವ ಇಳಿಜಾರಿನೊಂದಿಗೆ) ಅಡ್ಡ ವಿಭಾಗ ಪ್ರದೇಶವು ಹೆಚ್ಚುವರಿ ನೀರನ್ನು ಹೊರಹಾಕಲು ಸಾಕಾಗುತ್ತಿದ್ದಿತು ಎನ್ನುವುದನ್ನು ತೋರಿಸಿಕೊಟ್ಟಿತು.

ಅಗತ್ಯತೆ ಇದ್ದಂತಹ 2.50 ಚದರ ಮೀಟರ್‌ಗಳಷ್ಟು ವಿಭಾಗೀಯ ಪ್ರದೇಶಕ್ಕೆ ಪ್ರತಿಯಾಗಿ, ವಿಭಾಗವು 3ರಿಂದ 10.87 ಚದರ ಮೀಟರ್‌ವರೆಗಿನ ವಿಭಾಗೀಯ ಪ್ರದೇಶಗಳೊಂದಿಗೆ ವ್ಯತ್ಯಯಗಳಿಂದ ಕೂಡಿದ ನಾಲಾ ಸಾಮರ್ಥ್ಯಗಳ ಬಸಿಗಾಲುವೆಗಳನ್ನು 28 ಕ್ಯುಮೆಕ್ಸ್‌ವರೆಗೆ ನೀರನ್ನು ಹೊರಹಾಕುವಿಕೆಯೊಂದಿಗೆ ರಚಿಸಿದ್ದಿತು ಎನ್ನುವುದನ್ನು ನಾವು ಗಮನಿಸಿದೆವು. ಅಗತ್ಯವಿದ್ದುದಕ್ಕಿಂತ ಅಧಿಕ ಸಾಮರ್ಥ್ಯದ ಬಸಿಗಾಲುವೆಗಳ ನಿರ್ಮಾಣವು ಅಸಮರ್ಥನೀಯವಾಗಿದ್ದಿತು ಹಾಗೂ ಅದು ₹ 10.74 ಕೋಟಿ ತಪ್ಪಿಸಬಹುದಾಗಿದ್ದ ವೆಚ್ಚವು ಒಳಗೊಂಡಂತೆ 20.23 ಲಕ್ಷ ಘನ ಮೀಟರುಗಳಷ್ಟು ಮಣ್ಣನ್ನು ಅಧಿಕವಾಗಿ ತೆಗೆದು ಹಾಕುವಲ್ಲಿ ಪರಿಣಮಿಸಿತು.

### *2.1.7.8 ಜೌಗು ಪ್ರದೇಶಗಳ ಪುನರ್ಸುಧಾರಣೆ*

ನಿಕೃಷ್ಟ ಮಟ್ಟದ ಚರಂಡಿಗಳಿರುವ ಪ್ರದೇಶಗಳಲ್ಲಿ ಅಧಿಕ ಪ್ರಮಾಣದ ನೀರಾವರಿಯು ನೀರು ನಿಲ್ಲುವಲ್ಲಿ ಹಾಗೂ ಮಣ್ಣಿನ ಲವಣೀಕರಣವಾಗುವಲ್ಲಿ ಪರಿಣಮಿಸುತ್ತದೆ. ನೀರು ಮಣ್ಣಿನ ಆಳಕ್ಕೆ ಭೇದಿಸಿಕೊಂಡು ಹೋಗದಿದ್ದಲ್ಲಿ ಮಣ್ಣಿನ ಮೇಲ್ಪದರದಲ್ಲಿ ನೀರು ನಿಲ್ಲುವಿಕೆಯು ಅಧಿಕಗೊಳ್ಳುತ್ತದೆ. ಸಿಮೆಂಟ್ ಒಳಪದರವಿರದ ಕಾಲುವೆಯು ಕೂಡ ನೀರಿನ ಮಟ್ಟದ ಏರಿಕೆಗೆ ಕಾರಣವಾಗುತ್ತದೆ. ಅಧಿಕ ನೀರಿನ ಕಾರಣ ಗಿಡಗಳ ಬೇರುಗಳಿಗೂ ಉಸಿರುಗಟ್ಟಿದಂತಾಗುವುದರಿಂದ ಬೆಳೆ ಉತ್ಪತ್ತಿಯ ಮೇಲೆ ಪ್ರತಿಕೂಲ ಪರಿಣಾಮವಾಗುತ್ತದೆ. ಈ ಸಮಸ್ಯೆಯ ದೃಷ್ಟಿಯಿಂದ, ಯೋಜನೆಗಳ ನೀರಾವರಿಗೊಳಪಟ್ಟ ಅಚ್ಚುಕಟ್ಟು ಪ್ರದೇಶಗಳ ಜೌಗು ಪ್ರದೇಶಗಳ ಪುನರ್ಸುಧಾರಣೆಯನ್ನು ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ಜಲ ನಿರ್ವಹಣಾ ಕಾರ್ಯಕ್ರಮದ ಅಡಿಯಲ್ಲಿ ವ್ಯಾಪಿಸಲಾಗಿದ್ದಿತು.

---

[16] ಸೆಕೆಂಡು ಒಂದಕ್ಕೆ ಘನ ಮೀಟರು

ಮಣ್ಣಿನ ಮೇಲ್ಪದರದ ನೀರನ್ನು ಹೊರಬಿಡುವುದಕ್ಕಾಗಿ ವಾಸ್ತವಿಕ ವೆಚ್ಚದ ಶೇಕಡಾ 50ರವರೆಗೆ ಅಥವಾ ಹೆಕ್ಟೇರು ಒಂದಕ್ಕೆ ₹ 10,000 ದಂತೆ ಹಾಗೂ ಉಪ–ಮೇಲ್ಪದರ ಪ್ರದೇಶಕ್ಕೆ ಹೆಕ್ಟೇರು ಒಂದಕ್ಕೆ ₹ 25,000ದಂತೆ ಜೌಗು ಪ್ರದೇಶದ ಪುನರ್ಸುಧಾರಣೆಗಾಗಿ ಕೇಂದ್ರ ಸಹಾಯಧನ ಒದಗಿಸಲಾಗುವುದು. ಈ ಚಟುವಟಿಕೆಯನ್ನು ರಾಜ್ಯ ಸರ್ಕಾರವು, ಕೇಂದ್ರ ಜಲ ಆಯೋಗದ ಪ್ರಾದೇಶಿಕ ಕಚೇರಿಯ ಪರಿಶೀಲನೆ ಮತ್ತು ಶಿಫಾರಸಿನ ನಂತರ ಪ್ರಸ್ತಾವನೆಗಳಿಗೆ ಅನುಮತಿ ನೀಡುವ ಭಾರತ ಸರ್ಕಾರದ ಪೂರ್ವಾನುಮತಿಯೊಂದಿಗೆ ಕೈಗೊಳ್ಳಬಹುದು.

ಈ ಭಾಗದ ಅಡಿಯಲ್ಲಿ ಈ ಕೆಳಗಿನ ಕಾಮಗಾರಿ ಅಂಶಗಳನ್ನು ಕೈಗೊಳ್ಳಲಾಗುವುದು:

- ನೀರಾವರಿ ಯೋಜನೆಗಳ ಅಚ್ಚುಕಟ್ಟು ಪ್ರದೇಶದಲ್ಲಿನ ಸಮಸ್ಯೆಯಿಂದ ಕೂಡಿದ ಪ್ರದೇಶಗಳ ನಿರ್ಧಾರಣೆ;
- ತಡೆಯುವಿಕೆ ಮತ್ತು ಪುನರ್ಸುಧಾರಣಾ ಕ್ರಮಗಳಿಗಾಗಿ ಯೋಜನೆ ಮತ್ತು ರೂಪುರೇಖೆಗಳನ್ನು ತಯಾರಿಸುವುದು;
- ಮುನ್ನೆಚ್ಚರಿಕೆಯ ಹಾಗೂ ಪರಿಹಾರಕ ಚಟುವಟಿಕೆಗಳನ್ನು ಕೈಗೊಳ್ಳುವುದು;
- ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ.

ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ನಡುವಿನ ಪರಸ್ಪರ ತಿಳುವಳಿಕೆ ಪತ್ರದ ಪ್ರಕಾರ (ನವೆಂಬರ್ 2010), 2010–14ರ ಅವಧಿಯಲ್ಲಿ ಐದು ಕಾಡಾಗಳ ಅಡಿಯಲ್ಲಿನ (ಕಾಡಾ, ಮೈಸೂರು ಹೊರತುಪಡಿಸಿ) 1.56 ಲಕ್ಷ ಹೆಕ್ಟೇರ್ ಜೌಗು ಪ್ರದೇಶವನ್ನು ಪುನರ್ಸುಧಾರಣೆಗೊಳಿಸಬೇಕಿದ್ದಿತು. ಇದಕ್ಕೆ ಪ್ರತಿಯಾಗಿ ಸರ್ಕಾರವು 2010–14ರಲ್ಲಿ 2.63 ಲಕ್ಷ ಹೆಕ್ಟೇರ್‌ಗಳಿಗೆ ಕಾರ್ಯಸೂಚಿಯನ್ನು ರೂಪಿಸಿತು ಹಾಗೂ 63,794 ಹೆಕ್ಟೇರ್‌ಗಳನ್ನು ಮಾತ್ರ ಪುನರ್ಸುಧಾರಣೆ ಮಾಡಿತು. 2010–14ರಲ್ಲಿ ಪ್ರತಿ ಕಾಡಾದ ಅಡಿಯಲ್ಲಿನ ಜೌಗು ಪ್ರದೇಶದಲ್ಲಿ ಕೈಗೊಳ್ಳಲಾದ ಪುನರ್ಸುಧಾರಣಾ ಕಾಮಗಾರಿಗಳ ವಿವರಗಳನ್ನು **ಕೋಷ್ಟಕ 2.7**ರಲ್ಲಿ ನೀಡಲಾಗಿದೆ:

**ಕೋಷ್ಟಕ 2.7: ಜೌಗು ಪ್ರದೇಶದ ಪುನರ್ಸುಧಾರಣೆಯ ವಿವರಗಳು**

| ಕಾಡಾದ ಹೆಸರು | ಭೌತಿಕ – ವಿಸ್ತೀರ್ಣ ಹೆಕ್ಟೇರ್‌ನಲ್ಲಿ | | |
|---|---|---|---|
| | ಕಾರ್ಯಸೂಚಿ | ಸಾಧನೆ | ಶೇಕಡಾವಾರು |
| ಮೈಸೂರು | 13,557 | 13,536 | 100 |
| ಮುನಿರಾಬಾದ್ | 33,182 | 7,298 | 22 |
| ಶಿವಮೊಗ್ಗ | 31,431 | 9,879 | 31 |
| ಬೆಳಗಾವಿ | 1,24,085 | 25,501 | 21 |
| ಭೀಮರಾಯನಗುಡಿ | 43,175 | 3,872 | 09 |
| ಕಲ್ಬುರ್ಗಿ | 17,888 | 3,708 | 21 |
| **ಒಟ್ಟು** | **2,63,318** | **63,794** | **24** |

(ಆಧಾರ: ಜಲ ಸಂಪನ್ಮೂಲ ಇಲಾಖೆಯ ಕಾರ್ಯದರ್ಶಿಯಿಂದ ಸಲ್ಲಿಸಲ್ಪಟ್ಟ ಪ್ರಗತಿ ವರದಿ)

ಐದು ಕಾಡಾಗಳಲ್ಲಿ ಒಟ್ಟಾರೆ ಶೇಕಡಾ 24ರ ಸಾಧನೆಯೊಂದಿಗೆ ಕೊರತೆಗಳನ್ನು ದಾಖಲಿಸಲಾಗಿದ್ದಿತು ಎನ್ನುವುದನ್ನು ಗಮನಿಸಲಾಯಿತು. ಕಾಡಾಗಳು, ನಿಕೃಷ್ಟ ಮಟ್ಟದ ಪ್ರಗತಿಗೆ ಕಾರಣವನ್ನು, ಸಲ್ಲಿಸಲಾಗಿದ್ದ ಪ್ರಸ್ತಾವನೆಗಳಿಗೆ ಭಾರತ ಸರ್ಕಾರದ ಅನುಮೋದನೆಯು ಸಿಗದಿದ್ದುದಕ್ಕೆ ಆರೋಪಿಸಿದವು. ಕರ್ನಾಟಕ ಸರ್ಕಾರವು ಅಪೂರ್ಣ/ತಪ್ಪು ಪ್ರಸ್ತಾವನೆಗಳನ್ನು ಕಳುಹಿಸಿದ್ದು ಭಾರತ ಸರ್ಕಾರದಿಂದ ವಿಳಂಬಿತ ಅನುಮೋದನೆ/ಶೂನ್ಯ ಅನುಮೋದನೆಯಲ್ಲಿ ಪರಿಣಮಿಸಿದ್ದಿತಾದ್ದರಿಂದ ಉತ್ತರವನ್ನು ಒಪ್ಪಲಾಗಲಿಲ್ಲ.

### *2.1.7.9 ಜಮೀನು ಸಮತಟ್ಟುಗೊಳಿಸುವುದು, ವರ್ಗೀಕರಿಸುವುದು ಮತ್ತು ರೂಪಕೊಡುವುದು*

ಜಮೀನನ್ನು ಸಮತಟ್ಟುಗೊಳಿಸುವುದು, ಅಚ್ಚುಕಟ್ಟು ಪ್ರದೇಶದಲ್ಲೆಡೆಯಲ್ಲಿ ನೀರು ಸಮವಾಗಿ ಹರಡಿಕೊಳ್ಳುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ರೈತರ ಜಮೀನುಗಳಲ್ಲಿ ಹೊಲಗಾಲುವೆಗಳ ರಚನೆಗೆ ಮುನ್ನ ಕೈಗೊಳ್ಳಲಾಗುವ ಒಂದು ಪೂರ್ವತಯಾರಿ ಕಾಮಗಾರಿಯಾಗಿದೆ. ಸರ್ಕಾರವು ಸಮತಟ್ಟುಗೊಳಿಸಬೇಕಾದ ಜಮೀನಿನ ವ್ಯಾಪ್ತಿಯನ್ನು ನಿರ್ಧರಿಸುವ ಹಾಗೂ ತಾಂತ್ರಿಕ ಸಹಾಯವನ್ನು ಒದಗಿಸುವ ಅಗತ್ಯವಿದೆ. ಈ ಕಾಮಗಾರಿಯನ್ನು ರೈತರು ಸ್ವತ: ತಾವೇ ತಮ್ಮ ಸ್ವಂತ ವೆಚ್ಚದಲ್ಲಿ ಅಥವಾ ಸರ್ಕಾರವು ಬ್ಯಾಂಕುಗಳ ಮೂಲಕ ವ್ಯವಸ್ಥೆ ಮಾಡುವ ಹಣಕಾಸಿನ ಸಹಾಯದ ಮೂಲಕ ಮಾಡಬೇಕಾಗುತ್ತದೆ.

ಎಂಟು ಯೋಜನೆಗಳಲ್ಲಿ, ಸಮತಟ್ಟು ಮಾಡುವ ಅಗತ್ಯತೆಯನ್ನು ನಿರ್ಧಾರಿಸಲಾಗಿದ್ದ 18.68 ಲಕ್ಷ ಹೆಕ್ಟೇರ್‌ಗಳಿಗೆ ಪ್ರತಿಯಾಗಿ 9.90 ಲಕ್ಷ ಹೆಕ್ಟೇರ್‌ಗಳಷ್ಟು ಜಮೀನಿನ ಸಮತಟ್ಟುಮಾಡುವಿಕೆಯು ಮಾರ್ಚ್ 2009ರವರೆಗೆ ಮುಗಿದಿತ್ತು ಎನ್ನುವುದನ್ನು ನಾವು ಗಮನಿಸಿದೆವು. ಉಳಿದ 8.78 ಲಕ್ಷ ಹೆಕ್ಟೇರ್‌ಗಳಿಗೆ ಪ್ರತಿಯಾಗಿ ಕೇವಲ 24,408 ಹೆಕ್ಟೇರ್‌ಗಳಲ್ಲಿ ಮಾತ್ರ 2009–14ರಲ್ಲಿ ನಿರ್ವಹಿಸಿ ಬಹಳಷ್ಟು ಪ್ರದೇಶವನ್ನು ಸಮತಟ್ಟುಗೊಳಿಸದೆಯೇ ಬಿಡಲಾಗಿದ್ದಿತು, ಇದು, ಈ ಚಟುವಟಿಕೆಗೆ ಸಮರ್ಪಕ ಪ್ರಾಧಾನ್ಯತೆಯನ್ನು ನೀಡದಿದ್ದುದನ್ನು ಸೂಚಿಸುತ್ತಿದ್ದಿತು. ಹೇಮಾವತಿ ಯೋಜನೆಯಲ್ಲಿ ಜಮೀನು ಸಮತಟ್ಟು ಕಾಮಗಾರಿಯನ್ನು ಹೊಲಗಾಲುವೆಗಳು ಪೂರ್ಣವಾದ ನಂತರ ಪೂರ್ಣಗೊಳಿಸಲಾಗುವುದು ಹಾಗೂ ಜಮೀನು ಸಮತಟ್ಟು ಕಾಮಗಾರಿಯನ್ನು ಕೈಗೊಳ್ಳಲು ರೈತರಿಗೆ ಮಾರ್ಗದರ್ಶನ ನೀಡಲಾಗುವುದೆಂದು ಕಾಡಾ, ಮೈಸೂರು ಉತ್ತರಿಸಿತು (ಜುಲೈ 2014).

### *2.1.7.10 ವ್ಯವಸ್ಥೆಯಲ್ಲಿನ ಲೋಪದೋಷಗಳನ್ನು ಸರಿಪಡಿಸುವಿಕೆ*

ವ್ಯವಸ್ಥೆಯಲ್ಲಿನ ಲೋಪದೋಷಗಳನ್ನು ಸರಿಪಡಿಸುವಿಕೆಯು, ಬದುವಿನ ವಾಟಗಳನ್ನು ಪೂರ್ವಸ್ಥಿತಿಗೆ ತರುವುದು, ಅಳತೆ ಸಾಧನಗಳನ್ನು ಒದಗಿಸುವುದು, ಏರಿಯಲ್ಲಿ ಮಣ್ಣು ಅಗೆಯುವುದು, ಹೂಳು ತೆಗೆಯುವುದು, ಪಾಯ, ಇಳಿಜಾರುಗಳನ್ನು ಸರಿಪಡಿಸುವುದು, ಮುಂತಾದ ಕಾರ್ಯಾಚರಣೆ ಮತ್ತು ನಿರ್ವಹಣಾ ಚಟುವಟಿಕೆಗಳನ್ನು ಒಳಗೊಂಡಿದೆ. ದೇಶದಲ್ಲಿನ ಅನೇಕ ನೀರಾವರಿ ಯೋಜನೆಗಳು, "ಹೊರತೂಬು ಮಟ್ಟ"ದ ಮೇಲಿನ ವ್ಯವಸ್ಥೆಯ ಲೋಪದೋಷಗಳಿಂದ ತಮ್ಮ ಸಾಮರ್ಥ್ಯಕ್ಕಿಂತಲೂ ಕಡಿಮೆ ಮಟ್ಟದಲ್ಲಿ ಕಾರ್ಯ ನಿರ್ವಹಿಸಿತ್ತಿದ್ದವು. ನೀರಾವರಿಯ ದಕ್ಷತೆಯನ್ನು ಉತ್ತಮಗೊಳಿಸುವ ಉದ್ದೇಶದಿಂದ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ಜಲ ನಿರ್ವಹಣಾ ಕಾರ್ಯಕ್ರಮವನ್ನು 4.25 ಕ್ಯುಮೆಕ್ಸ್ ಸಾಮರ್ಥ್ಯದ ವಿತರಕಗಳ ವ್ಯವಸ್ಥೆಯಲ್ಲಿನ ಲೋಪದೋಷಗಳನ್ನು ಸೇರಿಸಿಕೊಳ್ಳುವ ರೀತಿಯಲ್ಲಿ ವಿಸ್ತರಿಸಲಾಯಿತು; ಅದು ಸಂಭವನೀಯವಾಗಿ, ಹೊರತೂಬಿನ ಸಾಮರ್ಥ್ಯವನ್ನು ಸುಧಾರಿಸುವುದು. ಭಾರತ ಸರ್ಕಾರವು ಒಂದು ಹೆಕ್ಟೇರ್‌ಗೆ ವಾಸ್ತವಿಕ ವೆಚ್ಚದ ಶೇಕಡಾ 50ರಷ್ಟು ಅಥವಾ ಘಟಕ ವೆಚ್ಚ ₹ 6,000ದ ಶೇಕಡಾ 50ರಷ್ಟು, ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟನ್ನು ಪುನರ್–ತುಂಬಿಕೊಡುವುದು. ಪುನಸ್ಥಾಪನೆ ಕಾಮಗಾರಿಯನ್ನು ಕೈಗೊಳ್ಳುವ ಮೊದಲು ರಾಜ್ಯ ಸರ್ಕಾರವು ಭಾರತ ಸರ್ಕಾರದ ಪೂರ್ವಾನುಮತಿಯನ್ನು ಪಡೆದುಕೊಳ್ಳುವ ಅಗತ್ಯವಿದೆ.

ಎಂಟು ಯೋಜನೆಗಳ 2.36 ಲಕ್ಷ ಹೆಕ್ಟೇರ್‌ಗಳಲ್ಲಿ ವ್ಯವಸ್ಥೆಯ ಲೋಪದೋಷಗಳನ್ನು ಸರಿಪಡಿಸಲು ಭಾರತ ಸರ್ಕಾರವು, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ಜಲ ನಿರ್ವಹಣೆ ಅಡಿಯಲ್ಲಿ ಸಹಾಯದ ಒಪ್ಪಿಗೆಯನ್ನು ನೀಡಿದ್ದಿತು (ನವೆಂಬರ್ 2010). ಇದಕ್ಕೆ ಪ್ರತಿಯಾಗಿ 2010–14ರಲ್ಲಿ ಸರ್ಕಾರವು, ಎಂಟು ಯೋಜನೆಗಳ ವ್ಯಾಪ್ತಿಯ 1.30 ಲಕ್ಷ ಹೆಕ್ಟೇರ್‌ಗಳ ಗುರಿಯನ್ನು ನಿಗದಿಪಡಿಸಿದ್ದಿತು, ಆದರೆ ಐದು ಯೋಜನೆಗಳಲ್ಲಿ 8,681 ಹೆಕ್ಟೇರುಗಳನ್ನು ಮಾತ್ರ ಪುನರ್ಸ್ಥಾಪಿಸಲಾಯಿತು. ಸಾಧನೆಯು, ಭಾರತ ಸರ್ಕಾರವು ಅನುಮೋದಿಸಿದ್ದ ಪ್ರದೇಶದ ಕೇವಲ ಶೇಕಡಾ ನಾಲ್ಕರಷ್ಟಿತ್ತು. ಮಾರ್ಗಸೂಚಿಗಳ ಪ್ರಕಾರ ಅಗತ್ಯವಿದ್ದರೂ, ಗುರಿಯಾಗಿರಿಸಿಕೊಳ್ಳಲಾಗಿದ್ದ 1.30 ಲಕ್ಷ ಹೆಕ್ಟೇರ್‌ಗಳ ಕಡಿತಕ್ಕೆ ರಾಜ್ಯ ಸರ್ಕಾರವು ಪೂರ್ವಾನುಮತಿಯನ್ನು ಪಡೆದಿರಲಿಲ್ಲ. ಮೂರು ಕಾಡಾಗಳು ಸಾಧಿಸಿದ ಭೌತಿಕ ಗುರಿಗಳ ಸ್ಥಿತಿಗತಿಯನ್ನು **ಕೋಷ್ಟಕ 2.8**ರಲ್ಲಿ ತೋರಿಸಲಾಗಿದೆ:

**ಕೋಷ್ಟಕ 2.8: ಸಾಧಿಸಲಾದ ಭೌತಿಕ ಗುರಿಗಳು**

| ಕಾಡಾದ ಹೆಸರು | ಯೋಜನೆಗಳ ಸಂಖ್ಯೆ | ಭಾರತ ಸರ್ಕಾರದಿಂದ ಅನುಮೋದಿತವಾದದ್ದು | ಗುರಿ | ಸಾಧನೆ |
|---|---|---|---|---|
| | | ವಿಸ್ತೀರ್ಣ ಹೆಕ್ಟೇರ್‌ನಲ್ಲಿ | | |
| ಶಿವಮೊಗ್ಗ | 1 | 48,000 | 30,700 | ಏನೂ ಇಲ್ಲ |
| ಬೆಳಗಾವಿ | 2 | 1,32,300 | 46,300 | ಏನೂ ಇಲ್ಲ |
| ಕಲ್ಬುರ್ಗಿ | 5 | 55,706 | 53,192 | 8,681 |
| **ಒಟ್ಟು** | **8** | **2,36,006** | **1,30,192** | **8,681** |

(ಆಧಾರ: ಜಲ ಸಂಪನ್ಮೂಲ ಇಲಾಖೆಯ ಕಾರ್ಯದರ್ಶಿಯಿಂದ ಸಲ್ಲಿಸಲ್ಪಟ್ಟ ಪ್ರಗತಿ ವರದಿ)

ಕಾಡಾ, ಕಲ್ಬುರ್ಗಿಯು ಮಾತ್ರ ಈ ಭಾಗವನ್ನು ಕಾರ್ಯಗತಗೊಳಿಸಿದರೆ, ಶಿವಮೊಗ್ಗ ಮತ್ತು ಬೆಳಗಾವಿಯ ಕಾಡಾಗಳು ಈ ಕಾಮಗಾರಿಯನ್ನು ಕೈಗೊಳ್ಳಲಿಲ್ಲ.

ಈ ರೀತಿಯಾಗಿ, ಎಂಟು ಯೋಜನೆಗಳಲ್ಲಿನ ಪುನಸ್ಸ್ಥಾಪನೆ ಅಗತ್ಯವಿದ್ದ 2.27 ಲಕ್ಷ ಹೆಕ್ಟೇರ್ ಪ್ರದೇಶವು ಕಡೆಗಣಿಸಲ್ಪಟ್ಟಿತು. ಎಲ್ಲೆಲ್ಲಿ ಕ್ಷೇತ್ರಾಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆಯೋ ಹಾಗೂ ಪೂರ್ಣಗೊಳಿಸಲಾಗಿದೆಯೋ ಅಂತಹ ಕಡೆ ಗುರುತಿಸಲಾಗಿರುವ ಲೋಪದೋಷಗಳನ್ನು ಸರಿಪಡಿಸದ ಹೊರತು, ಅವುಗಳ ಸಂಪೂರ್ಣ ಸಾಮರ್ಥ್ಯವನ್ನು ಸಾಧಿಸಲಾಗುವುದಿಲ್ಲ. ನಾಲೆಗಳಲ್ಲಿನ ಸೋರಿಕೆಯು ಅಚ್ಚುಕಟ್ಟು ಪ್ರದೇಶದ ತುಟ್ಟತುದಿಯ ಭಾಗವು ಸೊರಗುವುದರಲ್ಲಿ ಪರಿಣಮಿಸುತ್ತದೆಯೆಂದು ಕಾಡಾ, ಬೆಳಗಾವಿಯು ಉತ್ತರಿಸಿತು (ಅಕ್ಟೋಬರ್ 2014). ವ್ಯವಸ್ಥೆಯಲ್ಲಿನ ಲೋಪದೋಷಗಳನ್ನು ಸರಿಪಡಿಸಲು ಕ್ರಮಗಳನ್ನು ಕಾಡಾ ಕೈಗೊಳ್ಳಬೇಕಿದ್ದಿತಾದ್ದರಿಂದ ಉತ್ತರವನ್ನು ಒಪ್ಪಲಾಗಲಿಲ್ಲ.

### *2.1.7.11 ವಿಸ್ತರಣಾ ಸೇವೆಗಳು*

ಮುಂದುವರೆದಿರುವ ತಂತ್ರಜ್ಞಾನದ ಕಾರಣ, ನೀರಿನ ವೈಜ್ಞಾನಿಕ ಬಳಕೆಯ ಬಗ್ಗೆ ರೂಢಿಯಲ್ಲಿರುವ ಅತ್ಯುತ್ತಮ ಪರಿಪಾಠಗಳ ಅರಿವನ್ನು ರೈತರಿಗೆ ನೀಡುವ ಉದ್ದೇಶದಿಂದ, ಕ್ಷೇತ್ರ ಪ್ರಯೋಗಗಳು, ಬೆಳೆ ಪ್ರದರ್ಶನಗಳು, ತರಬೇತಿ, ಇತ್ಯಾದಿಗಳನ್ನು ಒದಗಿಸುವುದು ಅತ್ಯಗತ್ಯವಾಗಿದೆ, ಅದು ಲಭ್ಯವಿರುವ ನೀರನ್ನು ಅತ್ಯುತ್ತಮವಾಗಿ ಬಳಸಿಕೊಳ್ಳುವಲ್ಲಿ ಫಲ ನೀಡುತ್ತದೆ.

**ಅಳವಡಿಕೆ ಪ್ರಯೋಗಗಳು ಮತ್ತು ಪ್ರದರ್ಶನಗಳು**

ಅಳವಡಿಕೆ ಕ್ಷೇತ್ರ ಪ್ರಯೋಗಗಳು, ನೀರನ್ನು ಸ್ವೀಕರಿಸುವುದಕ್ಕಾಗಿ ಜಮೀನನ್ನು ತಯಾರಿ ಮಾಡುವುದು, ಬದು ಪಟ್ಟಿಗಳ ಮೂಲಕ ನೀರಾವರಿಯ ಪದ್ಧತಿಗಳನ್ನು ಉತ್ತಮಗೊಳಿಸುವುದು, ಜಮೀನಿನ ಅತ್ಯುತ್ತಮ ಅವಧಿ, ಸೂಕ್ತ ಗಾತ್ರದ ತೊರೆ, ಮುಂತಾದುವನ್ನು ನಿರ್ಧರಿಸಲು ತಡೆ ಜಲಾಶಯ ಇವುಗಳನ್ನು ಒಳಗೊಂಡಿರುತ್ತವೆ. ಸೃಷ್ಟಿಸಲಾಗಿರುವ ಸಾಮರ್ಥ್ಯವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದಕ್ಕಾಗಿ, ಲಭ್ಯವಿರುವ ನೀರಿನ ಸಮರ್ಪಕ ನಿರ್ವಹಣೆಯೊಂದಿಗೆ ಊಡಿಕೆಗಳ ಸಮತೋಲಿತ ಬಳಕೆ ಮತ್ತು ಸೂಕ್ತ ಬೆಳೆ ಪದ್ಧತಿಯನ್ನು ಯಾವ ರೀತಿ ಅಳವಡಿಸಿಕೊಳ್ಳಬಹುದು ಎನ್ನುವುದನ್ನು ಪ್ರಾಯೋಗಿಕವಾಗಿ ತೋರಿಸುವುದಕ್ಕಾಗಿ, ಬೆಳೆ ಪ್ರದರ್ಶನಗಳನ್ನು ರೈತರ ಜಮೀನಿನಲ್ಲಿ ನಡೆಸಲಾಗುವುದು.

ಈ ಕಾರ್ಯಚಟುವಟಿಕೆಗಳ ಪ್ರಾಮುಖ್ಯತೆಯನ್ನು ಗಮನದಲ್ಲಿಟ್ಟುಕೊಂಡು ಭಾರತ ಸರ್ಕಾರವು, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ಜಲ ನಿರ್ವಹಣೆಯ ಅಡಿಯಲ್ಲಿನ ಈ ಭಾಗದ ಮೇಲೆ ಭರಿಸಲಾದ ವೆಚ್ಚದ ಶೇಕಡಾ 75ರಷ್ಟನ್ನು ಮರು–ತುಂಬಿಕೊಡುತ್ತದೆ. ಭಾರತ ಸರ್ಕಾರದ ಜೊತೆ ಮಾಡಿಕೊಳ್ಳಲಾದ ಪರಸ್ಪರ ತಿಳುವಳಿಕೆ ಪತ್ರದ ಪ್ರಕಾರ, 2010–14ರಲ್ಲಿ ಸಾಧಿಸಬೇಕಾಗಿದ್ದ ಹಣಕಾಸಿನ ಗುರಿಯು ₹ 15.20 ಕೋಟಿ ಆಗಿತ್ತು. ಇದಕ್ಕೆ ಪ್ರತಿಯಾಗಿ, ರಾಜ್ಯ ಸರ್ಕಾರವು ಕೇವಲ ₹ 6.61 ಕೋಟಿ ಒದಗಿಸಿತು, ಇದರ ಪೈಕಿ ಕಾಡಾಗಳು ₹ 5.09 ಕೋಟಿ ವೆಚ್ಚ ಮಾಡಿದವು. ಕರ್ನಾಟಕ ಸರ್ಕಾರವು ಆಯವ್ಯಯ ಹಂಚಿಕೆಯನ್ನು ಕಡಿಮೆಗೊಳಿಸಿದ್ದು ಹಾಗೂ ಹಂಚಿಕೆ ಮಾಡಲಾಗಿದ್ದ ಮೊತ್ತವನ್ನು ಕಡಿಮೆ ಪ್ರಮಾಣದಲ್ಲಿ ಬಳಸಿಕೊಂಡಿದ್ದು, ಅಚ್ಚುಕಟ್ಟು ಪ್ರದೇಶದ ಸಮಗ್ರ ಅಭಿವೃದ್ಧಿಯ ಮೇಲೆ ಪ್ರಭಾವ ಬೀರಿದ್ದಲ್ಲದೇ, ₹ 6.44 ಕೋಟಿಯಷ್ಟು ಭಾರತ ಸರ್ಕಾರದ ಪಾಲನ್ನು (₹ 15.20 ಕೋಟಿ ಮತ್ತು ₹ 6.61 ಕೋಟಿ ನಡುವಿನ ವ್ಯತ್ಯಾಸದ ಶೇಕಡಾ 75ರಷ್ಟು) ಬಳಸಿಕೊಳ್ಳದಿರುವಲ್ಲಿ ಪರಿಣಮಿಸಿತು.

## 2.1.8 ತರಬೇತಿ

ಪ್ರಧಾನ ವ್ಯವಸ್ಥೆ, ಕ್ಷೇತ್ರ ಜಲ ನಿರ್ವಹಣೆ, ಆವರ್ತನೀಯ ನೀರು ಸರಬರಾಜಿನ ಜಾರಿಗೊಳಿಸುವಿಕೆ, ಕ್ಷೇತ್ರಾಭಿವೃದ್ಧಿ ಕಾಮಗಾರಿಗಳ ಯೋಜನೆ ಹಾಗೂ ರೂಪುರೇಖೆ ತಯಾರಿಕೆ, ಸಹಭಾಗಿತ್ವದ ನೀರಾವರಿ ನಿರ್ವಹಣೆ, ಮುಂತಾದವುಗಳಿಂದ ವಿತರಣೆಗಳನ್ನು ಉತ್ತಮಗೊಳಿಸುವುದಕ್ಕಾಗಿ, ವ್ಯವಸ್ಥಾಪನೆಯ ಮಟ್ಟದಲ್ಲಿ, ಕ್ಷೇತ್ರ ಸಿಬ್ಬಂದಿ ಮಟ್ಟದಲ್ಲಿ ನೀರಾವರಿ ಇಲಾಖೆಯ ಸಿಬ್ಬಂದಿಗೆ ಹಾಗೂ ಕಾಡಾದ ಸಂಘಗಳಿಗೆ ತರಬೇತಿ ನೀಡುವುದು ಮುಖ್ಯವಾಗಿದೆ. 2009–14ರ ಅವಧಿಯಲ್ಲಿ, ಆರು ಕಾಡಾಗಳ ಪೈಕಿ ಮೂರರಲ್ಲಿ ಅಂದರೆ ಮೈಸೂರು, ಮುನಿರಾಬಾದ್ ಹಾಗೂ ಬೆಳಗಾವಿಯಲ್ಲಿ ಕ್ಷೇತ್ರ ಸಿಬ್ಬಂದಿಗೆ ತರಬೇತಿ ಕಾರ್ಯಕ್ರಮವನ್ನು ವ್ಯವಸ್ಥೆ ಮಾಡಿರಲಿಲ್ಲ.

ಆದಾಗ್ಯೂ, ಈ ಅವಧಿಯಲ್ಲಿ ಎಲ್ಲಾ ಆರು ಕಾಡಾಗಳು ಸೇರಿದಂತೆ 1,36,930 ರೈತರಿಗೆ ತರಬೇತಿ ನೀಡುವ ಗುರಿಗೆ ಪ್ರತಿಯಾಗಿ 1,84,930 ರೈತರಿಗೆ ತರಬೇತಿಯನ್ನು ನೀಡಲಾಗಿದ್ದಿತು.

## 2.1.9 ನೀರಿನ ನ್ಯಾಯಸಮ್ಮತ ಹಂಚಿಕೆ

ನೀರಿನ ನ್ಯಾಯ ಸಮ್ಮತ ವಿತರಣೆಯು, ವಾರಾಬಂದಿಯನ್ನು ಜಾರಿಗೊಳಿಸುವ ಮೂಲಕ ಯೋಜನೆಯ ಅಚ್ಚುಕಟ್ಟು ಪ್ರದೇಶದ ಉದ್ದಿಷ್ಟ ಬೆಳೆಗಳಿಗೆ ನೀರು ಸರಬರಾಜನ್ನು ಖಚಿತಪಡಿಸಿಕೊಳ್ಳುವುದು, ಅನುಮೋದಿತ ಬೆಳೆ ಪದ್ಧತಿಯನ್ನು ಖಚಿತಪಡಿಸಿಕೊಳ್ಳುವುದು, ನೀರನ್ನು ನಿಯಮಬಾಹಿರವಾಗಿ ಪಡೆಯುವುದನ್ನು ತಡೆಯುವ ಹಾಗೂ ನೀರು ಬಳಕೆದಾರರ ಸಹಕಾರ ಸಂಘಗಳನ್ನು ಸ್ಥಾಪಿಸುವುದರಿಂದ ಜಲ ನಿರ್ವಹಣೆಯಲ್ಲಿ ರೈತರ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳುವುದನ್ನು ಸೂಚಿಸುತ್ತದೆ.

### *2.1.9.1 ಸಹಭಾಗಿತ್ವದ ನೀರಾವರಿ ನಿರ್ವಹಣೆ*

ನೀರಾವರಿ ವ್ಯವಸ್ಥೆಗಳ ನಿರ್ವಹಣೆಯಲ್ಲಿ ರೈತರ ಭಾಗವಹಿಸುವಿಕೆಯು ರಾಷ್ಟ್ರೀಯ ಜಲ ನೀತಿಯ ಪ್ರಮುಖ ಉದ್ದೇಶವಾಗಿದೆ. ಸಹಭಾಗಿತ್ವದ ನೀರಾವರಿ ನಿರ್ವಹಣೆಯ ಉದ್ದೇಶಗಳು, ನೀರು ಬಳಕೆದಾರರಲ್ಲಿ ನೀರಿನ ಬಳಕೆಯಲ್ಲಿ ಮಿತವ್ಯಯತೆಯನ್ನು ಪ್ರೋತ್ಸಾಹಿಸಲು ಹಾಗೂ ವ್ಯವಸ್ಥೆಯನ್ನು ಸಂರಕ್ಷಿಸಲು ಜಲ ಸಂಪನ್ಮೂಲಗಳ ಮಾಲೀಕತ್ವದ ಒಂದು ಅರಿವನ್ನು ಮೂಡಿಸುವುದು, ಲಭ್ಯವಿರುವ ಸಂಪನ್ಮೂಲಗಳ ಅತ್ಯುತ್ತಮ ಬಳಕೆ ಹಾಗೂ ಹಂಚಿಕೆಯಲ್ಲಿ ನ್ಯಾಯಪರತೆ, ಇತ್ಯಾದಿಗಳನ್ನು ಒಳಗೊಂಡಿವೆ. ಕರ್ನಾಟಕ ನೀರಾವರಿ ಅಧಿನಿಯಮ 1965ರ ಪರಿಚ್ಛೇದ 62ರ ಪ್ರಕಾರ, ನೀರಾವರಿ ಯೋಜನೆಗಳಲ್ಲಿ ಈ ಕೆಳಗಿನ ನಾಲ್ಕು–ಹಂತದ ರಚನೆಯನ್ನು ರೂಪಿಸುವುದು ಜೂನ್ 2000ದಿಂದ ಜಾರಿಗೆ ಬರುವಂತೆ ಕಡ್ಡಾಯವಾಗಿದೆ:

- ನೀರು ಬಳಕೆದಾರರ ಸಹಕಾರ ಸಂಘಗಳು – ತೂಬು ಹಂತದಲ್ಲಿ;
- ನೀರು ಬಳಕೆದಾರರ ವಿತರಕ ಮಟ್ಟದ ಒಕ್ಕೂಟ – ವಿತರಕ ಮಟ್ಟದಲ್ಲಿ;
- ನೀರು ಬಳಕೆದಾರರ ಯೋಜನಾ ಮಟ್ಟದ ಒಕ್ಕೂಟ – ಯೋಜನಾ ಮಟ್ಟದಲ್ಲಿ;
- ನೀರು ಬಳಕೆದಾರರ ಉನ್ನತ ಮಟ್ಟದ ಒಕ್ಕೂಟ – ರಾಜ್ಯ ಮಟ್ಟದಲ್ಲಿ.

ಈ ಸಂಘಗಳಿಗೆ ತಮ್ಮ ಸಂಬಂಧಿತ ಪ್ರದೇಶಗಳ ಕಾರ್ಯಾಚಾರಣೆಯ ಯೋಜನೆಯನ್ನು ತಯಾರಿಸುವ ಅಗತ್ಯವಿದ್ದಿತು. ರಾಜ್ಯ ಸರ್ಕಾರವು, ಪರಸ್ಪರ ತಿಳುವಳಿಕೆ ಪತ್ರಗಳಿಗೆ ಸಹಿ ಮಾಡಿದನಂತರ, ನೀರಾವರಿ ವ್ಯವಸ್ಥೆಗಳ ಜವಾಬ್ದಾರಿಯನ್ನು ಈ ಸಂಘಗಳಿಗೆ ವರ್ಗಾಯಿಸಬೇಕಿದ್ದಿತು ಹಾಗೂ ಸಹಭಾಗಿತ್ವದ ನೀರಾವರಿ ನಿರ್ವಹಣೆಯ ಅಡಿಯಲ್ಲಿ ಪ್ರಗತಿಯನ್ನು ಮೇಲ್ವಿಚಾರಣೆ ಮಾಡುವುದಕ್ಕಾಗಿ ಹಾಗೂ ಅವುಗಳ ಕಾರ್ಯವೈಖರಿಯನ್ನು ಮೌಲ್ಯಮಾಪನ ಮಾಡುವುದಕ್ಕಾಗಿ ರಾಜ್ಯ ಮಟ್ಟದಲ್ಲಿ ಸೂಕ್ತ ಸಮಿತಿಗಳನ್ನು ರಚಿಸಬೇಕಿದ್ದಿತು.

### *2.1.9.2 ನೀರು ಬಳಕೆದಾರರ ಸಹಕಾರ ಸಂಘಗಳ ಸ್ಥಿತಿಗತಿ*

ಕಾಡಾಗಳ ಅಡಿಯಲ್ಲಿನ 76 ಯೋಜನೆಗಳ ಪೈಕಿ, ಸಹಭಾಗಿತ್ವದ ನೀರಾವರಿ ನಿರ್ವಹಣೆಯು 33 ಭಾರಿ ಹಾಗೂ ಮಧ್ಯಮ ನೀರಾವರಿ ಯೋಜನೆಗಳಲ್ಲಿ ಕಾರ್ಯಗತವಾಗುತ್ತಿದೆ. ಇತರೆ 43 ಯೋಜನೆಗಳಲ್ಲಿ ಅದನ್ನು ಕಾರ್ಯಗತಗೊಳಿಸದಿರಲು ಕಾರಣಗಳನ್ನು ಒದಗಿಸಲಿಲ್ಲ. ಮಾರ್ಚ್ 2014ರಲ್ಲಿದ್ದಂತೆ, 33 ಯೋಜನೆಗಳು ಹಾಗೂ ಅವುಗಳ ಅಚ್ಚುಕಟ್ಟು ಪ್ರದೇಶಗಳಿಗೆ ಸಂಬಂಧಿಸಿದಂತೆ, ರಚನೆಗಾಗಿ ಗುರಿಯಾಗಿಸಿಕೊಳ್ಳಲಾಗಿದ್ದ ನೀರು ಬಳಕೆದಾರರ ಸಹಕಾರ ಸಂಘಗಳು, ವಾಸ್ತವಿಕವಾಗಿ ರಚಿಸಿದ್ದುದು, ಮಾಡಿಕೊಳ್ಳಲಾದ ಪರಸ್ಪರ ತಿಳುವಳಿಕೆ ಪತ್ರಗಳು ಹಾಗೂ ನೀರು ಬಳಕೆದಾರರ ಸಹಕಾರ ಸಂಘಕ್ಕೆ ವಹಿಸಿಕೊಡಲಾದ ನೀರು ನಿರ್ವಹಣೆಯ ವಿವರಗಳನ್ನು **ಕೋಷ್ಟಕ 2.9**ರಲ್ಲಿ ತೋರಿಸಲಾಗಿದೆ:

**ಕೋಷ್ಟಕ 2.9: ನೀರು ಬಳಕೆದಾರರ ಸಹಕಾರ ಸಂಘಗಳ ಸ್ಥಿತಿಗತಿ**

(ವಿಸ್ತೀರ್ಣ ಹೆಕ್ಟೇರ್‌ನಲ್ಲಿ; ನೀರು ಬಳಕೆದಾರರ ಸಹಕಾರ ಸಂಘಗಳು: ಸಂಖ್ಯೆಯಲ್ಲಿ)

| ಕಾಡಾದ ಹೆಸರು ಮತ್ತು ಯೋಜನೆಗಳ ಸಂಖ್ಯೆ | ಜಾರಿಯಾಗುತ್ತಿರುವ ಯೋಜನೆಗಳ ಸಂಖ್ಯೆ/ಅದರ ಒಟ್ಟು ಅಚ್ಚುಕಟ್ಟು ಪ್ರದೇಶ | ಸಹಭಾಗಿತ್ವದ ನೀರಾವರಿ ನಿರ್ವಹಣೆ ಜಾರಿಗಾಗಿ ಗುರಿಯಾಗಿದ್ದ ಪ್ರದೇಶ | ನೀರು ಬಳಕೆದಾರರ ಸಹಕಾರ ಸಂಘಗಳ ಸಂಖ್ಯೆ | | | | | ಕೊರತೆ | | | ಶೂನ್ಯ ಕಾರ್ಯ ನಿರತ ನೀರು ಬಳಕೆದಾರರ ಸಹಕಾರ ಸಂಘಗಳು (5–8) |
|---|---|---|---|---|---|---|---|---|---|---|---|
| | | | ಒಟ್ಟು ರಚಿಸಬೇಕಿದ್ದು | ವಾಸ್ತವಿಕ ರಚನೆ/ ಅದರ ಅಚ್ಚುಕಟ್ಟು ಪ್ರದೇಶ | ಸಹಿಯಾದ ಪರಸ್ಪರ ತಿಳುವಳಿಕೆ ಪತ್ರಗಳು/ ಅದರ ಅಚ್ಚುಕಟ್ಟು ಪ್ರದೇಶ | ವಹಿಸಲಾದ ಜಲ ನಿರ್ವಹಣೆ/ ಅದರ ಅಚ್ಚುಕಟ್ಟು ಪ್ರದೇಶ | ಕಾರ್ಯ ನಿರತ | ನೀರು ಬಳಕೆದಾರರ ಸಹಕಾರ ಸಂಘಗಳ ರಚನೆ (4–5) | ಪರಸ್ಪರ ತಿಳುವಳಿಕೆ ಪತ್ರಗಳಿಗೆ ಸಹಿ (5–6) | ನೀರು ಬಳಕೆದಾರರ ಸಹಕಾರ ಸಂಘಗಳಿಗೆ ವಹಿಸುವಿಕೆ (6–7) | |
| **1** | **2** | **3** | **4** | **5** | **6** | **7** | **8** | **9** | **10** | **11** | **12** |
| ಬೆಳಗಾವಿ (4) | 3/5,43,521 | 3,48,239 | 607 | 598 /2,94,677 | 507 /2,53,248 | 507 /2,53,248 | 507 | 9 | 91 | 0 | 91 |
| ಭೀಮರಾಯನಗುಡಿ (1) | 1/6,22,000 | 2,74,400 | 560 | 548 /2,68,520 | 464 /2,27,360 | 464 /2,27,360 | 233 | 12 | 84 | 0 | 315 |
| ಮುನಿರಾಬಾದ್ (3) | 1/3,62,765 | 3,63,000 | 835 | 581 | 414 /99,775 | 414 /99,776* | 414 | 254 | 167 | 0 | 167 |
| ಶಿವಮೊಗ್ಗ (30) | 10/1,58,301 | 1,57,323 | 360 | 324 /1,30,364 | 189 /80,461 | 113 /45,352 | 189 | 36 | 135 | 76 | 135 |
| ಕಲ್ಬುರ್ಗಿ (19) | 14/77,415 | 77,415 | 172 | 150 /68,064 | 122 /53,604 | 122 /53,604 | 150 | 22 | 28 | 0 | 0 |
| ಮೈಸೂರು (19) | 4/4,86,807 | 4,30,660 | 628 | 630 /4,31,410 | 357 /1,83,746 | 357 /1,83,746 | 357 | 0 | 273 | 0 | 273 |
| **ಒಟ್ಟು** | **33/22,50,809** | **16,51,037** | **3,162** | **2,831 /14,38,893** | **2,053 /8,98,195** | **1,977 /6,81,078** | **1,850** | **331** | **778** | **76** | **981** |

(ಆಧಾರ: ಜಲ ಸಂಪನ್ಮೂಲ ಇಲಾಖೆಯ ಕಾರ್ಯದರ್ಶಿಯಿಂದ ಸಲ್ಲಿಸಲ್ಪಟ್ಟ ವಿವರಗಳು)

ಮೇಲಿನ ಕೋಷ್ಟಕದಿಂದ ಕಾಣಬಹುದಾದಂತೆ, 33 ಯೋಜನೆಗಳಲ್ಲಿನ ಒಟ್ಟು ಅಚ್ಚುಕಟ್ಟು ಪ್ರದೇಶ 22.50 ಲಕ್ಷ ಹೆಕ್ಟೇರ್‌ಗೆ ಪ್ರತಿಯಾಗಿ, 16.51 ಲಕ್ಷ ಹೆಕ್ಟೇರ್ ಪ್ರದೇಶದ ನೀರಾವರಿಗೊಳಿಸುವಿಕೆಗೆ ಮಾತ್ರ ಗುರಿ ನಿಶ್ಚಯವಾಗಿತ್ತು, ಇವುಗಳಲ್ಲಿ 6.81 ಲಕ್ಷ ಹೆಕ್ಟೇರ್ ಮಾತ್ರ 1,977 ನೀರು ಬಳಕೆದಾರರ ಸಹಕಾರ ಸಂಘಗಳಿಗೆ ವಹಿಸಲ್ಪಟ್ಟವು. ಮುಂದುವರೆದ ವಿಶ್ಲೇಷಣೆಯು ತೋರಿಸಿದ್ದೇನೆಂದರೆ;

- ❖ ರಚನೆಯಾದ 2,831 ನೀರು ಬಳಕೆದಾರರ ಸಹಕಾರ ಸಂಘಗಳಲ್ಲಿ, 981 ಸಂಘಗಳು (ಶೇಕಡ 34) ಕಾರ್ಯನಿರತವಾಗಿರಲಿಲ್ಲ;
- ❖ ರಚನೆಯಾದ 778 ನೀರು ಬಳಕೆದಾರರ ಸಹಕಾರ ಸಂಘಗಳ ಜೊತೆ ಪರಸ್ಪರ ತಿಳುವಳಿಕೆ ಪತ್ರಗಳು ಇನ್ನೂ ಆಗಬೇಕಿತ್ತು;
- ❖ ಕಾಡಾ, ಶಿವಮೊಗ್ಗದಲ್ಲಿ, ಪರಸ್ಪರ ತಿಳುವಳಿಕೆ ಪತ್ರಗಳು ಆಗಿದ್ದರೂ, 76 ನೀರು ಬಳಕೆದಾರರ ಸಹಕಾರ ಸಂಘಗಳಿಗೆ ಜಲ ನಿರ್ವಹಣೆಯು ವಹಿಸಲ್ಪಟ್ಟಿರಲಿಲ್ಲ;
- ❖ ಕಾಡಾ, ಮೈಸೂರು, ಕಲ್ಬುರ್ಗಿ ಮತ್ತು ಮುನಿರಾಬಾದ್‌ನ ಆಡಳಿತಾಧಿಕಾರಿಗಳು ನೀರು ಬಳಕೆದಾರರ ಸಹಕಾರ ಸಂಘಗಳಿಗೆ ಜಲ ನಿರ್ವಹಣೆಯು ವಹಿಸಲ್ಪಟ್ಟಿಲ್ಲವೆಂದು ಉತ್ತರಿಸಿದರೆ (ಜುಲೈ 2014) ಜಲ ಸಂಪನ್ಮೂಲ ಇಲಾಖೆಯ ಕಾರ್ಯದರ್ಶಿಗಳು, ಈ ಕಾಡಾಗಳ ಅಡಿಯಲ್ಲಿ 3.37 ಲಕ್ಷ ಹೆಕ್ಟೇರ್ ನೀರು ಬಳಕೆದಾರರ ಸಹಕಾರ ಸಂಘಗಳಿಗೆ ವಹಿಸಲ್ಪಟ್ಟಿವೆ ಎಂದು ಹೇಳಿದರು

(ಸೆಪ್ಟೆಂಬರ್ 2014). ನೀರು ಬಳಕೆದಾರರ ಸಹಕಾರ ಸಂಘಗಳಿಗೆ ಜಲ ನಿರ್ವಹಣೆಯ ವಾಸ್ತವಿಕ ವಹಿಸುವಿಕೆಯ ಬಗ್ಗೆ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಲಭ್ಯ ಮಾಡಲಿಲ್ಲ.

ನೀರಾವರಿ ವ್ಯವಸ್ಥೆಯಲ್ಲಿ ದೋಷಗಳನ್ನು ಸಂಪೂರ್ಣವಾಗಿ ಸರಿಪಡಿಸಿದನಂತರ ಪರಸ್ಪರ ತಿಳುವಳಿಕೆ ಪತ್ರಗಳಿಗೆ ಸಹಿ ಹಾಕಲಾಗುವುದು ಮತ್ತು ಆನಂತರ ಜಲ ನಿರ್ವಹಣೆಯನ್ನು ನೀರು ಬಳಕೆದಾರರ ಸಹಕಾರ ಸಂಘಗಳಿಗೆ ವಹಿಸಲಾಗುವುದು ಎಂದು ಕಾಡಾ, ಮುನಿರಾಬಾದ್ ಹೇಳಿತು. ಆದರೆ, ಇದು ಇನ್ನೂ ಆಗಿಲ್ಲ.

31 ಮಾರ್ಚ್ 2011ಕ್ಕೆ ಕೊನೆಗೊಂಡ ವರ್ಷದ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಯ ಕಂಡಿಕೆ 2.4.7.4ರಲ್ಲಿ ನೀರು ಬಳಕೆದಾರರ ಸಹಕಾರ ಸಂಘಗಳ ರಚನೆಯಲ್ಲಿ ಮಂದಗತಿ ಮತ್ತು ಈ ಸಂಘಗಳಿಗೆ ಜಲ ನಿರ್ವಹಣೆಯ ಶೂನ್ಯ ವಹಿಸುವಿಕೆಯನ್ನು ವರದಿಮಾಡಲಾಗಿತ್ತು. ಸಾರ್ವಜನಿಕ ಲೆಕ್ಕಪತ್ರ ಸಮಿತಿಯು (14ನೇ ವಿಧಾನಸಭೆ) ತನ್ನ ಮೂರನೆಯ ವರದಿಯಲ್ಲಿ ಉತ್ತಮ ಜಲ ನಿರ್ವಹಣೆಗೆ ನೀರು ಬಳಕೆದಾರರ ಸಹಕಾರ ಸಂಘಗಳ ರಚನೆಯನ್ನು ಕಡ್ಡಾಯಮಾಡಬೇಕೆಂದು ಶಿಫಾರಸು ಮಾಡಿತ್ತು (ಜುಲೈ 2014). ಆದಾಗ್ಯೂ, ಈ ಶಿಫಾರಸು ಇನ್ನೂ ಜಾರಿಯಾಗಬೇಕಿದೆ.

ನಿರ್ಗಮನ ಸಭೆಯಲ್ಲಿ ಜಲ ಸಂಪನ್ಮೂಲ ಇಲಾಖೆಯ ಕಾರ್ಯದರ್ಶಿಗಳು, ನೀರು ಬಳಕೆದಾರರ ಸಹಕಾರ ಸಂಘಗಳಿಗೆ ಪ್ರೋತ್ಸಾಹ ಧನಗಳನ್ನು ಮತ್ತಿತರ ಸೌಲಭ್ಯಗಳನ್ನು ಕೊಡುವುದರಿಂದ ರೈತರಿಗೆ ಸಂಘಗಳ ರಚನೆಗೆ ಉತ್ತೇಜಿಸಲು ಕಾಡಾಗಳು ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತಿದ್ದವು ಎಂದು ತಿಳಿಸಿದರು (ಅಕ್ಟೋಬರ್ 2014). ನೆರೆ ರಾಜ್ಯಗಳಲ್ಲಿ ಕಾಡಾಗಳ ಕಾರ್ಯನಿರ್ವಹಣೆಯನ್ನು ಅಧ್ಯಯನ ಮಾಡಲು ಅಧ್ಯಯನ ಸಮಿತಿಗಳನ್ನು ರಾಜ್ಯ ಸರ್ಕಾರವು ಆಗಸ್ಟ್ 2014ರಲ್ಲಿ ರಚಿಸಿತ್ತು ಮತ್ತು ಅಧ್ಯಯನ ಸಮಿತಿಯಿಂದ ಸ್ವೀಕೃತವಾದ ಶಿಫಾರಸುಗಳು ಸರ್ಕಾರದ ಸಕ್ರಿಯ ಪರಿಗಣನೆಯಲ್ಲಿದೆ ಎಂದು ಸಹಾ ತಿಳಿಸಲಾಯಿತು.

### *2.1.9.3 ನೀರು ಬಳಕೆದಾರರ ವಿತರಕ ಮಟ್ಟದ ಒಕ್ಕೂಟ ಮತ್ತು ನೀರು ಬಳಕೆದಾರರ ಯೋಜನಾ ಮಟ್ಟದ ಒಕ್ಕೂಟದ ಸ್ಥಿತಿಗತಿ*

ಕಾಡಾ, ಮುನಿರಾಬಾದ್‌ನ (209) ಮತ್ತು ಭೀಮರಾಯನಗುಡಿಯ (442) ಅಡಿಯಲ್ಲಿನ ಒಟ್ಟು 651 ವಿತರಕಗಳ ಪೈಕಿ ಕೇವಲ ಏಳು[17] ನೀರು ಬಳಕೆದಾರರ ವಿತರಕ ಮಟ್ಟದ ಒಕ್ಕೂಟಗಳು ರಚನೆಯಾಗಿದ್ದವು. ಇತರ ಕಾಡಾಗಳ ಸಂಬಂಧದಲ್ಲಿ, ನೀರು ಬಳಕೆದಾರರ ವಿತರಕ ಮಟ್ಟದ ಒಕ್ಕೂಟಗಳು ರಚನೆಯಾಗಿರಲಿಲ್ಲ.

ಎಪ್ಪತ್ತಾರು ಭಾರಿ/ಮಧ್ಯಮ ನೀರಾವರಿ ಯೋಜನೆಗಳ ಪೈಕಿ, ಎರಡು[18] ಕಾಡಾಗಳಲ್ಲಿನ ಆರು ಯೋಜನೆಗಳಲ್ಲಿ ಮಾತ್ರ ನೀರು ಬಳಕೆದಾರರ ಯೋಜನಾ ಮಟ್ಟದ ಒಕ್ಕೂಟಗಳು ರಚನೆಯಾಗಿದ್ದವು. ಒಕ್ಕೂಟಗಳು ರಚನೆಯಾಗದಿದ್ದುದಕ್ಕೆ ಕಾಡಾಗಳು ಕಾರಣಗಳನ್ನು ಸಲ್ಲಿಸಲಿಲ್ಲ.

ಕರ್ನಾಟಕ ನೀರಾವರಿ ಅಧಿನಿಯಮಕ್ಕೆ ತಿದ್ದುಪಡಿಯಾದ 14 ವರ್ಷಗಳ ನಂತರವೂ ಈ ಒಕ್ಕೂಟಗಳ ರಚನೆಯಾಗದಿದ್ದುದು, ನೀರಿನ ನ್ಯಾಯಸಮ್ಮತ ಹಂಚಿಕೆಯ ಮೇಲೆ ಪರಿಣಾಮವಾಗಿದ್ದಲ್ಲದೇ, ವಾರಾಬಂದಿ ವ್ಯವಸ್ಥೆಯಡಿಯಲ್ಲಿ ಹೇಳಲಾಗಿದ್ದ ಸಹಭಾಗಿತ್ವದ ನೀರಾವರಿ ನಿರ್ವಹಣೆಯ ಜಾರಿಯನ್ನು ಖಚಿತಪಡಿಸಿಕೊಳ್ಳುವ ಪರಿಕಲ್ಪನೆಯನ್ನು ಪರಾಭವಗೊಳಿಸಿದವು. ಈ ಒಕ್ಕೂಟಗಳ ರಚನೆಗೆ ರಾಜ್ಯ ಸರ್ಕಾರದಿಂದ ಅರ್ಹ ಪ್ರಾಮುಖ್ಯತೆ ನೀಡಲ್ಪಡಲಿಲ್ಲವೆನ್ನುವುದನ್ನು ಇದು ಸೂಚಿಸುತ್ತದೆ.

---

[17] ಮುನಿರಾಬಾದ್‌ನಲ್ಲಿ ನಾಲ್ಕು ಮತ್ತು ಭೀಮರಾಯನಗುಡಿಯಲ್ಲಿ ಮೂರು

[18] ಕಾಡಾ, ಮೈಸೂರಿನ ಅಡಿಯಲ್ಲಿ ಎರಡು ಮತ್ತು ಕಾಡಾ, ಕಲ್ಬುರ್ಗಿಯ ಅಡಿಯಲ್ಲಿ ನಾಲ್ಕು

### *2.1.9.4 ನೀರು ಬಳಕೆದಾರರ ಸಹಕಾರ ಸಂಘಗಳಿಗೆ ಒಂದು ಸಲ ನೀಡಲಾಗುವ ಕಾರ್ಯನಿರ್ವಹಣಾ ಅನುದಾನಗಳು*

ಕಾಡಾಗಳು ನಿರ್ಮಿಸಿದ ಹೊಲಗಾಲುವೆಗಳು ಮತ್ತು ಬಸಿನಾಲೆಗಳನ್ನು ತದನಂತರದ ವರ್ಷಗಳಲ್ಲಿ ರೈತರು ನಿರ್ವಹಿಸಿಕೊಂಡು ಹೋಗುವ ಅಗತ್ಯವಿದೆ. ನೀರು ಬಳಕೆದಾರರ ಸಹಕಾರ ಸಂಘಗಳ ಚಟುವಟಿಕೆಗಳಿಗೆ ಅನುಕೂಲ ಕಲ್ಪಿಸುವುದಕ್ಕಾಗಿ ಹೆಕ್ಟೇರ್ ಒಂದಕ್ಕೆ ₹ 900ರಂತೆ[19] ಒಂದು ಸಲ ನೀಡಲಾಗುವ ಕಾರ್ಯನಿರ್ವಹಣಾ ಅನುದಾನವನ್ನು ಒದಗಿಸಲಾಗುವುದು. ಮೊತ್ತವನ್ನು ನಿಶ್ಚಿತ ಠೇವಣಿಯಲ್ಲಿ ಇಡತಕ್ಕದ್ದು ಹಾಗೂ ಠೇವಣಿಯ ಮೇಲೆ ಗಳಿಸಲಾದ ಬಡ್ಡಿಯನ್ನು ಈ ಚಟುವಟಿಕೆಗಳಿಗಾಗಿ ಬಳಸತಕ್ಕದ್ದು. 33 ಯೋಜನೆಗಳ ಸಂಬಂಧದಲ್ಲಿ ₹ 40.57 ಕೋಟಿ ಮೊತ್ತವನ್ನು ನೀರು ಬಳಕೆದಾರರ ಸಹಕಾರ ಸಂಘಗಳಿಗೆ ಬಿಡುಗಡೆ ಮಾಡಲಾಯಿತು (ಮಾರ್ಚ್ 2014ರವರೆಗೆ).

ಕರ್ನಾಟಕ ಸರ್ಕಾರದಿಂದ ಸಲ್ಲಿಸಲಾದ ಮಾಹಿತಿಯಂತೆ, ಆರು ಕಾಡಾಗಳಲ್ಲಿ ಬರುವ 6.81 ಲಕ್ಷ ಹೆಕ್ಟೇರ್ ಪ್ರದೇಶದ ಸಂಬಂಧದಲ್ಲಿ ಜಲ ನಿರ್ವಹಣೆಯನ್ನು ನೀರು ಬಳಕೆದಾರರ ಸಹಕಾರ ಸಂಘಗಳಿಗೆ ವಹಿಸಲಾಗಿತ್ತು. ಆದಾಗ್ಯೂ, ಮೈಸೂರು, ಕಲ್ಬುರ್ಗಿ ಮತ್ತು ಮುನಿರಾಬಾದ್‌ನ ಕಾಡಾಗಳಲ್ಲಿ ಸಂಬಂಧಿತ ಆಡಳಿತಾಧಿಕಾರಿಗಳು ಜಲ ನಿರ್ವಹಣೆಯನ್ನು ನೀರು ಬಳಕೆದಾರರ ಸಹಕಾರ ಸಂಘಗಳಿಗೆ ವಹಿಸಿಕೊಡಲಿಲ್ಲವಾದರೂ, ₹ 19.65 ಕೋಟಿ ಮೊತ್ತದ ಕಾರ್ಯನಿರ್ವಹಣಾ ಅನುದಾನವು ಬಿಡುಗಡೆಯಾಗಿದ್ದಿತು. ಹೀಗೆ, ನೀರು ಬಳಕೆದಾರರ ಸಹಕಾರ ಸಂಘಗಳಿಗೆ ಕಾರ್ಯನಿರ್ವಹಣಾ ಅನುದಾನದ ಬಿಡುಗಡೆಯು ಯೋಜನೆಯ ಮಾರ್ಗಸೂಚಿಗಳಿಗೆ ವಿರುದ್ಧವಾಗಿತ್ತು ಮತ್ತು ಚಿಂತಿಸಿದ್ದ ಉದ್ದೇಶಕ್ಕೆ ಉಪಕಾರಿಯಾಗಲಿಲ್ಲ. ಇದು ಪ್ರಾಧಿಕಾರದ ಮೇಲ್ವಿಚಾರಣೆಯಲ್ಲಿನ ನ್ಯೂನತೆಯನ್ನು ಸಹ ಸೂಚಿಸುತ್ತಿತ್ತು.

## 2.1.10 ವಾರಾಬಂದಿ

ವಾರಾಬಂದಿ ಎಂದರೆ, ಪ್ರತಿಯೊಬ್ಬ ರೈತನಿಗೂ ಅವರು ಒಂದು ಹೊರಹರಿವಿನ ಮಾರ್ಗದಲ್ಲಿರುವ ಅಚ್ಚುಕಟ್ಟು ಪ್ರದೇಶದಲ್ಲಿ ಹೊಂದಿರುವ ಜಮೀನಿನ ವಿಸ್ತಾರಕ್ಕೆ ಅನುಗುಣವಾಗಿ, ನೀರು ಸರಬರಾಜಿನ ದಿನ, ಸಮಯ ಹಾಗೂ ಅವಧಿಯನ್ನು ನಿರ್ದಿಷ್ಟಪಡಿಸಿದಂತೆ ತಯಾರಿಸಲಾಗಿರುವ ಪೂರ್ವ ನಿರ್ಧಾರಿತ ಷೆಡ್ಯೂಲಿನ ಪ್ರಕಾರ ಸರದಿಯಲ್ಲಿ ನ್ಯಾಯಸಮ್ಮತವಾಗಿ ನೀರು ಸರಬರಾಜು ಮಾಡುವ ಒಂದು ವ್ಯವಸ್ಥೆ. ಕ್ಷೇತ್ರಾಭಿವೃದ್ಧಿ ಕಾಮಗಾರಿಗಳನ್ನು ಕಾರ್ಯಗತಗೊಳಿಸಿದನಂತರ, ವ್ಯವಸ್ಥೆಯನ್ನು ಜಾರಿಗೊಳಿಸುವುದಕ್ಕಾಗಿ ನೀರು ಬಳಕೆದಾರರ ಸಹಕಾರ ಸಂಘಗಳಿಗೆ ವಹಿಸಿಕೊಡಬೇಕಿದ್ದಿತು.

ಕರ್ನಾಟಕ ನೀರಾವರಿ ಅಧಿನಿಯಮದ ಪ್ರಕಾರ, ನೀರಿನ ನ್ಯಾಯಸಮ್ಮತ ವಿತರಣೆಗಾಗಿ, ಪ್ರತಿಯೊಂದು ನೀರು ಬಳಕೆದಾರರ ಸಹಕಾರ ಸಂಘವೂ ಗಾತ್ರಾನುಸಾರದ ಆಧಾರವಾಗಿ ನೀರಾವರಿ ಇಲಾಖೆಯಿಂದ ಅಥವಾ ನೀರಾವರಿ ನಿಗಮಗಳಿಂದ ಬೃಹತ್ ಪ್ರಮಾಣದಲ್ಲಿ ನೀರನ್ನು ಪಡೆದುಕೊಳ್ಳಬೇಕು ಹಾಗೂ ಸಾಮಾನ್ಯ ಸಭೆಯಲ್ಲಿ ನಿರ್ದಿಷ್ಟಪಡಿಸಲಾಗಿರುವ ನಿಯಮಗಳ ಅನುಸಾರ ಹಿಡುವಳಿದಾರರಿಗೆ ಅದನ್ನು ವಿತರಿಸಬೇಕು. ಒಂದು ಹೊರತೂಬಿನ ಅಡಿಯಲ್ಲಿ ಒಂದು ಅಳತೆಯ ಮಾಪಕವನ್ನು ಅಳವಡಿಸುವುದನ್ನೂ ಅಧಿನಿಯಮವು ಹೇಳಿದೆ; ಅದು ನೀರಿನ ನ್ಯಾಯಸಮ್ಮತ ವಿತರಣೆಗಾಗಿ ಹಾಗೂ ರೈತರುಗಳಲ್ಲಿ ವಿಶ್ವಾಸವನ್ನು ಮೂಡಿಸುವಲ್ಲಿ ಸಹಾಯ ಮಾಡುತ್ತದೆ.

ಮಾರ್ಚ್ 2014ರಲ್ಲಿದ್ದಂತೆ, 6.81 ಲಕ್ಷ ಹೆಕ್ಟೇರ್ ಪ್ರದೇಶವನ್ನು 1,977 ನೀರು ಬಳಕೆದಾರರ ಸಹಕಾರ ಸಂಘಗಳಿಗೆ ವಹಿಸಿಕೊಡಲಾಗಿದ್ದಿತಾದರೂ, ಮೂರು[20] ಕಾಡಾಗಳಲ್ಲಿ 649 ನೀರು ಬಳಕೆದಾರರ ಸಹಕಾರ ಸಂಘಗಳು ಒಳಗೊಂಡ 1.98 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಅಳತೆಯ ಮಾಪಕವನ್ನು ಅಳವಡಿಸಿರಲಿಲ್ಲ. ಇತರೆ ಮೂರು ಕಾಡಾಗಳು ಅಗತ್ಯ ಮಾಹಿತಿಯನ್ನು ಒದಗಿಸಲಿಲ್ಲ.

---

[19] ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮನಾಗಿ ಹಂಚಿಕೊಳ್ಳುತ್ತವೆ

[20] ಕಲ್ಬುರ್ಗಿ, ಮುನಿರಾಬಾದ್ ಹಾಗೂ ಶಿವಮೊಗ್ಗ

ಈ ರೀತಿಯಾಗಿ, ಅಳತೆಯ ಮಾಪಕವನ್ನು ಅಳವಡಿಸದೆಯೇ ಜಲ ನಿರ್ವಹಣೆಯನ್ನು ನೀರು ಬಳಕೆದಾರರ ಸಹಕಾರ ಸಂಘಗಳಿಗೆ ವಹಿಸಿಕೊಡಲಾಗಿದ್ದಿತು. ಇದು, ನೀರು ಬಳಕೆದಾರರ ಸಹಕಾರ ಸಂಘಗಳು ಅವುಗಳ ಅಚ್ಚುಕಟ್ಟು ಪ್ರದೇಶದೊಳಗಿನ ನೀರಿನ ನ್ಯಾಯಸಮ್ಮತ ವಿತರಣೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ಅಸಹಾಯಕರನ್ನಾಗಿ ಮಾಡುವುದಲ್ಲದೇ ನಿಗಮಗಳು/ನೀರಾವರಿ ಇಲಾಖೆಯು ಗಾತ್ರಾನುಸಾರದ ಆಧಾರದ ಮೇಲೆ ಬೇಡಿಕೆಯನ್ನು ಸೃಷ್ಟಿಸಲು ಸಾಧ್ಯವಾಗುವುದಿಲ್ಲ. ಅಳತೆಯ ಮಾಪಕಗಳನ್ನು ಅಳವಡಿಸುವಲ್ಲಿನ ವಿಫಲತೆಯು ದಕ್ಷತೆಯಿಂದ ಕೂಡಿದ ಹಾಗೂ ನ್ಯಾಯಸಮ್ಮತ ನೀರಿನ ವಿತರಣೆಯನ್ನು ಖಚಿತಪಡಿಸಿಕೊಳ್ಳುವ ಸಹಭಾಗಿತ್ವದ ನೀರಾವರಿ ನಿರ್ವಹಣೆಯ ಉದ್ದೇಶವನ್ನು ಪರಾಭವಗೊಳಿಸಿತು.

ಗಾತ್ರಾನುಸಾರದ ಆಧಾರದ ಮೇರೆಗೆ ನೀರನ್ನು ಸರಬರಾಜು ಮಾಡಲಾಗುವ ಸ್ಥಳಗಳಲ್ಲಿ ಅಳತೆಯ ಮಾಪಕಗಳನ್ನು ಅಳವಡಿಸುವ ಅಗತ್ಯವಿದೆಯೆಂದು ಕಾಡಾ, ಮುನಿರಾಬಾದ್‌ನ ಆಡಳಿತಾಧಿಕಾರಿಗಳು ನಿರ್ಗಮನ ಸಭೆಯಲ್ಲಿ ತಿಳಿಸಿದರು (ಅಕ್ಟೋಬರ್ 2014).

### 2.1.11 ಬೆಳೆ ಪದ್ಧತಿಯ ಉಲ್ಲಂಘನೆ

ಒಂದು ಯೋಜನೆಯನ್ನು ಅದರ ಅಚ್ಚುಕಟ್ಟು ಪ್ರದೇಶಕ್ಕೆ ಸಮರ್ಪಕ ಸೇವೆಯನ್ನು ನೀಡುವ ರೀತಿಯಲ್ಲಿ, ನೀರಿನ ಲಭ್ಯತೆ ಹಾಗೂ ಬೆಳೆ ಪದ್ಧತಿಯನ್ನು ಗಮನದಲ್ಲಿಟ್ಟುಕೊಂಡು ರೂಪಿಸಲಾಗುವುದರಿಂದ ಒಂದು ಅಚ್ಚುಕಟ್ಟು ಪ್ರದೇಶದಲ್ಲಿ ರೈತರಿಂದ ಬೆಳೆ ಪದ್ಧತಿ ಉಲ್ಲಂಘನೆಯನ್ನು ನಿಯಂತ್ರಿಸುವುದು ಅತ್ಯಂತ ಪ್ರಮುಖವಾಗಿದೆ. ಮುಂದುವರೆದು, ಪಂಪುಗಳ ಮೂಲಕ ನಾಲೆಗಳಿಂದ ನಿಯಮಬಾಹಿರವಾಗಿ ನೀರು ಸೆಳೆಯುವುದನ್ನು ನಿಯಂತ್ರಿಸುವುದು ಅತ್ಯಾವಶ್ಯಕವಾಗಿದೆ. ನಿಯಂತ್ರಿಸದ ಹೊರತು, ಅಚ್ಚುಕಟ್ಟು ಪ್ರದೇಶಕ್ಕೆ ನೀರಿನ ನ್ಯಾಯಸಮ್ಮತ ವಿತರಣೆಯನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಇದು ಅಚ್ಚುಕಟ್ಟು ಪ್ರದೇಶದ ತುಟ್ಟತುದಿಯ ಭಾಗದ ರೈತರನ್ನು ನೀರು ಸರಬರಾಜಿನ ಲಾಭಗಳಿಂದ ವಂಚಿಸುವುದು. ಉಲ್ಲಂಘನೆಯು ಕರ್ನಾಟಕ ನೀರಾವರಿ ಅಧಿನಿಯಮದ ಅಡಿಯಲ್ಲಿ ನೀರಿನ ದಂಡ ರೂಪದ ದರ ವಿಧಿಸುವುದನ್ನು ಆಕರ್ಷಿಸುತ್ತದೆ.

ಆಯ್ಕೆ ಮಾಡಿಕೊಳ್ಳಲಾಗಿದ್ದ ನಾಲ್ಕು ಕಾಡಾಗಳ ಪೈಕಿ, ಕಾಡಾ, ಬೆಳಗಾವಿ, ಮಾಹಿತಿಯನ್ನು ಒದಗಿಸಲಿಲ್ಲ. 2011–13ರಲ್ಲಿ[21] ಇತರ ಮೂರು ಕಾಡಾಗಳಿಗೆ ಸಂಬಂಧಿಸಿದಂತೆ ಬೆಳೆ ಪದ್ಧತಿ ಉಲ್ಲಂಘನೆಯ ವಿವರಗಳನ್ನು **ಕೋಷ್ಟಕ 2.10**ರಲ್ಲಿ ನೀಡಲಾಗಿದೆ:

**ಕೋಷ್ಟಕ 2.10: ಬೆಳೆ ಪದ್ಧತಿಯ ಉಲ್ಲಂಘನೆ**

(ವಿಸ್ತೀರ್ಣ ಹೆಕ್ಟೇರ್‌ನಲ್ಲಿ)

| ಕಾಡಾದ ಹೆಸರು | ಬೆಳೆಸಲು ಬಿಟ್ಟ ನೀರಾವರಿ ಬೆಳೆಗಳು | ವಾಸ್ತವವಾಗಿ ಬೆಳೆಯಲಾಗಿದ್ದ ನೀರಾವರಿ ಬೆಳೆಗಳು | | ಶೇಕಡಾವಾರು ಉಲ್ಲಂಘನೆ | |
|---|---|---|---|---|---|
| | | 2011–12 | 2012–13 | 2011–12 | 2012–13 |
| ಶಿವಮೊಗ್ಗ | 52,874 | 94,578 | 87,172 | 79 | 65 |
| ಮುನಿರಾಬಾದ್ | 43,698 | 1,66,187 | 1,67,392 | 280 | 283 |
| ಮೈಸೂರು | 2,45,795 | 2,89,083 | 2,96,668 | 18 | 21 |
| **ಒಟ್ಟು** | **3,42,367** | **5,49,848** | **5,51,232** | **61** | **61** |

(ಆಧಾರ: ಕಾಡಾಗಳಿಂದ ಸಲ್ಲಿಸಲ್ಪಟ್ಟ ವಿವರಗಳು)

ಮೇಲಿನ ಕೋಷ್ಟಕದಿಂದ ಕಾಣಬಹುದಾದಂತೆ, 2011–12 ಹಾಗೂ 2012–13ರ ಎರಡೂ ಸಾಲುಗಳಲ್ಲಿಯೂ ಬೆಳೆ ಪದ್ಧತಿಯ ಉಲ್ಲಂಘನೆಯು ಶೇಕಡಾ 61ರಷ್ಟು ಮಟ್ಟಿಗೆ ದೊಡ್ಡ ಪ್ರಮಾಣದಲ್ಲಿ ಆಗಿದ್ದಿತು. ವಿಧಿಸಲಾದ ಹಾಗೂ ವಸೂಲಾತಿ ಮಾಡಲಾದ ನೀರಿನ ದಂಡ ರೂಪದ ದರಗಳ

[21] 2009–11ರ ಮಾಹಿತಿಯನ್ನು ಕಾಡಾಗಳು ಒದಗಿಸಲಿಲ್ಲ

ವಿವರಗಳನ್ನು ಕಾಡಾಗಳು ಒದಗಿಸಲಿಲ್ಲವಾದ್ದರಿಂದ ಒಂದು ನಿರೋಧಕವಾಗಿ ಹಾಗೂ ಉಲ್ಲಂಘನೆಗಳನ್ನು ಕನಿಷ್ಠ ಮಟ್ಟಕ್ಕೆ ತರುವ ನೀರಿನ ದಂಡ ರೂಪದ ದರಗಳನ್ನು ವಿಧಿಸುವುದಕ್ಕಾಗಿ ಇರುವ ಅನುವುಗಳನ್ನು ಜಾರಿಗೊಳಿಸಲಾಗುತ್ತಿತ್ತೆನ್ನುವುದನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿರಲಿಲ್ಲ. ಮೇಲ್ಭಾಗದ ಚಾಚುಗಳಲ್ಲಿ ಅಧಿಕ ಪ್ರಮಾಣದ ನೀರಿನ ನಿರಂತರ ಬಳಕೆಯು, ಅಚ್ಚುಕಟ್ಟು ಪ್ರದೇಶದ ತುಟ್ಟತುದಿಯ ಭಾಗದ ಜಮೀನಿನ ಮೇಲೆ ಪ್ರತಿಕೂಲ ಪರಿಣಾಮವನ್ನುಂಟು ಮಾಡಿದ್ದಿತು.

## 2.1.12 ಮಾನವ ಸಂಪನ್ಮೂಲಗಳು

ಕಾಡಾಗಳನ್ನು 1974ರಲ್ಲಿ ಸ್ಥಾಪಿಸಲಾಯಿತು ಹಾಗೂ ಅವುಗಳಿಗೆ ಕಾನೂನುಬದ್ಧ ಸ್ಥಾನಮಾನವನ್ನು 1980ರಲ್ಲಿ ನೀಡಲಾಯಿತು. ಕಾಡಾಗಳ ಕಾಮಗಾರಿಗಳು ಮೊದಲು ನೀರಾವರಿ ಇಲಾಖೆಯ ನಿರ್ಮಾಣ ವಿಭಾಗಗಳಿಂದ ಕಾರ್ಯಗತವಾಗುತ್ತಿದ್ದವು ಹಾಗೂ ತದನಂತರ ಆಗಸ್ಟ್ 1994 ಮತ್ತು ಜೂನ್ 2003ರ ನಡುವಿನ ಅವಧಿಯಲ್ಲಿ ರಚಿಸಲಾದ ನೀರಾವರಿ ನಿಗಮಗಳಿಂದ ಕಾರ್ಯಗತವಾಗುತ್ತಿದ್ದವು. ರಾಜ್ಯದಲ್ಲಿನ ಎಲ್ಲಾ ಭಾರಿ ಹಾಗೂ ಮಧ್ಯಮ ನೀರಾವರಿ ಯೋಜನೆಗಳ ನಿರ್ವಹಣೆಯನ್ನು ಈಗ ನೀರಾವರಿ ನಿಗಮಗಳು ಮಾಡುತ್ತಿವೆ. ಭಾರತ ಸರ್ಕಾರವು, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ಜಲ ನಿರ್ವಹಣೆ ಕಾರ್ಯಕ್ರಮದ ಅಡಿಯಲ್ಲಿನ ಸಮೀಕ್ಷೆ, ಕ್ಷೇತ್ರಾಭಿವೃದ್ಧಿ, ಪುನರ್ಸುಧಾರಣೆ ಹಾಗೂ ವ್ಯವಸ್ಥೆ ನ್ಯೂನತೆಗಳ ಸರಿಪಡಿಸುವಿಕೆ ಅಂಶಗಳಿಗಾಗಿ ಒಟ್ಟು ಕೇಂದ್ರ ಸಹಾಯಧನದ ಶೇಕಡಾ 20ರವರೆಗಿನ[22] ಸಿಬ್ಬಂದಿ ವೆಚ್ಚಕ್ಕೆ ಸೀಮಿತಗೊಳಿಸಿದಂತೆ ವಾಸ್ತವಿಕವಾಗಿ ಭರಿಸಲಾದ ಸಿಬ್ಬಂದಿ ವೆಚ್ಚದ ಶೇಕಡಾ 50ರಷ್ಟು ವೆಚ್ಚದ ಕಡೆಗೆ ಸಹಾಯಧನವನ್ನು ಒದಗಿಸುತ್ತದೆ.

### *2.1.12.1 ಖಾಲಿ ಹುದ್ದೆಗಳನ್ನು ಭರ್ತಿ ಮಾಡದಿರುವುದು*

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ಜಲ ನಿರ್ವಹಣಾ ಕಾರ್ಯಕ್ರಮದ ಅಡಿಯಲ್ಲಿ ಕೇಂದ್ರ ಸರ್ಕಾರದ ಜೊತೆ ಮಾಡಿಕೊಳ್ಳಲಾಗಿದ್ದ ಪರಸ್ಪರ ತಿಳುವಳಿಕೆ ಪತ್ರದ ಪ್ರಕಾರ, ಭರಿಸಲಾದ ವೆಚ್ಚಗಳನ್ನು ಮರುತುಂಬಿಕೊಡುವ ರೂಪದಲ್ಲಿ ಕೇಂದ್ರದ ಸಹಾಯಧನವನ್ನು ಬಳಸಿಕೊಳ್ಳಲು ಒಂದು ಕಟ್ಟುನಿಟ್ಟಿನ ಜಾರಿಗೊಳಿಸುವಿಕೆ ಷೆಡ್ಯೂಲಿಗೆ ಬದ್ಧವಾಗಿರುವ ಅಗತ್ಯತೆಯಿದ್ದಿತು. ಆದಾಗ್ಯೂ, ಕಾಡಾದ ಸಿಬ್ಬಂದಿ ಅಗತ್ಯತೆಯನ್ನು ಅಧಿಕಗೊಂಡಿದ್ದ ಕಾರ್ಯಚಟುವಟಿಕೆಗಳಿಗೆ ಅನುಗುಣವಾಗಿ ಪರಿಷ್ಕರಿಸಿರಲಿಲ್ಲ. ಸರ್ಕಾರವು ಹಾಲಿ ಇದ್ದಂತಹ ಖಾಲಿ ಹುದ್ದೆಗಳನ್ನು ಸಹ ಭರ್ತಿ ಮಾಡಿರಲಿಲ್ಲ. ಎಲ್ಲಾ ವಿಭಾಗದಲ್ಲಿಯೂ, ವಿಶೇಷವಾಗಿ ಮೂರು[23] ಕಾಡಾಗಳ ಕೃಷಿ ವಿಭಾಗದಲ್ಲಿ, **ಕೋಷ್ಟಕ 2.11**ರಲ್ಲಿ ತೋರಿಸಿರುವಂತೆ ಗಮನಾರ್ಹ ಸಂಖ್ಯೆಯಲ್ಲಿ ಹುದ್ದೆಗಳು ಖಾಲಿ ಇರುವುದನ್ನು ನಾವು ಗಮನಿಸಿದೆವು:

**ಕೋಷ್ಟಕ 2.11: ಖಾಲಿ ಹುದ್ದೆಗಳ ಸ್ಥಿತಿ**

| ಕ್ರಮ ಸಂಖ್ಯೆ | ವಿಭಾಗ | ಮಂಜೂರಾಗಿದ್ದ ಸಂಖ್ಯಾಬಲ | ಕಾರ್ಯನಿರತ ಸಂಖ್ಯಾಬಲ | ಖಾಲಿ ಹುದ್ದೆಗಳು | ಖಾಲಿ ಹುದ್ದೆಗಳ ಶೇಕಡಾವಾರು |
|---|---|---|---|---|---|
| 1 | ಆಡಳಿತ | 383 | 231 | 152 | 40 |
| 2 | ಇಂಜಿನಿಯರಿಂಗ್ | 33 | 18 | 15 | 45 |
| 3 | ಕೃಷಿ | 389 | 74 | 315 | 81 |
| 4 | ಸಹಕಾರ | 47 | 25 | 22 | 47 |
| | **ಒಟ್ಟು** | **852** | **348** | **504** | |

(ಆಧಾರ: ಕಾಡಾಗಳಿಂದ ಸಲ್ಲಿಸಲಾದ ವಿವರಗಳು)

2009–14ರಲ್ಲಿ ಗುರಿಗಳನ್ನು ಸಾಧಿಸುವಲ್ಲಿನ ಕೊರತೆಗೆ ಕಾರಣವಾದ ಅಂಶಗಳ ಪೈಕಿ ಸಿಬ್ಬಂದಿ ಕೊರತೆಯೂ ಒಂದಾಗುವುದು. ಎಲ್ಲಾ ಕಾಡಾಗಳೂ ತಾಂತ್ರಿಕ ಸಿಬ್ಬಂದಿಯ ಕೊರತೆಯಿಂದ

[22] ಡಿಸೆಂಬರ್ 2013ರಿಂದ ಶೇಕಡಾ 10ಕ್ಕೆ ಪರಿಷ್ಕರಿಸಲಾಯಿತು

[23] ಮುನಿರಾಬಾದ್, ಮೈಸೂರು ಮತ್ತು ಬೆಳಗಾವಿ

ಬಳಲುತ್ತಿದ್ದವು ಹಾಗೂ ಈ ಸಮಸ್ಯೆಯನ್ನು ಎದುರಿಸಲು ಪ್ರಯತ್ನಗಳನ್ನು ಮಾಡಲಾಗುತ್ತಿತ್ತು ಎಂದು ನಿರ್ಗಮನ ಸಭೆಯಲ್ಲಿ ಒಪ್ಪಿಕೊಳ್ಳಲಾಯಿತು.

## 2.1.13 ಸೃಷ್ಟಿಸಲಾಗಿದ್ದ ಹಾಗೂ ಬಳಸಿಕೊಳ್ಳಲಾಗಿದ್ದ ನೀರಾವರಿ ಸಾಮರ್ಥ್ಯಗಳ ನಡುವೆ ನಿರಂತರವಾಗಿದ್ದ ಅಂತರ

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಕಾರ್ಯಕ್ರಮದ ಪ್ರಮುಖ ಉದ್ದೇಶವು ಸೃಷ್ಟಿಸಲಾದ ಹಾಗೂ ಬಳಸಿಕೊಳ್ಳಲಾದ ನೀರಾವರಿ ಸಾಮರ್ಥ್ಯಗಳ ನಡುವಿನ ಅಂತರವನ್ನು ಕಡಿಮೆಗೊಳಿಸುವುದಾಗಿದೆ. ಏಪ್ರಿಲ್ 2009ರ ಆರಂಭದಲ್ಲಿ, ಎರಡು ಭಾಗಗಳ ನಡುವೆ ಇದ್ದಂತಹ 5.65 ಲಕ್ಷ ಹೆಕ್ಟೇರುಗಳ ಅಂತರವು ಮಾರ್ಚ್ 2014ರ ಅಂತ್ಯದ ವೇಳೆಗೆ, 2009–14ರ ಅವಧಿಯಲ್ಲಿನ 1.55 ಲಕ್ಷ ಹೆಕ್ಟೇರುಗಳ ನಿವ್ವಳ ಸಾಧನೆಯೊಂದಿಗೆ, 4.10 ಲಕ್ಷ ಹೆಕ್ಟೇರಿಗೆ ಇಳಿಮುಖವಾಗಿದ್ದಿತು. ಆದಾಗ್ಯೂ, ಕೂಡಿಸಲಾಗದ ಅಂತರವು 4.10 ಲಕ್ಷ ಹೆಕ್ಟೇರುಗಳಷ್ಟು ಅಧಿಕವಾಗಿದ್ದಿತಾದ್ದರಿಂದ, ಅದನ್ನು ಆಯವ್ಯಯ ಹಂಚಿಕೆಯ ಶೇಕಡಾ 59ರಷ್ಟು ಮೊತ್ತವು ಅಧ್ಯರ್ಪಣೆ/ನಷ್ಟವಾದುದರ ಹಿನ್ನೆಲೆಯಲ್ಲಿ ಪರಿಶೀಲಿಸಬೇಕು. ನೀರಾವರಿಗೆ ಒಳಪಟ್ಟ ಪ್ರದೇಶಗಳ ಬಗ್ಗೆ ಅಧಿಸೂಚನೆಯನ್ನು ನೀಡದಿರುವ ಕಾರಣದಿಂದ ಸೃಷ್ಟಿಸಲಾದ ಹಾಗೂ ಬಳಸಿಕೊಳ್ಳಲಾದ ಸಾಮರ್ಥ್ಯಗಳ ನಡುವಿನ ಅಂತರವು ಅಧಿಕವಾಗಿ ಕಾಣುತ್ತಿರಬಹುದೆಂದು ಜಲ ಸಂಪನ್ಮೂಲ ಇಲಾಖೆಯ ಕಾರ್ಯದರ್ಶಿಯವರು ನಿರ್ಗಮನ ಸಭೆಯಲ್ಲಿ ತಿಳಿಸಿದರು (ಅಕ್ಟೋಬರ್ 2014). ಆದಾಗ್ಯೂ, ಅಧಿಸೂಚನೆ ಹೊರಡಿಸಿರದ ಪ್ರದೇಶಗಳ ವಿವರಗಳನ್ನು ಒದಗಿಸಲಿಲ್ಲ.

## 2.1.14 ಬಳಸಿಕೊಳ್ಳಲಾದ ನೀರಾವರಿ ಸಾಮರ್ಥ್ಯ ಹಾಗೂ ವಾಸ್ತವಿಕವಾಗಿ ನೀರಾವರಿ ಒದಗಿಸಲಾದ ಪ್ರದೇಶಗಳ ನಡುವಿನ ಅಂತರದ ಕಾರಣ ಬೆಳೆ ನಷ್ಟ

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಕಾರ್ಯಕ್ರಮವು ಹೊರತೂಬಿನವರೆಗೂ (ಒಣ ಸಾಮರ್ಥ್ಯ) ಸೃಷ್ಟಿಸಲಾದ ನೀರಾವರಿ ಸಾಮರ್ಥ್ಯ ಮತ್ತು ರೈತರ ಜಮೀನಿಗೆ ನೀರು ಹರಿಸಲು ಇದನ್ನು ಹೊಲಗಾಲುವೆಗಳ ಮೂಲಕ (ನೀರಾವರಿ ಸಾಮರ್ಥ್ಯ) ಸಂಪರ್ಕಿಸುವುದರ ನಡುವಿನ ಅಂತರವನ್ನು ಕೂಡಿಸಲು ಸಂಪೂರ್ಣ ಗಮನ ಹರಿಸಿದೆ. ಭೂ ಸಮಗೊಳಿಸುವುದು ಮತ್ತು ಸಮರ್ಪಕ ಚರಂಡಿ ವ್ಯವಸ್ಥೆಯಂತಹ ಇತರ ಕ್ಷೇತ್ರಾಭಿವೃದ್ಧಿ ಕಾಮಗಾರಿಗಳನ್ನು ಕಾರ್ಯಗತಗೊಳಿಸಿದನಂತರ ಅತ್ಯುತ್ತಮ ಪ್ರಯೋಜನವನ್ನು ಪಡೆಯಲಾಗುವುದು. ಕ್ಷೇತ್ರಾಭಿವೃದ್ಧಿ ಕಾಮಗಾರಿಗಳ ಮುಗಿಯುವಿಕೆಯನ್ನು, ಅದು ಸೃಷ್ಟಿಸಲಾದ ನೀರಾವರಿ ಸಾಮರ್ಥ್ಯ ಹಾಗೂ ಬಳಸಿಕೊಳ್ಳಲಾದ ನೀರಾವರಿ ಸಾಮರ್ಥ್ಯಗಳ ನಡುವಿನ ಅಂತರವನ್ನು ಕಡಿಮೆಗೊಳಿಸುವುದರಿಂದ, ಕಾರ್ಯನಿರ್ವಹಣಾ ಸೂಚಕವಾಗಿ ಪರಿಗಣಿಸಲಾಗುವುದು.

ನೀರಾವರಿ ಸಾಮರ್ಥ್ಯವನ್ನು ಬಳಸಿಕೊಂಡ ಪ್ರದೇಶ ಮತ್ತು ವಾಸ್ತವಿಕವಾಗಿ ನೀರಾವರಿಯಾದ ಪ್ರದೇಶಗಳ ನಡುವೆ ಅಂತರವು ಕ್ಷೇತ್ರಾಭಿವೃದ್ಧಿ ಕಾಮಗಾರಿಗಳ ಮುಕ್ತಾಯದ ನಂತರವೂ ಇದ್ದಿತು ಎನ್ನುವುದನ್ನು ಗಮನಿಸಲಾಯಿತು. 2013–14ರಲ್ಲಿ, 16 ಯೋಜನೆಗಳಲ್ಲಿ, ಹೊಲಗಾಲುವೆಗಳನ್ನು ಸೃಷ್ಟಿಸಲಾದ 13.83 ಲಕ್ಷ ಹೆಕ್ಟೇರ್‌ನ ಪೈಕಿ 11.12 ಲಕ್ಷ ಹೆಕ್ಟೇರ್ ಮಾತ್ರ ವಾಸ್ತವಿಕವಾಗಿ ನೀರಾವರಿಯಾಯಿತು; ಹೀಗೆ, 2.71 ಲಕ್ಷ ಹೆಕ್ಟೇರ್ ಪ್ರದೇಶವು ನೀರಾವರಿಗೊಳಪಡದೆ ಉಳಿದವು. ಯೋಜನೆಗಳ ವಿವರಗಳನ್ನು **ಅನುಬಂಧ 2.1**ರಲ್ಲಿ ತೋರಿಸಲಾಗಿದೆ.

ಹೊಲಗಾಲುವೆಗಳ ನಿರ್ಮಾಣದ ಹೊರತಾಗಿಯೂ ನೀರಾವರಿಯಾಗದ 2.71 ಲಕ್ಷ ಹೆಕ್ಟೇರ್ ಪ್ರದೇಶದ ಬೆಳೆ ನಷ್ಟವು ವಾರ್ಷಿಕ ₹ 915.45 ಕೋಟಿಗೆ[24] ಲೆಕ್ಕಾಚಾರವಾಯಿತು.

[24] ಬೆಳಗಾವಿಯ ಹಿಪ್ಪರಗಿ ಅಣೆಕಟ್ಟು ಯೋಜನೆಯ ಸವಿವರ ಯೋಜನಾ ವರದಿಯಲ್ಲಿ ಅಳವಡಿಸಿಕೊಳ್ಳಲಾಗಿದ್ದ ದರದ ಆಧಾರದ ಮೇರೆಗೆ ಲೆಕ್ಕಹಾಕಲಾಗಿದೆ

## 2.1.15 ಮೇಲ್ವಿಚಾರಣೆ

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ಜಲ ನಿರ್ವಹಣೆಯ ಮಾರ್ಗಸೂಚಿಗಳ ಪ್ರಕಾರ, ಯೋಜನೆಗಳನ್ನು ಸ್ವತಂತ್ರ ಸಂಸ್ಥೆಗಳಿಂದ ಸಮಕಾಲೀನವಾಗಿ ಮೌಲ್ಯಮಾಪನ ಮಾಡಿಸಬೇಕು. ಈ ಕೆಳಗಿನ ಕರ್ತವ್ಯಗಳನ್ನು ನಿರ್ವಹಿಸುವುದಕ್ಕಾಗಿ ಕಾರ್ಯದರ್ಶಿಯವರ ನೇತೃತ್ವದ ಒಂದು ವಿವಿಧ ಅಧಿಕಾರಿಗಳ ಸಮಿತಿಯನ್ನು ರಚಿಸುವುದನ್ನೂ ಸಹ ಅದು ಹೇಳಿತ್ತು:

- ❖ ಕಾಡಾಗಳ ಭವಿಷ್ಯದ ಕಾರ್ಯಕ್ರಮಗಳ ಬಗ್ಗೆ ನಿರ್ಣಯಿಸುವುದು ಮತ್ತು ಅವು ಒಂದು ಸಂಘಟಿತ ಹಾಗೂ ಸಮಗ್ರತಾ ರೀತಿಯಲ್ಲಿ ಕಾರ್ಯಗತವಾಗುವುದನ್ನು ಖಚಿತಪಡಿಸಿಕೊಳ್ಳುವುದು ಹಾಗೂ ಸೂಕ್ತ ಸಲಹೆಗಳನ್ನು ನೀಡುವುದು;
- ❖ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ಜಲ ನಿರ್ವಹಣಾ ಕಾರ್ಯಕ್ರಮದ ಪ್ರಗತಿಯನ್ನು ಸಮೀಕ್ಷಿಸುವುದು ಹಾಗೂ ಎಲ್ಲಾ ಮಟ್ಟಗಳಲ್ಲಿಯೂ ಅದರ ಕಾರ್ಯನಿರ್ವಹಣೆಯನ್ನು ಉತ್ತಮಗೊಳಿಸುವುದಕ್ಕಾಗಿ ಸಲಹೆಗಳನ್ನು ನೀಡುವುದು;
- ❖ ಕರ್ನಾಟಕ ಸರ್ಕಾರದ ಮಟ್ಟದಲ್ಲಿ ಕೈಗೊಳ್ಳಬೇಕಾದ ಮೌಲ್ಯಮಾಪನ ಅಧ್ಯಯನಗಳ ಬಗ್ಗೆ ನಿರ್ಣಯಗಳನ್ನು ಕೈಗೊಳ್ಳುವುದು, ಹಾಗೂ
- ❖ ಕಾರ್ಯಕ್ರಮದಲ್ಲಿ ಯೋಜನೆಗಳ ಸೇರಿಕೆಗೆ ಜಲ ಸಂಪನ್ಮೂಲ ಮಂತ್ರಾಲಯಕ್ಕೆ ಕಳುಹಿಸಲಾಗುವ ಯೋಜನೆಯ ಪ್ರಸ್ತಾವನೆಗಳನ್ನು ಸಮೀಕ್ಷಿಸುವುದು ಹಾಗೂ ಶಿಫಾರಸು ಮಾಡುವುದು.

ಯಾವುದೇ ಯೋಜನೆಗಳ ಬಗ್ಗೆ ಸರ್ಕಾರವು ಸಮಕಾಲೀನ ಮೌಲ್ಯಮಾಪನವನ್ನು ನಡೆಸಿರಲಿಲ್ಲ ಎಂಬುದನ್ನು ಗಮನಿಸಲಾಯಿತು. ಕಾರ್ಯಚಟುವಟಿಕೆಗಳನ್ನು ಕಾರ್ಯಗತಗೊಳಿಸುವಲ್ಲಿ ಸಾಧಿಸಲಾದ ಪ್ರಗತಿಯನ್ನು ಸಮೀಕ್ಷಿಸುವುದಕ್ಕಾಗಿ ವಾರ್ಷಿಕ ಸಭೆಗಳನ್ನು ನಡೆಸಿದ ವಿವಿಧ ಅಧಿಕಾರಿಗಳ ಸಮಿತಿಯು ಪ್ರಗತಿಯಲ್ಲಿನ ಕೊರತೆಯನ್ನು ನೀಗಿಸುವುದಕ್ಕಾಗಿ ಯಾವುದೇ ಪರಿಹಾರಕ ಕ್ರಮಗಳ ಬಗ್ಗೆಯೂ ಸಲಹೆ ನೀಡಿರಲಿಲ್ಲ. ಪರಿಹಾರಕ ಕ್ರಮಗಳನ್ನು ತೆಗೆದುಕೊಳ್ಳುವ ರೀತಿಯಲ್ಲಿ ಯಾವ ರೀತಿಯ ಮೌಲ್ಯಮಾಪನ ಅಧ್ಯಯನಗಳನ್ನು ಮಾಡಬಹುದು ಎಂಬುದರ ಬಗ್ಗೆ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾದ ತನ್ನ ಜವಾಬ್ದಾರಿಯನ್ನು ಸಮಿತಿಯು ನಿಭಾಯಿಸಿರಲಿಲ್ಲ.

## 2.1.16 ನಿರ್ಣಯ

ಅಚ್ಚುಕಟ್ಟು ಪ್ರದೇಶಗಳ ಅಭಿವೃದ್ಧಿ ಚಟುವಟಿಕೆಗಳ ನಿಕೃಷ್ಟ ಅನುಷ್ಠಾನವು, ಕಾರ್ಯಕ್ರಮಗಳು, ಹಣಕಾಸು ಹಾಗೂ ಮಾನವ ಸಂಪನ್ಮೂಲಗಳ ಕೊರತೆ ನಿರ್ವಹಣೆಯಲ್ಲದೇ ಸಹಭಾಗಿತ್ವದ ನೀರಾವರಿ ನಿರ್ವಹಣೆಯ ಕೊರತೆಯ ಜೊತೆಗೆ ಸಾಕಷ್ಟಿರದ ಮೇಲ್ವಿಚಾರಣೆಯ ಪರಿಣಾಮವಾಗಿತ್ತು. ಗುರಿಯಾಗಿದ್ದ ಉದ್ದೇಶಗಳನ್ನು ಸಾಧಿಸುವಲ್ಲಿಯೂ ರಾಜ್ಯವು ವಿಫಲಗೊಂಡಿದ್ದರಿಂದ ರೈತರು ನಿರೀಕ್ಷಿತ ನೀರಾವರಿ ಲಾಭಗಳಿಂದ ವಂಚಿತರಾದರು. ಮುಂದುವರೆದು, ₹ 733 ಕೋಟಿ ಕೇಂದ್ರದ ನೆರವನ್ನು ಬಳಸಿಕೊಳ್ಳುವಲ್ಲಿ ರಾಜ್ಯವು ವಿಫಲವಾಯಿತು. ಪರಸ್ಪರ ತಿಳುವಳಿಕೆ ಪತ್ರಗಳಲ್ಲಿ ಅಗತ್ಯವಿದ್ದಂತೆ ಸಾಧನೆಗಳಲ್ಲಿ ಕೊರತೆಯ ಕಾರಣ ₹ 130 ಕೋಟಿಯು ಪುನರ್ಭರ್ತಿಯಾಗಲಿಲ್ಲ. ನೀರು ಬಳಕೆದಾರರ ಸಹಕಾರ ಸಂಘಗಳನ್ನು ರಚಿಸುವಲ್ಲಿ, ಫಲಾನುಭವಿ ರೈತರುಗಳನ್ನು ಅವುಗಳ ಸದಸ್ಯರನ್ನಾಗಿ ನೋಂದಣಿ ಮಾಡಿಸುವಲ್ಲಿನ ಲೋಪದೋಷಗಳು ಹಾಗೂ ಜಲ ನಿರ್ವಹಣೆಯನ್ನು ನೀರು ಬಳಕೆದಾರರ ಸಹಕಾರ ಸಂಘಗಳಿಗೆ ಅಸಮರ್ಪಕವಾಗಿ ವಹಿಸಿದ್ದುದು ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಚಟುವಟಿಕೆಗಳ ಅವಲಂಬಿಯಾಗಿರುವ ಸಹಭಾಗಿತ್ವದ ನೀರಾವರಿ ನಿರ್ವಹಣೆಯ ನಿಕೃಷ್ಟ ಅನುಷ್ಠಾನದತ್ತ ಒಯ್ದುವು. ಇದು, ಯೋಜನೆಯ ಅನುಷ್ಠಾನದ ಮೂಲ ಉದ್ದೇಶವನ್ನೇ ಪರಾಭವಗೊಳಿಸಿತು. ಆದ್ದರಿಂದ, ನೀರಿನ ನ್ಯಾಯಸಮ್ಮತ ವಿತರಣೆಯನ್ನೂ ಸಹ ಸಾಧಿಸಲಾಗಲಿಲ್ಲ.

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಚಟುವಟಿಕೆಗಳ ನಿಕೃಷ್ಟ ಅನುಷ್ಠಾನವು ಸೃಷ್ಟಿಸಲಾದ ಹಾಗೂ ಬಳಸಲಾದ ನೀರಾವರಿ ಸಾಮರ್ಥ್ಯಗಳ ನಡುವೆ 4.10 ಲಕ್ಷ ಹೆಕ್ಟೇರ್‌ಗಳ ಅಂತರದತ್ತ ಒಯ್ದಿತು. ಹೊಲಗಾಲುವೆಗಳ ನಿರ್ಮಾಣದ ಹೊರತಾಗಿಯೂ 2.71 ಲಕ್ಷ ಹೆಕ್ಟೇರ್‌ಗೆ ನೀರಾವರಿ ಒದಗಿಸದಿದ್ದ ಪರಿಣಾಮವಾಗಿ ಸಂಭವಿಸಿದ್ದ ಬೆಳೆ ನಷ್ಟವು ವಾರ್ಷಿಕ ₹ 915.45 ಕೋಟಿಗೆ ಅಂದಾಜಾಯಿತು.

## 2.1.17 ಶಿಫಾರಸುಗಳು

ಈ ಕೆಳಗಿನ ಅಂಶಗಳನ್ನು ನಾವು ಶಿಫಾರಸು ಮಾಡುತ್ತೇವೆ:

- ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಚಟುವಟಿಕೆಗಳನ್ನು ಒಂದು ಕಾಲಮಿತಿಯಲ್ಲಿ ಪೂರ್ಣಗೊಳಿಸುವುದಕ್ಕಾಗಿ ವಾರ್ಷಿಕ ಕ್ರಿಯಾ ಯೋಜನೆಗಳನ್ನು ತಯಾರಿಸಲು ಅನುಕೂಲವಾಗುವಂತೆ ಮುನ್ನೋಟ ಯೋಜನೆಯ ತಯಾರಿಕೆಗೆ ಕಾಡಾಗಳು ಆದ್ಯತೆ ನೀಡುವುದು;
- ಸರ್ಕಾರವು, ಅಗತ್ಯವಿರುವ ಹಾಗೂ ಹಂಚಿಕೆ ಮಾಡಲಾದ ನಿಧಿಯ ನಡುವೆ ಬೃಹತ್ತಾದ ಅಸಮತೆ ಇಲ್ಲದಿರುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಪರಿಣಾಮಕಾರಿಯಾದ ಆಯವ್ಯಯ ಹಂಚಿಕೆಯನ್ನು ಖಚಿತಪಡಿಸಿಕೊಳ್ಳುವುದು;
- ಸರ್ಕಾರವು, ಕೇಂದ್ರ ಸಹಾಯಧನದ ಬಳಕೆಗೆ ಹಾಗೂ ತಡೆಹಿಡಿಯಲಾಗಿರುವ ಮನರ್ಭರ್ತಿಯಾಗಬೇಕಾದ ಮೊತ್ತದ ಬಿಡುಗಡೆಗೆ ಅನುಕೂಲಿಸಲು ಪರಿಷ್ಕೃತ ಪರಸ್ಪರ ತಿಳುವಳಿಕೆ ಪತ್ರಗಳನ್ನು ಭಾರತ ಸರ್ಕಾರಕ್ಕೆ ಸಲ್ಲಿಸುವುದು;
- ಪರಿಹಾರಾತ್ಮಕ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕಾಗಿ ಸೃಷ್ಟಿಸಲಾದ ನೀರಾವರಿ ಸಾಮರ್ಥ್ಯ ಹಾಗೂ ವಾಸ್ತವಿಕವಾಗಿ ನೀರಾವರಿಯಾದ ಪ್ರದೇಶಗಳ ನಡುವೆ ಅಂತರದಲ್ಲಿ ಪರಿಣಮಿಸುತ್ತಿರುವುದಕ್ಕೆ ನಿರ್ದಿಷ್ಟ ಕಾರಣಗಳನ್ನು ಕಾಡಾಗಳು ಗುರುತಿಸುವುದು;
- ಕಾರ್ಯಕ್ರಮಗಳ ಉದ್ದೇಶಗಳು ಈಡೇರುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಸರ್ಕಾರವು ಮೇಲ್ವಿಚಾರಣಾ ವ್ಯವಸ್ಥೆಯನ್ನು ಬಲಪಡಿಸುವುದು; ಹಾಗೂ
- ಜಲ ಸಂಪನ್ಮೂಲಗಳ ಹೆಚ್ಚಿನ ಸಮರ್ಥ ಬಳಕೆಯನ್ನು ಅನುಕೂಲಿಸಲು, ನೀರು ಬಳಕೆದಾರರ ಸಹಕಾರ ಸಂಘ, ನೀರು ಬಳಕೆದಾರರ ವಿತರಕ ಮಟ್ಟದ ಒಕ್ಕೂಟ ಹಾಗೂ ನೀರು ಬಳಕೆದಾರರ ಯೋಜನಾ ಮಟ್ಟದ ಒಕ್ಕೂಟಗಳ ರಚನೆಯನ್ನು ಸರ್ಕಾರವು ತ್ವರಿತಗೊಳಿಸುವುದು.

ಈ ವಿಷಯವನ್ನು ಸರ್ಕಾರಕ್ಕೆ ಸೆಪ್ಟೆಂಬರ್ 2014ರಲ್ಲಿ ತಿಳಿಸಲಾಯಿತು; ಅವರ ಉತ್ತರವನ್ನು ನಿರೀಕ್ಷಿಸಲಾಗಿತ್ತು (ಅಕ್ಟೋಬರ್ 2014).

# ಅಧ್ಯಾಯ 3

# ಅನುಪಾಲನಾ ಲೆಕ್ಕಪರಿಶೋಧನೆ

# ಅಧ್ಯಾಯ 3

# ಅನುಪಾಲನಾ ಲೆಕ್ಕಪರಿಶೋಧನೆ

ಆರ್ಥಿಕ ವಲಯದ ಇಲಾಖೆಗಳ, ಅವುಗಳ ಕ್ಷೇತ್ರೀಯ ರಚನೆಗಳ ಹಾಗೂ ಸ್ವಾಯತ್ತ ಸಂಸ್ಥೆಗಳ ಅನುಪಾಲನಾ ಲೆಕ್ಕಪರಿಶೋಧನೆಯು ಸಂಪನ್ಮೂಲಗಳ ನಿರ್ವಹಣೆಯಲ್ಲಿನ ಲೋಪಗಳ ಹಾಗೂ ಮಾದರಿ ಸೂತ್ರಕ್ಕೆ ತಕ್ಕಂತೆ ಕ್ರಮಬದ್ಧತೆ, ಔಚಿತ್ಯತೆ ಮತ್ತು ಮಿತವ್ಯಯಗಳನ್ನು ಪಾಲಿಸುವಲ್ಲಿನ ವೈಫಲ್ಯತೆಗಳ ಹಲವಾರು ನಿದರ್ಶನಗಳನ್ನು ಹೊರತಂದಿತು. ಇವುಗಳನ್ನು ಮುಂದಿನ ಕಂಡಿಕೆಗಳಲ್ಲಿ ಮಂಡಿಸಲಾಗಿದೆ:

**ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ**

## 3.1 ಸಹಕಾರಿ ಸಕ್ಕರೆ ಕಾರ್ಖಾನೆಗಳ ಗುತ್ತಿಗೆ ಮತ್ತು ಸಮಾಪನೆ

### 3.1.1 ಪೀಠಿಕೆ

ಭಾರತವು ಪ್ರಪಂಚದಲ್ಲಿ ಎರಡನೆಯ ಅತಿ ಹೆಚ್ಚು ಸಕ್ಕರೆ ಉತ್ಪಾದಕ ದೇಶವಾಗಿದೆ. ರಾಷ್ಟ ಮಟ್ಟದಲ್ಲಿ, ಕರ್ನಾಟಕವು ಕಬ್ಬು ಉತ್ಪಾದನೆಯಲ್ಲಿ ನಾಲ್ಕನೆಯ ಹಾಗೂ ಸಕ್ಕರೆ ಉತ್ಪಾದನೆಯಲ್ಲಿ ಮೂರನೆಯ ಸ್ಥಾನದಲ್ಲಿದೆ. ಕರ್ನಾಟಕದಲ್ಲಿ, ಏಪ್ರಿಲ್ 2014ರಲ್ಲಿದ್ದಂತೆ ಸಹಕಾರಿ ವಲಯದಲ್ಲಿ 24 ಸಕ್ಕರೆ ಕಾರ್ಖಾನೆಗಳಿವೆ. ರಾಜ್ಯದಲ್ಲಿ 2009–14ರಲ್ಲಿ[25] ಅರೆಯಲಾದ ಒಟ್ಟು ಕಬ್ಬಿನ ಪ್ರಮಾಣವು 1,627.73 ಲಕ್ಷ ಮೆಟ್ರಿಕ್ ಟನ್‌ಗಳಾದರೆ, ಸಹಕಾರಿ ಸಕ್ಕರೆ ಕಾರ್ಖಾನೆಗಳಲ್ಲಿ ಅರೆಯಲಾದ ಕಬ್ಬಿನ ಪ್ರಮಾಣವು 427.38 ಲಕ್ಷ ಮೆಟ್ರಿಕ್ ಟನ್‌ಗಳು. ಈ ಕಾರ್ಖಾನೆಗಳು ರಾಜ್ಯದಲ್ಲಿ ಉತ್ಪತ್ತಿಯಾದ ಒಟ್ಟು ಸಕ್ಕರೆಯ ಪ್ರಮಾಣದ ಶೇಕಡಾ 26ರಷ್ಟು ಕೊಡುಗೆ ನೀಡಿದ್ದವು. ಸಹಕಾರಿ ವಲಯದಲ್ಲಿನ ಸಕ್ಕರೆ ಕಾರ್ಖಾನೆಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಗಣಿಸಿ, ಕರ್ನಾಟಕ ಸರ್ಕಾರವು ಸಹಕಾರಿ ವಲಯದಲ್ಲಿ ದುಸ್ಥಿತಿಯಲ್ಲಿರುವ ಕೈಗಾರಿಕೆಗಳನ್ನು ಸುವ್ಯವಸ್ಥೆಗೆ ತರಲು ಸಚಿವ ಸಂಪುಟದ ಒಂದು ಉಪ–ಸಮಿತಿಯನ್ನು ನೇಮಿಸಿತು (ಜನವರಿ 2003). ತಾಂತ್ರಿಕ–ಮಿತವ್ಯಯತೆ ಹಾಗೂ ಹಣಕಾಸು ಸ್ಥಿತಿಗತಿಯನ್ನು ಗಮನದಲ್ಲಿಟ್ಟುಕೊಂಡು ಹಾಗೂ ಋಣಾತ್ಮಕ ಹಣಕಾಸಿನ ಸ್ಥಿತಿ, ಬೃಹತ್ ಪ್ರಮಾಣದ ನಗದು ನಷ್ಟ ಹಾಗೂ ಬಂಡವಾಳದ ಕರಗುವಿಕೆಯ ಆಧಾರದ ಮೇರೆಗೆ ಉಪ–ಸಮಿತಿಯು, ಆಗ ಇದ್ದಂತಹ ಹದಿನೆಂಟು ಸಹಕಾರಿ ಸಕ್ಕರೆ ಕಾರ್ಖಾನೆಗಳ ಪೈಕಿ ಏಳು[26] ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಕಳಪೆ ಸ್ಥಿತಿಯಲ್ಲಿರುವುವು ಎಂದು ವರ್ಗೀಕರಿಸಿತು (ಡಿಸೆಂಬರ್ 2003). ಏಳು ಸಹಕಾರಿ ಸಕ್ಕರೆ ಕಾರ್ಖಾನೆಗಳ ಪೈಕಿ, ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ ಹಾಗೂ ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆಗಳು 2003–04ರಿಂದ ಕಾರ್ಯನಿರ್ವಹಿಸುತ್ತಿಲ್ಲವೆಂದು ವರದಿಯಾಗಿದ್ದಿತು; ವಾಣಿವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆ (ಆಗಸ್ಟ್ 2004) ಹಾಗೂ ರಾಯಭಾಗ ಸಹಕಾರಿ ಸಕ್ಕರೆ ಕಾರ್ಖಾನೆಗಳು (ಜನವರಿ 2004) ಅದಾಗಲೇ ಸಮಾಪನದಲ್ಲಿದ್ದವು. ಉಪ–ಸಮಿತಿಯ ಶಿಫಾರಸುಗಳ ಮೇರೆಗೆ, ನಾಲ್ಕು ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು[27] ಗುತ್ತಿಗೆಗೆ ನೀಡಲು, ವಾಣಿವಿಲಾಸ ಮತ್ತು ರಾಯಭಾಗ ಸಹಕಾರಿ ಸಕ್ಕರೆ ಕಾರ್ಖಾನೆಗಳ ಸಮಾಪನ ಪ್ರಕ್ರಿಯೆಗಳನ್ನು ಮುಂದುವರೆಸಲು ಹಾಗೂ ಭಾಗ್ಯಲಕ್ಷ್ಮಿ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಬೆಳಗಾವಿಯ ಜಿಲ್ಲಾಧಿಕಾರಿಯವರಿಗೆ ವಹಿಸಿಕೊಡಲು ಸಚಿವ ಸಂಪುಟವು ಅನುಮೋದನೆ ನೀಡಿತು (ಜುಲೈ ಹಾಗೂ ಸೆಪ್ಟೆಂಬರ್ 2005).

[25] ಕಬ್ಬು ಅರೆಯುವ ವರ್ಷ ಅಕ್ಟೋಬರ್‌ನಿಂದ ಸೆಪ್ಟೆಂಬರ್ ಹಾಗೂ 2013–14ರ ಕಬ್ಬು ಅರೆಯುವ ವರ್ಷವನ್ನು ಏಪ್ರಿಲ್ 2014ರವರೆಗೆ ಸೀಮಿತಗೊಳಿಸಲಾಗಿದ್ದಿತು

[26] ಪಾಂಡವಪುರ, ರಾಯಬಾಗ, ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆ, ಆಳಂದ, ದಕ್ಷಿಣ ಕನ್ನಡ, ಭಾಗ್ಯಲಕ್ಷ್ಮಿ, ವಾಣಿವಿಲಾಸ

[27] ಪಾಂಡವಪುರ, ಕರ್ನಾಟಕ, ಆಳಂದ ಹಾಗೂ ದಕ್ಷಿಣ ಕನ್ನಡ

1973ರಲ್ಲಿ ಸ್ಥಾಪಿತವಾದ ಸಕ್ಕರೆ ಆಯುಕ್ತರ ಕಚೇರಿಯು ಕಬ್ಬಿನ ಬೆಳೆ ಮೇಲ್ವಿಚಾರಣೆ ಮಾಡಲು ಜವಾಬ್ದಾರಿಯಾಗಿತ್ತು ಮತ್ತು ಸಹಕಾರಿ ಸಕ್ಕರೆ ಕಾರ್ಖಾನೆಗಳ ರಿಜಿಸ್ಟ್ರಾರ್‌ನಂತೆ ಸಹಾ ಕಾರ್ಯನಿರ್ವಹಿಸುತ್ತದೆ. ಸರ್ಕಾರದ ಮಟ್ಟದಲ್ಲಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಕಾರ್ಯದರ್ಶಿಯವರು ಸಹಕಾರಿ ಸಕ್ಕರೆ ಕಾರ್ಖಾನೆಗಳ ಕಾರ್ಯವೈಖರಿಯನ್ನು ಮೇಲ್ವಿಚಾರಣೆ ಮಾಡಲು ಜವಾಬ್ದಾರಿಯುತವಾಗಿರುತ್ತಾರೆ. ಉಪ–ಸಮಿತಿಯ ಬದಲಾಗಿ ಸರ್ಕಾರವು, ರಾಜ್ಯ ಮಟ್ಟದ ಎರಡು ಸಲಹಾ ಸಮಿತಿಗಳನ್ನು, ಒಂದು ಸಮಿತಿಯನ್ನು ಆಯುಕ್ತರವರ ನೇತೃತ್ವದಲ್ಲಿ ಹಾಗೂ ಮತ್ತೊಂದನ್ನು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಕಾರ್ಯದರ್ಶಿಯವರ ನೇತೃತ್ವದಲ್ಲಿ, ಅನುಕ್ರಮವಾಗಿ ಆಡಳಿತ ಮತ್ತು ಟೆಂಡರು ಪ್ರಕ್ರಿಯೆಗಳು ಹಾಗೂ ಟೆಂಡರುಗಳನ್ನು ಅಂತಿಮ ರೂಪಕ್ಕೆ ತರುವುದಕ್ಕಾಗಿ ರಚಿಸಿತು (ಮೇ 2008).

ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ:

### 3.1.2 ಸಹಕಾರಿ ಸಕ್ಕರೆ ಕಾರ್ಖಾನೆಗಳ ಗುತ್ತಿಗೆ ನೀಡುವಿಕೆ

2005 ಮತ್ತು 2009ರ ನಡುವೆ, ಆಯುಕ್ತರವರ ಶಿಫಾರಸಿನ ಮತ್ತು ಸರ್ಕಾರದ ಅನುಮೋದನೆಯ ಮೇರೆಗೆ ಹನ್ನೊಂದು ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು **ಕೋಷ್ಟಕ 3.1**ರಲ್ಲಿ ವಿವರಿಸಿರುವಂತೆ ಗುತ್ತಿಗೆಗೆ ನೀಡಲಾಗಿದ್ದಿತು:

**ಕೋಷ್ಟಕ 3.1: 2005 ಮತ್ತು 2009ರ ನಡುವೆ ಗುತ್ತಿಗೆಗೆ ನೀಡಲಾಗಿದ್ದ ಸಹಕಾರಿ ಸಕ್ಕರೆ ಕಾರ್ಖಾನೆಗಳ ವಿವರಗಳು**

| ಕ್ರಮ ಸಂಖ್ಯೆ | ಸಹಕಾರಿ ಸಕ್ಕರೆ ಕಾರ್ಖಾನೆಯ ಹೆಸರು | ಸರ್ಕಾರದ ಅನುಮೋದನೆಯ ದಿನಾಂಕ | ಗುತ್ತಿಗೆದಾರರ ಹೆಸರು | ಗುತ್ತಿಗೆಯ ಅವಧಿ | ಒಪ್ಪಂದದ ದಿನಾಂಕ | ಇಂದಿನ ಸ್ಥಿತಿ |
|---|---|---|---|---|---|---|
| 1 | ಆಳಂದ್ | ನವೆಂಬರ್ 2005<br>ಅಕ್ಟೋಬರ್ 2009 | ರೇಣುಕ ಶುಗರ್ಸ್<br>ಎನ್ಸೆಸ್ಲ್ ಶುಗರ್ಸ್ | 07 ವರ್ಷ<br>30 ವರ್ಷ | ಜನವರಿ 2006<br>ಮಾರ್ಚ್ 2010 | ಗುತ್ತಿಗೆಯಲ್ಲಿದೆ |
| 2 | ಭದ್ರ | ಸೆಪ್ಟೆಂಬರ್ 2006 | ಗ್ಯಾನ್‌ಬ ಶುಗರ್ಸ್ | 30 ವರ್ಷ | ಜೂನ್ 2010 | 03.09.2011ರಂದು ಕೊನೆಯಾಯಿತು (ಕ್ರಿಯಾಶೀಲವಾಗಿಲ್ಲ) |
| 3 | ಭಾಗ್ಯಲಕ್ಷ್ಮಿ | ಸೆಪ್ಟೆಂಬರ್ 2007 | ಲೈಲಾ ಶುಗರ್ಸ್ | 30 ವರ್ಷ | ಜೂನ್ 2010 | ಗುತ್ತಿಗೆಯಲ್ಲಿದೆ |
| 4 | ಧನಲಕ್ಷ್ಮಿ | ನವೆಂಬರ್ 2006 | ಪ್ಯಾರೀಸ್ ಶುಗರ್ಸ್ | 25 ವರ್ಷ | ಅಕ್ಟೋಬರ್ 2007 | ಗುತ್ತಿಗೆಯಲ್ಲಿದೆ |
| 5 | ದಕ್ಷಿಣ ಕನ್ನಡ | ನವೆಂಬರ್ 2006 | ರಾಮೀ ಶುಗರ್ಸ್ | 30 ವರ್ಷ | ಏಪ್ರಿಲ್ 2008 | ನ್ಯಾಯಾಲಯದಲ್ಲಿ ತೀರ್ಮಾನವಾಗಬೇಕಿದೆ (ಕ್ರಿಯಾಶೀಲವಾಗಿಲ್ಲ) |
| 6 | ಹೇಮಾವತಿ | ಸೆಪ್ಟೆಂಬರ್ 2007 | ಚಾಮುಂಡೇಶ್ವರಿ ಶುಗರ್ಸ್ | 30 ವರ್ಷ | ಮಾರ್ಚ್ 2011 (26.10.2007ರಿಂದ ಜಾರಿಯಾದಂತೆ) | ಗುತ್ತಿಗೆಯಲ್ಲಿದೆ |
| 7 | ಕರ್ನಾಟಕ | ಜೂನ್ 2007 | ಜಿಎಂ ಶುಗರ್ಸ್ | 30 ವರ್ಷ | ಫೆಬ್ರವರಿ 2008 | ಗುತ್ತಿಗೆಯಲ್ಲಿದೆ |
| 8 | ಪಾಂಡವಪುರ | ನವೆಂಬರ್ 2005 | ಕೊಠಾರಿ ಶುಗರ್ಸ್ | 07 ವರ್ಷ | ಜನವರಿ 2006 | 17.3.2010ರಂದು ಕೊನೆಯಾಯಿತು |
| 9 | ಮೃದಗಿರಿ | ಮಾರ್ಚ್ 2007 | ವಿಜಯನಗರ ಶುಗರ್ಸ್ | 30 ವರ್ಷ | ಮಾರ್ಚ್ 2007 | ಗುತ್ತಿಗೆಯಲ್ಲಿದೆ |
| 10 | ರಾಯಭಾಗ್ | ಜನವರಿ 2007 | ರೇಣುಕ ಶುಗರ್ಸ್ | 30 ವರ್ಷ | ಅಕ್ಟೋಬರ್ 2008 | ಗುತ್ತಿಗೆಯಲ್ಲಿದೆ |
| 11 | ಶ್ರೀರಾಮ | ಜುಲೈ 2006 | ಅಂಬಿಕ ಶುಗರ್ಸ್ | 22 ವರ್ಷ | ಆಗಸ್ಟ್ 2006 | 31.07.2012ರಂದು ಕೊನೆಯಾಯಿತು (ಕ್ರಿಯಾಶೀಲವಾಗಿಲ್ಲ) |

ಮೇಲಿನ ಕೋಷ್ಟಕದಿಂದ ಕಾಣಬಹುದಾದಂತೆ, ಎರಡು ಸಹಕಾರಿ ಸಕ್ಕರೆ ಕಾರ್ಖಾನೆಗಳು ಗುತ್ತಿಗೆ ಒಪ್ಪಂದಗಳು ಕೊನೆಯಾಗಿರುವುದರಿಂದ ಈ ದಿನಾಂಕದವರೆಗೂ ಕಾರ್ಯನಿರ್ವಹಿಸುತ್ತಿಲ್ಲ (ಅಕ್ಟೋಬರ್ 2014) ಹಾಗೂ ಸಹಕಾರಿ ಸಕ್ಕರೆ ಕಾರ್ಖಾನೆ ಹಾಗೂ ಗುತ್ತಿಗೆದಾರರ ನಡುವಿನ ವಿವಾದವು ನ್ಯಾಯಾಲಯದಲ್ಲಿ ಬಾಕಿ ಇದ್ದುದರಿಂದ ಒಂದು ಸಹಕಾರಿ ಸಕ್ಕರೆ ಕಾರ್ಖಾನೆಯು ಕಾರ್ಯನಿರ್ವಹಿಸುತ್ತಿರಲಿಲ್ಲ.

### 3.1.2.1 ಕಬ್ಬು ಬೆಳೆ ಪ್ರದೇಶದ ಮರು–ಹಂಚಿಕೆ

ರಾಯಭಾಗ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಮೆ. ರೇಣುಕಾ ಶುಗರ್ಸ್‌ಗೆ ಅಕ್ಟೋಬರ್ 2008ರಿಂದ 30 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲಾಗಿದ್ದಿತು. ಆದಾಗ್ಯೂ, ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಗುತ್ತಿಗೆಗೆ ನೀಡುವ ಮೊದಲು, ಬೆಳಗಾವಿ ಜಿಲ್ಲೆಯ[28] ರಾಯಭಾಗ ತಾಲ್ಲೂಕಿನಲ್ಲಿ ಒಂದು ಹೊಸ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭಿಸಲು ಸರ್ಕಾರವು ಅನುಮತಿಯನ್ನು ನೀಡಿತು (ಆಗಸ್ಟ್ 2007) ಹಾಗೂ ಸಹಕಾರಿ ಸಕ್ಕರೆ ಕಾರ್ಖಾನೆಯ ಮೀಸಲು ಪ್ರದೇಶದಿಂದ ಹೊಸ ಸಕ್ಕರೆ ಕಾರ್ಖಾನೆಗೆ 14 ಗ್ರಾಮಗಳಲ್ಲಿ ಕಬ್ಬು ಬೆಳೆಯುವ ಪ್ರದೇಶಗಳನ್ನು ಮರುಹಂಚಿಕೆ ಮಾಡಿತು.

ಹೊಸ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭಿಸಲು ಸರ್ಕಾರವು ನೀಡಿದ ಅನುಮತಿಯು, ಪ್ರಸ್ತುತ ಇರುವ ಸಕ್ಕರೆ ಕಾರ್ಖಾನೆಯಿಂದ 15 ಕಿಮೀ ತ್ರಿಜ್ಯದೊಳಗೆ ಹೊಸ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸುವುದನ್ನು ಪ್ರತಿಬಂಧಿಸುವ ಸಕ್ಕರೆ ನಿಯಂತ್ರಣ ಆದೇಶ, 1966ರ ಅನುವುಗಳ ಉಲ್ಲಂಘನೆಯಾಗಿತ್ತು ಎನ್ನುವುದನ್ನು ಗಮನಿಸಲಾಯಿತು. ಪರಿಣಾಮವಾಗಿ, ಗುತ್ತಿಗೆದಾರರು ಅರೆಯುವ ಸಾಮರ್ಥ್ಯವನ್ನು ಹೆಚ್ಚಿಸುವುದು, ಸಹ–ವಿದ್ಯುತ್ ಉತ್ಪಾದನಾ ಸ್ಥಾವರ ಹಾಗೂ ಬಟ್ಟಿಗೃಹವನ್ನು ಸ್ಥಾಪಿಸುವುದು, ಇವುಗಳಿಗೆ ಸಂಬಂಧಿಸಿದ ಗುತ್ತಿಗೆ ಒಪ್ಪಂದದ ಷರತ್ತುಗಳನ್ನು ಅನುಸರಿಸುವಲ್ಲಿ ವಿಫಲರಾದರು.

### 3.1.2.2 ಗುತ್ತಿಗೆದಾರರಿಗೆ ಮಾಡಿಕೊಡಲಾದ ಅನರ್ಹ ಲಾಭ

ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು 26 ಅಕ್ಟೋಬರ್ 2007ರಿಂದ ಜಾರಿಗೆ ಬರುವಂತೆ 30 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲಾಗಿದ್ದಿತು. ಗುತ್ತಿಗೆ ಬಾಡಿಗೆಗಳ ಪಾವತಿಯ ಜೊತೆಗೆ, ಗುತ್ತಿಗೆದಾರರು ₹ 2.50 ಕೋಟಿ (₹ ಐದು ಕೋಟಿಯ ಪೈಕಿ ₹ 2.50 ಕೋಟಿಯನ್ನು ಗುತ್ತಿಗೆ ಒಪ್ಪಂದವಾಗುವ ಮೊದಲೇ ಪಾವತಿಸಿದ್ದರು) ಉಳಿಕೆ ಭದ್ರತಾ ಠೇವಣಿಯನ್ನು 26 ಅಕ್ಟೋಬರ್ 2009ರ ಒಳಗೆ ಪಾವತಿಸಬೇಕಿದ್ದಿತು. ದಾಖಲೆಗಳ ಪರಿಶೀಲನೆಯು, ಗುತ್ತಿಗೆದಾರರಿಗೆ ಅನರ್ಹ ಲಾಭವನ್ನು ಮಾಡಿಕೊಡುವಲ್ಲಿಗೆ ದಾರಿ ಮಾಡಿಕೊಟ್ಟ ಟೆಂಡರು/ಗುತ್ತಿಗೆ ಷರತ್ತುಗಳ ಈ ಕೆಳಗಿನ ಉಲ್ಲಂಘನೆಗಳನ್ನು ತೋರಿಸಿಕೊಟ್ಟಿತು:

- ಟೆಂಡರಿನ ಷರತ್ತು ಮತ್ತು ಕರಾರುಗಳ ಪ್ರಕಾರ, ಗುತ್ತಿಗೆ ಒಪ್ಪಂದಕ್ಕೆ ಸಹಿ ಮತ್ತು ನೋಂದಣಿಯನ್ನು 15 ದಿನಗಳ ಒಳಗೆ ಮಾಡಬೇಕಿತ್ತು. ಆದರೆ, 26 ಅಕ್ಟೋಬರ್ 2007ರಿಂದ ಜಾರಿಗೆ ಬಂದ ಗುತ್ತಿಗೆ ಒಪ್ಪಂದವನ್ನು 41 ತಿಂಗಳು ಕಳೆದನಂತರ ನೋಂದಾಯಿಸಲಾಯಿತು (ಮಾರ್ಚ್ 2011).
- ಕಬ್ಬು ಅರೆಯುವ ಕಾರ್ಯವನ್ನು ಪ್ರಾರಂಭಿಸುವುದಕ್ಕೆ ಮೊದಲು ಭದ್ರತಾ ಠೇವಣಿಯ ಮೊತ್ತವನ್ನು ಪಾವತಿಸಲು ಇತರ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಗುತ್ತಿಗೆ ಒಪ್ಪಂದಗಳು ವಿಧಿಸಿದ್ದ ಷರತ್ತುಗಳ ಉಲ್ಲಂಘನೆಯಲ್ಲಿ, ಈ ಗುತ್ತಿಗೆ ಒಪ್ಪಂದವು ಭದ್ರತಾ ಠೇವಣಿಯ ಉಳಿಕೆ ಮೊತ್ತ ₹ 2.50 ಕೋಟಿಯನ್ನು ಒಪ್ಪಂದವಾದ ಎರಡು ವರ್ಷಗಳ ಒಳಗೆ ಪಾವತಿಸಲು ಅನುಮತಿಸಿದ್ದಿತು. ಆದಾಗ್ಯೂ, ಗುತ್ತಿಗೆದಾರರು ಉಳಿಕೆ ಭದ್ರತಾ ಠೇವಣಿಯ ಮೊತ್ತವನ್ನು ಗುತ್ತಿಗೆ ಒಪ್ಪಂದದಲ್ಲಿ ನಿರ್ದಿಷ್ಟಪಡಿಸಿದ್ದ ವಾಯಿದೆ ದಿನದಿಂದ 1,039 ದಿನಗಳ ವಿಳಂಬದ ನಂತರ ಪಾವತಿಸಿದರು.
- ಆಯುಕ್ತರವರ ನೇತೃತ್ವದ ರಾಜ್ಯ ಮಟ್ಟದ ಸಲಹಾ ಸಮಿತಿಯು ನಾಲ್ಕು ಸಿಬ್ಬಂದಿ ವಸತಿಗೃಹಗಳನ್ನು ವಹಿಸಿಕೊಳ್ಳಲು ಹಾಗೂ ಕೇಂದ್ರ ಸರ್ಕಾರದಿಂದ ಸಕ್ಕರೆ ಅಭಿವೃದ್ಧಿ ನಿಧಿ ಸಾಲವನ್ನು ಪಡೆಯುವ ಸಲುವಾಗಿ ಸಹಕಾರಿ ಸಕ್ಕರೆ ಕಾರ್ಖಾನೆಯ ಭೂಮಿ ಮತ್ತು ಕಟ್ಟಡ, ಸ್ಥಾವರ ಮತ್ತು ಯಂತ್ರೋಪಕರಣಗಳು ಹಾಗೂ ಇತರೆ ಆಸ್ತಿಗಳನ್ನು ಅಡ ಇಡಲು ಗುತ್ತಿಗೆದಾರರಿಗೆ ಅನುಮೋದನೆ ನೀಡಿತು (ಆಗಸ್ಟ್ 2008 ಮತ್ತು ಸೆಪ್ಟಂಬರ್ 2010). ಈ ರಿಯಾಯಿತಿಗಳು ಟೆಂಡರ್

[28] ರಾಯಭಾಗ ಸಹಕಾರಿ ಸಕ್ಕರೆ ಕಾರ್ಖಾನೆ ಹಾಗೂ ಹೊಸ ಸಕ್ಕರೆ ಕಾರ್ಖಾನೆಯ ನಡುವಿನ ಅಂತರವು 15 ಕಿಮೀಗಿಂತ ಕಡಿಮೆ ಇದ್ದಿತು

ಸಮಯದಲ್ಲಿ ಲಭ್ಯವಿರದೆ, ಗುತ್ತಿಗೆ ಒಪ್ಪಂದದಲ್ಲಿ ಗುತ್ತಿಗೆದಾರರ ಕೋರಿಕೆಯಂತೆ ನಂತರ ಸೇರಿಸಲಾಗಿತ್ತಾದ್ದರಿಂದ, ಇದು ಟೆಂಡರ್ ದಾಖಲೆಯ ಷರತ್ತುಗಳನ್ನು ಗುತ್ತಿಗೆದಾರರಿಗೆ ನೀಡಿದನಂತರ ಬದಲಾಯಿಸಿದ್ದಕ್ಕೆ ಸಮನಾಗುತ್ತದೆ.

- ❖ ಗುತ್ತಿಗೆದಾರರು ಗುತ್ತಿಗೆ ಬಾಡಿಗೆಗಳ ಕಡೆಗೆ ನೀಡಿದ್ದ (ಡಿಸೆಂಬರ್ 2013) ₹ 80 ಲಕ್ಷದ ಎಂಟು ಚೆಕ್‌ಗಳು ಬ್ಯಾಂಕ್‌ನಲ್ಲಿ ನಗದಾಗಲಿಲ್ಲ. ಸಹಕಾರಿ ಸಕ್ಕರೆ ಕಾರ್ಖಾನೆಯು ಗುತ್ತಿಗೆದಾರರಿಂದ ಮೊತ್ತವನ್ನು ವಸೂಲಿ ಮಾಡಲು ಯಾವುದೇ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಮುಂದುವರೆದು, ಆಯುಕ್ತರವರಿಗೆ ವಿಷಯವನ್ನು ತಿಳಿಸಲಾಗಿದ್ದರೂ, ಯಾವುದೇ ಕ್ರಮವನ್ನೂ ತೆಗೆದುಕೊಂಡಿರಲಿಲ್ಲ.
- ❖ ಗುತ್ತಿಗೆ ಬಾಡಿಗೆಗಳನ್ನು 193ರಿಂದ 896 ದಿನಗಳವರೆಗಿನ ವಿಳಂಬವಾಗಿ ಪಾವತಿಸಲಾಗಿದ್ದ ಮತ್ತು ಮಾರ್ಚ್ 2014ರಲ್ಲಿದ್ದಂತೆ (ವಾರ್ಷಿಕ ಗುತ್ತಿಗೆ ಬಾಡಿಗೆಯ ಪಾವತಿಗೆ ವಾಯಿದೆಯ ದಿನವು ಅರೆಯುವಿಕೆ ಪ್ರಾರಂಭವಾಗುವ ಒಂದು ತಿಂಗಳ ಮೊದಲು ಎಂದಿತ್ತು) ₹ 2.25 ಕೋಟಿ ಬಾಡಿಗೆ ಬಾಕಿಯ (ನಗದಾಗದ ಚೆಕ್ ಮೊತ್ತ ಸೇರಿ) ಹೊರತಾಗಿಯೂ, ಗುತ್ತಿಗೆ ಒಪ್ಪಂದದಲ್ಲಿ ಒಪ್ಪಂದ ಕೊನೆಗಾಣಿಸುವುದನ್ನು ಹೊರತುಪಡಿಸಿ ದಂಡವನ್ನು ವಿಧಿಸುವುದಕ್ಕೆ ಅವಕಾಶವಿರಲಿಲ್ಲವಾದ್ದರಿಂದ, ಯಾವುದೇ ಕ್ರಮವನ್ನೂ ತೆಗೆದುಕೊಳ್ಳಲಾಗಲಿಲ್ಲ.
- ❖ ಗುತ್ತಿಗೆದಾರರು ಗುತ್ತಿಗೆ ಒಡಂಬಡಿಕೆಯ ಷರತ್ತುಗಳಲ್ಲಿ ಅಗತ್ಯವಿದ್ದಂತೆ, ಕಬ್ಬು ಅರೆಯುವ ಸಾಮರ್ಥ್ಯವನ್ನು ಅಕ್ಟೋಬರ್ 2012ಕ್ಕೆ ಮೊದಲು ಹೆಚ್ಚಳಗೊಳಿಸಲಿಲ್ಲ.

### **3.1.2.3 *ಸಹಕಾರಿ ಸಕ್ಕರೆ ಕಾರ್ಖಾನೆ ಭೂಮಿಯ ಒತ್ತುವರಿ***

ಆಳಂದ್ ಸಹಕಾರಿ ಸಕ್ಕರೆ ಕಾರ್ಖಾನೆಗೆ ಸೇರಿದ್ದ 133 ಎಕರೆ ಹಾಗೂ 20 ಗುಂಟೆ ಅಳತೆಯ ಭೂಮಿಗೆ ಪ್ರತಿಯಾಗಿ ಗುತ್ತಿಗೆದಾರರಿಗೆ ಮಾರ್ಚ್ 2010ರಲ್ಲಿ ವಹಿಸಿದ್ದ ಪ್ರದೇಶವು 7 ಎಕರೆ ಹಾಗೂ 30 ಗುಂಟೆ ಕಡಿಮೆ ಇದ್ದಿತು. ತತ್ಪರಿಣಾಮವಾಗಿ ಗುತ್ತಿಗೆದಾರರು, ಗುತ್ತಿಗೆ ಒಪ್ಪಂದದ ಷರತ್ತುಗಳ ಪ್ರಕಾರ ಬಟ್ಟಿಗೃಹವನ್ನು ಸ್ಥಾಪಿಸುವಲ್ಲಿ ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದರು.

ಭೂಮಿಯ ಒತ್ತುವರಿಯಾಗಿದ್ದಿತಾದರೂ (7 ಎಕರೆ, 30 ಗುಂಟೆ), ಒತ್ತುವರಿಯನ್ನು ತೆರವುಗೊಳಿಸಲು ಹಾಗೂ ಅದನ್ನು ಗುತ್ತಿಗೆದಾರರಿಗೆ ವಹಿಸಿಕೊಡಲು ನಾಲ್ಕು ವರ್ಷಗಳು ಕಳೆದನಂತರವೂ ಆಯುಕ್ತರು ಯಾವುದೇ ಪರಿಣಾಮಕಾರಿಯಾದ ಕ್ರಮವನ್ನು ತೆಗೆದುಕೊಂಡಿರಲಿಲ್ಲ ಎನ್ನುವುದನ್ನು ಗಮನಿಸಲಾಯಿತು.

ಈ ವಿಷಯವನ್ನು ತೋರಿಸಿದಾಗ, ಕಾರ್ಖಾನೆ ಪ್ರದೇಶದ 7 ಎಕರೆ ಮತ್ತು 10 ಗುಂಟೆ ಪ್ರದೇಶವನ್ನು ತೆರವುಗೊಳಿಸುವುದಕ್ಕಾಗಿ ವಿಷಯವನ್ನು ಕಲ್ಬುರ್ಗಿಯ ಜಿಲ್ಲಾಧಿಕಾರಿಯವರಿಗೆ ಸೂಚಿಸಲಾಗಿದೆಯೆಂದು ಆಯುಕ್ತರು ಉತ್ತರಿಸಿದರು (ಆಗಸ್ಟ್ 2014). ಆದಾಗ್ಯೂ, ಈ ನಿಟ್ಟಿನಲ್ಲಿ ಮಾಡಲಾಗಿರುವ ಪತ್ರ ವ್ಯವಹಾರಗಳನ್ನು ಲೆಕ್ಕಪರಿಶೋಧನೆಗೆ ಲಭ್ಯಗೊಳಿಸಲಿಲ್ಲ. ಉಳಿದ 20 ಗುಂಟೆ ಭೂಮಿಯ ಬಗ್ಗೆಯೂ ವಿವರಗಳು ದಾಖಲೆಗಳಿಂದ ಕಂಡುಬರುತ್ತಿರಲಿಲ್ಲ.

### **3.1.2.4 *ಸಹಕಾರಿ ಸಕ್ಕರೆ ಕಾರ್ಖಾನೆಗಳು ಕಾರ್ಯನಿರ್ವಹಿಸದೇ ಇದ್ದುದು***

ಆಯುಕ್ತರ ಶಿಫಾರಸುಗಳ (ಏಪ್ರಿಲ್ 2006 ಮತ್ತು ನವೆಂಬರ್ 2006ರ ನಡುವೆ) ಮೇರೆಗೆ, ಕಾರ್ಯನಿರ್ವಹಿಸದೇ ಇದ್ದ ಮೂರು[29] ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಗುತ್ತಿಗೆಗೆ ನೀಡಲು ಸರ್ಕಾರವು ಅನುಮೋದನೆ ನೀಡಿತು (ಜುಲೈ 2006 ಹಾಗೂ ನವೆಂಬರ್ 2006ರ ನಡುವೆ). ಆದಾಗ್ಯೂ, ಇವುಗಳಲ್ಲಿ ಎರಡು ಸಹಕಾರಿ ಸಕ್ಕರೆ ಕಾರ್ಖಾನೆಗಳು, ಗುತ್ತಿಗೆ ಒಪ್ಪಂದವು ಕೊನೆಯಾದ ಕಾರಣ ಕಾರ್ಯರಹಿತವಾಗಿಯೇ ಮುಂದುವರೆದಿದ್ದವು. ಮೂರನೆಯ ಸಹಕಾರಿ ಸಕ್ಕರೆ ಕಾರ್ಖಾನೆಯು, ಸಹಕಾರಿ ಸಕ್ಕರೆ ಕಾರ್ಖಾನೆ ಹಾಗೂ ಗುತ್ತಿಗೆದಾರರ ನಡುವಿನ ವಿವಾದವು ನ್ಯಾಯಾಲಯದ ಮುಂದೆ ಬಾಕಿ ಇದ್ದುದರಿಂದ ಕಾರ್ಯರಹಿತವಾಗಿಯೇ ಮುಂದುವರೆದಿದ್ದಿತು.

[29] ದಕ್ಷಿಣ ಕನ್ನಡ, ಭದ್ರಾ, ಶ್ರೀರಾಮ

**ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ**

ಮೀಸಲು ಪ್ರದೇಶದಲ್ಲಿ ಕಬ್ಬು ಲಭ್ಯವಿರದಿದ್ದ ಕಾರಣ ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ವಿಲೇವಾರಿ ಮಾಡುವಂತೆ ಹಣಕಾಸು ಇಲಾಖೆಯು ಸಲಹೆ ನೀಡಿದ್ದಿತು (ಅಕ್ಟೋಬರ್ 2006). ಸಲಹೆಯನ್ನು ಉಪೇಕ್ಷಿಸಿ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ರಮೀ ಶುಗರ್ಸ್ ಅಂಡ್ ಇನ್‌ಫ್ರಾಸ್ಟ್ರಕ್ಚರ್ಸ್ ಪ್ರೈವೇಟ್ ಲಿಮಿಟೆಡ್‌ಗೆ, ₹ 31.68 ಕೋಟಿ ಗುತ್ತಿಗೆ ಬಾಡಿಗೆ ಮೊತ್ತವನ್ನು ನಿರ್ದಿಷ್ಟ ದರಗಳಲ್ಲಿ ವಾರ್ಷಿಕ ಕಂತುಗಳಲ್ಲಿ ವಸೂಲಾತಿ ಮಾಡುವ ರೀತಿಯಲ್ಲಿ, 30 ವರ್ಷಗಳಿಗೆ ಗುತ್ತಿಗೆಗೆ ನೀಡಲಾಯಿತು (ಏಪ್ರಿಲ್ 2008). ಗುತ್ತಿಗೆದಾರರು ಪಾವತಿಸಿದ್ದ ₹ 1.50 ಕೋಟಿ ಮುಂಗಡ ಹಣ ಠೇವಣಿಯನ್ನು ಭದ್ರತಾ ಠೇವಣಿಗೆ ಹೊಂದಾಣಿಕೆ ಮಾಡಿಕೊಳ್ಳಲಾಯಿತು. ಕಬ್ಬು ಲಭ್ಯವಿರದಿದ್ದುದರಿಂದ ಗುತ್ತಿಗೆದಾರರು ಉತ್ಪಾದನೆಯನ್ನು ಪ್ರಾರಂಭಿಸಲಾಗಲಿಲ್ಲ ಹಾಗೂ ಗುತ್ತಿಗೆಯನ್ನು ಕೊನೆಗಾಣಿಸಲು ಕೋರಿದರು. ಭದ್ರತಾ ಠೇವಣಿಯ ಮೇಲೆ ₹ 60.75 ಲಕ್ಷ ಮೊತ್ತದಷ್ಟು ಬಡ್ಡಿ ಹಾಗೂ ಯೋಜನಾ ಅಭಿವೃದ್ಧಿಗಾಗಿ ಭರಿಸಲಾದ ವೆಚ್ಚ ₹ 24.20 ಲಕ್ಷವನ್ನು ಗುತ್ತಿಗೆದಾರರಿಗೆ ಪಾವತಿಸುವಂತೆ ಮಧ್ಯಸ್ಥಿಕೆ ನ್ಯಾಯಾಧೀಕರಣವು ಮಾಡಿದ್ದ ಆದೇಶವನ್ನು (ಸೆಪ್ಟಂಬರ್ 2012) ಪ್ರಶ್ನಿಸಿ ಸಹಕಾರಿ ಸಕ್ಕರೆ ಕಾರ್ಖಾನೆಯು ನಗರ ಸಿವಿಲ್ ನ್ಯಾಯಾಲಯದಲ್ಲಿ ಒಂದು ಪ್ರಕರಣವನ್ನು ದಾಖಲಿಸಿದ್ದಿತು (ನವೆಂಬರ್ 2012). ಅದೇ ವೇಳೆಯಲ್ಲಿ, ಸಹಕಾರಿ ಸಕ್ಕರೆ ಕಾರ್ಖಾನೆಯ ಬಡ್ಡಿ ಪಾವತಿಯ ಬಾಧ್ಯತೆಯು ₹ 14.60 ಕೋಟಿಯಿಂದ (ಮಾರ್ಚ್ 2007) ₹ 33.16 ಕೋಟಿಗೆ ಹೆಚ್ಚಳಗೊಂಡಿತು (ಮಾರ್ಚ್ 2014).

**ಶ್ರೀರಾಮ ಸಹಕಾರಿ ಸಕ್ಕರೆ ಕಾರ್ಖಾನೆ**

ಶ್ರೀರಾಮ ಸಹಕಾರಿ ಸಕ್ಕರೆ ಕಾರ್ಖಾನೆಯು ಮೆ. ಅಂಬಿಕಾ ಶುಗರ್ಸ್‌ಗೆ 2006–07ರ ಕಬ್ಬು ಅರೆಯುವ ಕಾಲದಿಂದ 22 ವರ್ಷಗಳಿಗೆ ಗುತ್ತಿಗೆಗೆ ನೀಡಲ್ಪಟ್ಟಿತು (ಆಗಸ್ಟ್ 2006). ಗುತ್ತಿಗೆದಾರರು ಕಾರ್ಯಾಚರಣೆಯನ್ನು 2011–12ರವರೆಗೂ ಮುಂದುವರೆಸಿದರು, ಆದರೆ ಒಪ್ಪಂದದಲ್ಲಿ ನಿರ್ದಿಷ್ಟಪಡಿಸಿದ್ದಂತೆ ಸ್ಥಾವರದ ವಿಸ್ತರಣೆ ಹಾಗೂ ಸಹ–ವಿದ್ಯುತ್ ಉತ್ಪಾದನಾ ಘಟಕವನ್ನು ಸ್ಥಾಪಿಸುವಲ್ಲಿ ವಿಫಲರಾದರು. ಅಂತಿಮವಾಗಿ, ಗುತ್ತಿಗೆದಾರರ ಕೋರಿಕೆಯಂತೆ ಗುತ್ತಿಗೆಯನ್ನು, ಕಬ್ಬಿನ ಸರಬರಾಜು ಇಳಿಮುಖಗೊಂಡಿದ್ದರ ಕಾರಣದ ಮೇಲೆ ಕೊನೆಗೊಳಿಸಲಾಯಿತು (ಜುಲೈ 2012). ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಗುತ್ತಿಗೆಗೆ ನೀಡುವ ಪ್ರಯತ್ನವು ಯಶಸ್ವಿಯಾಗಲಿಲ್ಲ ಹಾಗೂ ಅದರ ಸಮಾಪನವನ್ನು ಪರಿಗಣಿಸಲಾಗುವುದು ಎಂದು ಆಯುಕ್ತರು ಉತ್ತರಿಸಿದರು (ಆಗಸ್ಟ್ 2014).

**ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ**

ಸಕ್ಕರೆ/ಸಂಬಂಧಿತ ಕೈಗಾರಿಕೆಯಲ್ಲಿ ಮೂರು ವರ್ಷಗಳ ಅನುಭವವಿರುವ ವ್ಯಕ್ತಿ/ಸಂಸ್ಥೆಗೆ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಗುತ್ತಿಗೆಗೆ ಕೊಡುವುದನ್ನು ನಿರ್ದಿಷ್ಟಪಡಿಸಿದ್ದ ಟೆಂಡರು ಷರತ್ತುಗಳನ್ನು ಉಲ್ಲಂಘಿಸಿ, ಕೇವಲ ನಿರ್ಮಾಣ ಕೈಗಾರಿಕೆಯಲ್ಲಿ ಅನುಭವವಿದ್ದಂತಹ ಹಾಗೂ ಸಕ್ಕರೆ/ಸಂಬಂಧಿತ ಕೈಗಾರಿಕೆಯಲ್ಲಿ ಅನುಭವವನ್ನು ಹೊಂದಿರದ ಮೆ. ಗ್ಯಾನ್‌ಬ ಡೆವಲಪರ್ಸ್‌ಗೆ ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಗುತ್ತಿಗೆಗೆ ನೀಡಲಾಯಿತು (ಜೂನ್ 2010). ಗುತ್ತಿಗೆದಾರರು, ಗುತ್ತಿಗೆ ಒಡಂಬಡಿಕೆಯ ಪ್ರಕಾರ ಪಾವತಿಯನ್ನು ಮಾಡದೆಯೇ 2010–11ರ ಕಬ್ಬು ಅರೆಯುವ ಕಾಲದ ನಂತರ ಕಬ್ಬು ಅರೆಯುವುದನ್ನು ನಿಲ್ಲಿಸಿದರು. ಗುತ್ತಿಗೆ ಒಪ್ಪಂದದ 21 ಮತ್ತು 22ನೇ ಷರತ್ತಿನ ಪ್ರಕಾರ, ವಾರ್ಷಿಕ ಗುತ್ತಿಗೆ ಬಾಡಿಗೆ (ಗುತ್ತಿಗೆ ಅವಧಿಗೆ ₹ 15.33 ಲಕ್ಷದಿಂದ ₹ 26.39 ಲಕ್ಷದವರೆಗೆ ಏರಿಳಿತವಿದ್ದ) ಪಾವತಿಯ ಜೊತೆಗೆ ಕಬ್ಬು ಅರೆಯುವ ದಿನಾಂಕದಿಂದ ಒಂದು ತಿಂಗಳು ಮುಂಚಿತವಾಗಿ ₹ 26 ಕೋಟಿ ಮೊತ್ತದಷ್ಟು ಮುಂಗಡ ಬಾಡಿಗೆ ಮೊತ್ತವನ್ನು ಪಾವತಿಸುವ ಅಗತ್ಯವಿದ್ದಿತು. ಆದಾಗ್ಯೂ, ₹ 26.15 ಕೋಟಿ ಮೊತ್ತದಷ್ಟು ಮುಂಗಡ ಹಣ ಹಾಗೂ ಮುಂಗಡ ಗುತ್ತಿಗೆ ಬಾಡಿಗೆ ಮೊತ್ತವನ್ನು ವಸೂಲಾತಿ ಮಾಡದೆಯೇ 22 ಅಕ್ಟೋಬರ್ 2010ರಿಂದ ಕಬ್ಬನ್ನು ಅರೆಯಲು ಗುತ್ತಿಗೆದಾರರಿಗೆ ಆಯುಕ್ತರು ಅನುಮತಿ ನೀಡಿದ್ದರು.

ಗುತ್ತಿಗೆದಾರರು ಕಾರ್ಖಾನೆಯನ್ನು ಒಂದು ಅವಧಿಗೆ (2010–11) ನಡೆಸಿದರು, ಆದರೆ ಸಹಕಾರಿ ಸಕ್ಕರೆ ಕಾರ್ಖಾನೆಗೆ ಪಾವತಿಸಲು ಬಾಕಿ ಇದ್ದ ಮೊತ್ತವನ್ನು ಪಾವತಿಸಲಿಲ್ಲ. ಆಯುಕ್ತರು ಗುತ್ತಿಗೆ ಒಪ್ಪಂದವನ್ನು ಸೆಪ್ಟಂಬರ್ 2011ರಲ್ಲಿ ಮುಕ್ತಾಯಗೊಳಿಸಿದರು. ಗುತ್ತಿಗೆದಾರರಿಂದ ವಸೂಲಾಗಬೇಕಾಗಿದ್ದ ಸಂಚಿತ ಮೊತ್ತವು ₹ 26.30 ಕೋಟಿ ಆಗಿದ್ದಿತು. ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಗುತ್ತಿಗೆಗೆ ನೀಡುವ ಪ್ರಯತ್ನವು ವಿಫಲವಾಗಿದ್ದರಿಂದ, ತೋಟಗಾರಿಕೆ ಮತ್ತು ಸಕ್ಕರೆ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಒಂದು ಸಭೆಯಲ್ಲಿ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಸಮಾಪನಗೊಳಿಸಲು ಹಾಗೂ ಸಕ್ಕರೆ ಕಾರ್ಖಾನೆಯನ್ನು ಯಥಾ ಸ್ಥಿತಿಯಲ್ಲಿ ಮಾರಾಟ ಮಾಡಲು ತೀರ್ಮಾನಿಸಲಾಯಿತು (ನವೆಂಬರ್ 2011). ಆದಾಗ್ಯೂ, ಆಯುಕ್ತರವರು ಅಗತ್ಯ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಇನ್ನೂ ಸಲ್ಲಿಸಿರಲಿಲ್ಲ. ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮದ ಪರಿಚ್ಛೇದ 72ರ ಅಡಿಯಲ್ಲಿ ಆದೇಶವನ್ನು ನೀಡಲು ಸಹಕಾರಿ ಸಕ್ಕರೆ ಕಾರ್ಖಾನೆಯ ಮಂಡಳಿಯಿಂದ ಒಂದು ನಿರ್ಣಯವನ್ನು ತೆಗೆದುಕೊಳ್ಳುವ ಅಗತ್ಯವಿದೆಯೆಂದು ಉತ್ತರಿಸಲಾಯಿತು (ಆಗಸ್ಟ್ 2014). ಉತ್ತರವನ್ನು ಒಪ್ಪಲಾಗಲಿಲ್ಲ ಏಕೆಂದರೆ 'ರಿಜಿಸ್ಟ್ರಾರ್‌ರವರು (ಆಯುಕ್ತರು) ತಮ್ಮದೇ ಆದ ಗೊತ್ತುವಳಿಯ ಮೂಲಕ ಚಟುವಟಿಕೆಯನ್ನು ಪ್ರಾರಂಭಿಸದೇ ಇರುವ ಅಥವಾ ಕಾರ್ಯಚಟುವಟಿಕೆಯನ್ನು ಸ್ಥಗಿತಗೊಳಿಸಿರುವ ಒಂದು ಸಹಕಾರಿ ಸಂಘವನ್ನು ವಿಸರ್ಜಿಸುವಂತೆ ನಿರ್ದೇಶಿಸಿ ಒಂದು ಆದೇಶವನ್ನು ಮಾಡಬಹುದು' ಎಂದು ಅಧಿನಿಯಮದ ಪರಿಚ್ಛೇದ 72(2)ರಡಿಯಲ್ಲಿ ಆಯುಕ್ತರವರಿಗೆ ಅಧಿಕಾರವನ್ನು ನೀಡಲಾಗಿದೆ.

### *3.1.2.5 ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಒಂದು ಸರ್ಕಾರಿ ಕಂಪನಿಗೆ ವಹಿಸಿದ್ದು*

ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಯು ಜನವರಿ 2006ರಿಂದ ಏಳು ವರ್ಷಗಳಿಗೆ ಮೆ. ಕೊಠಾರಿ ಶುಗರ್ಸ್‌ಗೆ ಒಟ್ಟು ₹ 80.10 ಕೋಟಿ ಗುತ್ತಿಗೆ ಬಾಡಿಗೆಗೆ ನೀಡಲ್ಪಟ್ಟಿತು. ಗುತ್ತಿಗೆದಾರರು ದೈನಂದಿನ ಕಬ್ಬು ಅರೆಯುವ ಸಾಮರ್ಥ್ಯವಾದ 3,500 ಟನ್ನಿಗಿಂತಲೂ ಬಹು ಕಡಿಮೆ ಪ್ರಮಾಣದಲ್ಲಿ ಅರೆಯುತ್ತಿದ್ದರಾದರೂ ಗುತ್ತಿಗೆಯನ್ನು ಮುಂದುವರೆಸಿಕೊಂಡು ಹೋಗಲಾಗಿದ್ದಿತು ಎನ್ನುವುದನ್ನು ಗಮನಿಸಲಾಯಿತು. ಮುಂದುವರೆದು, ಗುತ್ತಿಗೆದಾರರು ₹ 127.47 ಕೋಟಿ ಒಟ್ಟಾರೆ ಗುತ್ತಿಗೆ ಮೊತ್ತಕ್ಕೆ (₹ 80.10 ಕೋಟಿ ಸೇರಿದಂತೆ) ಮತ್ತೊಂದು 18 ವರ್ಷಗಳ ಗುತ್ತಿಗೆ ವಿಸ್ತರಣೆಗಾಗಿ ಕೋರಿದರಾದರೂ, ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮೇನೇಜ್‌ಮೆಂಟ್ ಸಲ್ಲಿಸಿದ್ದ (ಜುಲೈ 2007) ಮೌಲ್ಯಮಾಪನ ವರದಿಯ ಆಧಾರದ ಮೇರೆಗೆ ಕರ್ನಾಟಕ ಸರ್ಕಾರವು ಗುತ್ತಿಗೆದಾರರ ಕೋರಿಕೆಯನ್ನು ತಳ್ಳಿಹಾಕಿತು. ನಂತರ, ಗುತ್ತಿಗೆದಾರರ ಕೋರಿಕೆಯ ಮೇರೆಗೆ (ಫೆಬ್ರವರಿ 2010), ಸರ್ಕಾರವು ಗುತ್ತಿಗೆ ಒಡಂಬಡಿಕೆಯನ್ನು ಕೊನೆಗೊಳಿಸಿತು (ಮಾರ್ಚ್ 2010). ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಒಂದು ಸಭೆಯಲ್ಲಿ (ಮೇ 2010) ತೆಗೆದುಕೊಳ್ಳಲಾದ ನಿರ್ಣಯದ ಪ್ರಕಾರ ಸಹಕಾರಿ ಸಕ್ಕರೆ ಕಾರ್ಖಾನೆಯ 30 ವರ್ಷಗಳ ಗುತ್ತಿಗೆಗಾಗಿ ಪುನಃ ಟೆಂಡರನ್ನು ಹೊರಡಿಸಲಾದರೂ (ಮಾರ್ಚ್ 2010), ಈ ಅಧಿಸೂಚನೆಯನ್ನು ಹಿಂಪಡೆದುಕೊಂಡು ಸಹಕಾರಿ ಸಕ್ಕರೆ ಕಾರ್ಖಾನೆಯ ಆಡಳಿತ ಮತ್ತು ನಿರ್ವಹಣೆಯನ್ನು ಮಂಡ್ಯದ ಮೆ. ಮೈಸೂರು ಶುಗರ್ ಕಂಪನಿ ಲಿಮಿಟೆಡ್‌ಗೆ (ಮೈಶುಗರ್) ವಹಿಸಲು ನಿಶ್ಚಯಿಸಲಾಯಿತು. ಅದರಂತೆಯೇ, ಸಹಕಾರಿ ಸಕ್ಕರೆ ಕಾರ್ಖಾನೆಯ ಆಡಳಿತ ಮತ್ತು ನಿರ್ವಹಣೆಯನ್ನು ಮೈಶುಗರ್‌ಗೆ ಮೂರು ವರ್ಷಗಳಿಗೆ ವಹಿಸಲಾಗಿದ್ದಿತು (ಜೂನ್ 2010). ಸಹಕಾರಿ ಸಕ್ಕರೆ ಕಾರ್ಖಾನೆಯು ಜೂನ್ 2013ರಿಂದ ಸ್ವಂತ ಬಲದ ಮೇಲೆಯೇ ನಿರ್ವಹಿಸಿಕೊಂಡು ಹೋಗುತ್ತಿದೆ.

ಸಹಕಾರಿ ಸಕ್ಕರೆ ಕಾರ್ಖಾನೆಯ ಹಣಕಾಸಿನ ಸ್ಥಿತಿಯನ್ನು ಸುಧಾರಿಸಲು ಸರ್ಕಾರವು, ₹ 35 ಕೋಟಿ[30] ದುಡಿಯುವ ಬಂಡವಾಳ ಸಾಲವನ್ನು ಮತ್ತು ಖರೀದಿಸಿದ ಕಬ್ಬಿನ ಪಾವತಿಗಾಗಿ ₹ 10 ಕೋಟಿಯನ್ನು

[30] ಜೂನ್‌ನಿಂದ ಅಕ್ಟೋಬರ್ 2010 – ₹ 15 ಕೋಟಿ, ಜುಲೈ 2011 – ₹ 10 ಕೋಟಿ ಹಾಗೂ ಸೆಪ್ಟೆಂಬರ್ 2013 – ₹ 10 ಕೋಟಿ

ಒದಗಿಸಿತು (ಜೂನ್ 2011). ಸರ್ಕಾರವು ಒಂದು ಬಾರಿಯ ಇತ್ಯರ್ಥದಂತೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳಿಗೆ ₹ 14.35 ಕೋಟಿಯನ್ನು (ಮಾರ್ಚ್ 2012) ಹಾಗೂ ಅಪೆಕ್ಸ್ ಬ್ಯಾಂಕಿಗೆ ₹ 6.34 ಕೋಟಿಯನ್ನು (ಮಾರ್ಚ್ 2011) ಪಾವತಿಸಿತು.

ಮಾರ್ಚ್ 2014ರಲ್ಲಿದ್ದಂತೆ, ಸಹಕಾರಿ ಸಕ್ಕರೆ ಕಾರ್ಖಾನೆಯಿಂದ ಸರ್ಕಾರಕ್ಕೆ ಬರಬೇಕಾದ ಬಾಕಿಗಳ ಒಟ್ಟು ಮೊತ್ತವು ₹ 183.78 ಕೋಟಿ (ಕರ್ನಾಟಕ ಸರ್ಕಾರ ₹ 162.90 ಕೋಟಿ; ಕೇಂದ್ರ ಸರ್ಕಾರ ₹ 20.88 ಕೋಟಿ) ಆಗಿತ್ತು. ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಸರ್ಕಾರಿ ಕಂಪನಿಗೆ ಆಡಳಿತ ಮತ್ತು ನಿರ್ವಹಣೆಯ ಆಧಾರದ ಮೇಲೆ ಮಾತ್ರ ವರ್ಗಾಯಿಸಿದ್ದುದು ಸರ್ಕಾರದ ಜವಾಬ್ದಾರಿಯನ್ನು ಹೆಚ್ಚಿಸಿತು.

### 3.1.3 ಸಹಕಾರಿ ಸಕ್ಕರೆ ಕಾರ್ಖಾನೆಗಳ ಸಮಾಪನೆ

ಸಹಕಾರಿ ಸಕ್ಕರೆ ಕಾರ್ಖಾನೆಯ ಕಾರ್ಯಾಚರಣೆಗಳು ಸ್ಥಗಿತಗೊಂಡಲ್ಲಿ ಅದನ್ನು ಸಮಾಪನಗೊಳಿಸುವ ಆದೇಶ ನೀಡಲು ಅಧಿನಿಯಮದ ಪರಿಚ್ಛೇದ 72 ಆಯುಕ್ತರಿಗೆ ಅಧಿಕಾರ ನೀಡಿದೆ. ಸಹಕಾರಿ ಸಕ್ಕರೆ ಕಾರ್ಖಾನೆಗಳ ರಿಜಿಸ್ಟ್ರಾರ್‌ರವರ ಅಸ್ತಿತ್ವದಲ್ಲಿದ್ದ ನಿರ್ದೇಶನಗಳ (ಮಾರ್ಚ್ 1992) ಪ್ರಕಾರ, ಸಮಾಪನೆ ಪ್ರಕ್ರಿಯೆಯು ಆದೇಶದ ದಿನಾಂಕದಿಂದ ಎರಡು ವರ್ಷಗಳ ಒಳಗೆ ತಪ್ಪದೇ ಪೂರ್ಣವಾಗತಕ್ಕದ್ದು. ಪರಿಚ್ಛೇದ 72ರ ಅಡಿಯಲ್ಲಿ, 1986 ಹಾಗೂ 2007ರ ನಡುವೆ ಏಳು[31] ಸಹಕಾರಿ ಸಕ್ಕರೆ ಕಾರ್ಖಾನೆಗಳ ಎದುರಾಗಿ ಆದೇಶಿಸಲಾಗಿದ್ದ ಸಮಾಪನ ಪ್ರಕ್ರಿಯೆಗಳು ಇನ್ನೂ ಪೂರ್ಣಗೊಂಡಿರಲಿಲ್ಲ (ಮೇ 2014) ಎನ್ನುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಕರ್ನಾಟಕ ಸಹಕಾರಿ ಸಂಘಗಳ ನಿಯಮಗಳು 1960ರ ನಿಯಮ 33(ಜೆ) ಅಡಿಯಲ್ಲಿನ ಅನುವುಗಳ ಪ್ರಕಾರ ಮಹದೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಹೊರತುಪಡಿಸಿ, ಉಳಿದವುಗಳಿಗೆ ಸಂಬಂಧಿಸಿದಂತೆ ಆಯುಕ್ತರು ತ್ರೈಮಾಸಿಕ ಪ್ರಗತಿಯ ವರದಿಗಳನ್ನು ಸಹ ಪಡೆದಿರಲಿಲ್ಲವಾದ್ದರಿಂದ, ಆಯುಕ್ತರ ಮೇಲ್ವಿಚಾರಣೆಯಲ್ಲಿನ ಕೊರತೆಯು, ಸಮಾಪನ ಪ್ರಕ್ರಿಯೆಯು ಅನುಚಿತವಾಗಿ ವಿಳಂಬಗೊಳ್ಳುವಲ್ಲಿ ಪರಿಣಮಿಸಿತು. ಕರ್ನಾಟಕ ಸಹಕಾರಿ ಸಂಘಗಳ ನಿಯಮ 33ರ ಪ್ರಕಾರ ಸಮಾಪಕರ ಲೆಕ್ಕಪರಿಶೋಧನೆಯಾದ ಲೆಕ್ಕಪತ್ರಗಳ ತ:ಖ್ತೆಗಳನ್ನೂ ಸಹ ಯಾವುದೇ ಪ್ರಕರಣಗಳಲ್ಲಿಯೂ ಪಡೆದುಕೊಂಡಿರಲಿಲ್ಲ. ನಾಲ್ಕು[32] ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಸಂಬಂಧಿಸಿದ ಸಮಾಪನ ವೆಚ್ಚವು ಮಾರ್ಚ್ 2014ರಲ್ಲಿದ್ದಂತೆ ₹ 25.86 ಕೋಟಿ ಆಗಿದ್ದಿತು, ಇದನ್ನು ಸಹಕಾರಿ ಸಕ್ಕರೆ ಕಾರ್ಖಾನೆಗಳು ಭರಿಸಬೇಕಿದ್ದಿತು. ಸಮಾಪನದ ಮುಕ್ತಾಯದಲ್ಲಿನ ವಿಳಂಬಗಳು ಸಹಕಾರಿ ಸಕ್ಕರೆ ಕಾರ್ಖಾನೆಗಳ ಹಣಕಾಸಿನ ಹೊರೆಯನ್ನು ಅಧಿಕಗೊಳಿಸಿದವು. ಇದರ ಜೊತೆಗೆ, ನಾಲ್ಕು ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಸಂಬಂಧಿಸಿದ ಸರ್ಕಾರದ ಷೇರು ಬಂಡವಾಳ ₹ 2.31 ಕೋಟಿ ಹಾಗೂ ಬಾಕಿ ಇರುವ ಸಾಲ ₹ 6.31 ಕೋಟಿಯನ್ನು ಹೊಂದಾಣಿಕೆ ಮಾಡಿಕೊಳ್ಳಲಾಗಲಿಲ್ಲ.

#### *3.1.3.1 ಸಮಾಪನ ಆದೇಶವನ್ನು ರದ್ದುಗೊಳಿಸಲು ತೆಗೆದುಕೊಂಡ ವಿವೇಚನಾರಹಿತ ನಿರ್ಣಯ*

ಕಬ್ಬನ್ನು ಅರೆಯುವ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿದ (2002–03) ವಾಣಿವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆಯು ಆಗಸ್ಟ್ 2004ರಿಂದ ಸಮಾಪನೆಯಲ್ಲಿದ್ದಿತು. ಅಂದಿನ ಸಹಕಾರ ಮಂತ್ರಿಗಳಿಂದ ನಡೆಸಲಾದ ಒಂದು ಸಮೀಕ್ಷಾ ಸಭೆಯಲ್ಲಿ (ಜನವರಿ 2005), ಸಮಾಪನೆಯನ್ನು ಆಗಸ್ಟ್ 2005ರ ವೇಳೆಗೆ ಮುಗಿಸಲು ತೀರ್ಮಾನಿಸಲಾಯಿತು. ಆದಾಗ್ಯೂ, ಕಾಲಮಿತಿಗೆ ಬದ್ಧವಾಗಿರಲಿಲ್ಲ. ಅದರ ಬದಲಾಗಿ ಆಯುಕ್ತರು ಸರ್ಕಾರದ ಆದೇಶಗಳ ಪ್ರಕಾರ ಕಬ್ಬಿನ ಹೇರಳ ಲಭ್ಯತೆಯ ಕಾರಣವನ್ನು ಮುಂದಿಟ್ಟು ಸಮಾಪನ ಆದೇಶವನ್ನು ರದ್ದುಗೊಳಿಸಿದರು (ಸೆಪ್ಟಂಬರ್ 2007) ಮತ್ತು ಗುತ್ತಿಗೆಗೆ ನೀಡುವ ಮೂಲಕ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಪುನರಾರಂಭಿಸಲು ಕ್ರಮ ಕೈಗೊಳ್ಳಲಾಯಿತು.

---

[31] ಅರ್ಕಾವತಿ (ಮೇ 1988), ಮಲೆನಾಡು (ಅಕ್ಟೋಬರ್ 2005), ಗೌರಿಬಿದನೂರು (ಮಾರ್ಚ್ 1986), ಕಂಪ್ಲಿ (ಜುಲೈ 1995), ಬಸವೇಶ್ವರ (ಆಗಸ್ಟ್ 2007), ನರಗುಂದ (ಜನವರಿ 2004) ಹಾಗೂ ಮಹದೇಶ್ವರ (ಮಾರ್ಚ್ 1986)

[32] ಗೌರಿಬಿದನೂರು, ಅರ್ಕಾವತಿ, ಮಹದೇಶ್ವರ, ಕಂಪ್ಲಿ

ಅದೇ ವೇಳೆಯಲ್ಲಿ, ಸಹಕಾರಿ ಸಕ್ಕರೆ ಕಾರ್ಖಾನೆಗಳು ಬಳಸಿಕೊಂಡಿದ್ದ ಸಾಲಗಳ ಪ್ರತಿಯಾಗಿ ಸರ್ಕಾರವು ನೀಡಿದ್ದ ಖಾತರಿಗೆ ಹಣಕಾಸು ಸಂಸ್ಥೆಗಳು ಕೋರಿದ್ದರಿಂದ ಸರ್ಕಾರವು ಸಾಲಗಳ ಒಂದು ಬಾರಿಯ ಇತ್ಯರ್ಥದ ಕಡೆಗೆ ₹ 20.61 ಕೋಟಿಯನ್ನು[33] ಪಾವತಿಸಬೇಕಾಯಿತು (ನವೆಂಬರ್ 2012).

2007ರಿಂದ 2010ರವರೆಗೆ ಮೂರು ಪ್ರಯತ್ನಗಳನ್ನು ಮಾಡಿದ್ದಾಗ್ಯೂ, ಮೀಸಲು ಪ್ರದೇಶದಲ್ಲಿ ಕಬ್ಬಿನ ಅಭಾವದ ಕಾರಣ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಗುತ್ತಿಗೆಗೆ ನೀಡುವಲ್ಲಿ ಸರ್ಕಾರವು ವಿಫಲಗೊಂಡಿದ್ದಿತು. ತತ್ಪರಿಣಾಮವಾಗಿ, ಸಮಾಪನ ಆದೇಶವನ್ನು ಪುನ: ಸೆಪ್ಟಂಬರ್ 2013ರಲ್ಲಿ ಹೊರಡಿಸಲಾಯಿತು. ಸಮಾಪನ ಪ್ರಕ್ರಿಯೆಯನ್ನು ಇನ್ನೂ ಮುಗಿಯಬೇಕಿದೆ (ಅಕ್ಟೋಬರ್ 2014). ಸಹಕಾರಿ ಸಕ್ಕರೆ ಕಾರ್ಖಾನೆಯಿಂದ ಸರ್ಕಾರಕ್ಕೆ ಬರಬೇಕಿದ್ದ ಬಾಕಿಗಳು ಸಹ ₹ 8.32 ಕೋಟಿಯಿಂದ (ಸೆಪ್ಟಂಬರ್ 2004) ₹ 29.38 ಕೋಟಿಗೆ (ಮಾರ್ಚ್ 2014) ಏರಿತು.

ಕಬ್ಬು ಬೆಳೆಗಾರರ ಹಿತಾಸಕ್ತಿಯಿಂದ ಸಮಾಪನ ಆದೇಶವನ್ನು ಹಿಂಪಡೆಯಲಾಯಿತು ಎಂದು ಆಯುಕ್ತರು ಉತ್ತರಿಸಿದರು (ಆಗಸ್ಟ್ 2014). ಸಮಾಪನೆಯ ಪ್ರಾರಂಭಿಕ ಪ್ರಸ್ತಾವನೆಯು ಕಬ್ಬಿನ ಕೊರತೆಯ ಕಾರಣದಿಂದ ಆಗಿದ್ದಿತಾದ್ದರಿಂದ ಉತ್ತರವು ಒಪ್ಪುವಂತಿರಲಿಲ್ಲ.

### 3.1.3.2 *ಸಹಕಾರಿ ಸಕ್ಕರೆ ಕಾರ್ಖಾನೆಗಳಿಂದ ಕಾರ್ಯಾಚರಣೆಯು ಪ್ರಾರಂಭವಾಗದಿದ್ದುದು*

ಸಹಕಾರಿ ಸಕ್ಕರೆ ಕಾರ್ಖಾನೆಯು ಕಾರ್ಯಾಚರಣೆ ಪ್ರಾರಂಭಿಸದಿದ್ದಲ್ಲಿ, ಅದರ ಸಮಾಪನೆಗೆ ಆದೇಶಿಸಲು ಅಧಿನಿಯಮದ ಪರಿಚ್ಛೇದ 72 ಆಯುಕ್ತರಿಗೆ ಅಧಿಕಾರ ನೀಡಿದೆ. ಎರಡು ಸಹಕಾರಿ ಸಕ್ಕರೆ ಕಾರ್ಖಾನೆಗಳ ಸಂಬಂಧದಲ್ಲಿ ಪರಿಚ್ಛೇದ 72ರ ಅಡಿಯಲ್ಲಿ ಸೂಕ್ತ ಆದೇಶಗಳನ್ನು ನೀಡುವಲ್ಲಿನ ವಿಳಂಬವು, ಈ ಕೆಳಗೆ ಚರ್ಚಿಸಿರುವಂತೆ, ₹ 23.20 ಕೋಟಿ ಸರ್ಕಾರದ ನಿಧಿಯ ನಿಷ್ಫಲ ಹೂಡಿಕೆಯಾಗುವಲ್ಲಿ ಪರಿಣಮಿಸಿತು:

- ₹ 50.88 ಕೋಟಿ ಮೊತ್ತದ ಅನುಮೋದಿತ ಯೋಜನಾ ವೆಚ್ಚದೊಂದಿಗೆ ಸಂಗಂ ಸಹಕಾರಿ ಸಕ್ಕರೆ ಕಾರ್ಖಾನೆಯು ಜೂನ್ 1999ರಲ್ಲಿ ನೋಂದಣಿಯಾಯಿತು ಹಾಗೂ ₹ 15 ಕೋಟಿ ಸರ್ಕಾರದ ಷೇರು ಬಂಡವಾಳವು ನವೆಂಬರ್ 2000ದಲ್ಲಿ ಬಿಡುಗಡೆಯಾಯಿತು. ಸಹಕಾರಿ ಸಕ್ಕರೆ ಕಾರ್ಖಾನೆಯು ಹಣಕಾಸನ್ನು ಸಜ್ಜುಗೊಳಿಸಲು ವಿಫಲವಾಗಿದ್ದರಿಂದ, ಅದು ಕೇವಲ ಕಾಗದದ ಮೇಲೆ ಮಾತ್ರ ಕ್ರಿಯಾಶೀಲವಾಗಿ ಉಳಿಯಿತು (ಮಾರ್ಚ್ 2014). ₹ 102 ಕೋಟಿಯ ಪರಿಷ್ಕೃತ ಸವಿವರ ಯೋಜನಾ ವರದಿಗೆ ಸರ್ಕಾರವು ಅನುಮೋದನೆ ನೀಡಿದೆ (ಜನವರಿ 2013) ಹಾಗೂ ಕಬ್ಬು ಅರೆಯುವ ಕಾರ್ಯವನ್ನು ಫೆಬ್ರವರಿ 2015ರಿಂದ ಪ್ರಾರಂಭಿಸಲು ಯೋಜಿಸಲಾಗಿದೆ ಎಂದು ಆಯುಕ್ತರು ಉತ್ತರಿಸಿದರು (ಆಗಸ್ಟ್ 2014). ಆದಾಗ್ಯೂ, ಸರ್ಕಾರದ ಹೂಡಿಕೆ ₹ 15 ಕೋಟಿಯು 14 ವರ್ಷಗಳಿಗೂ ಮೀರಿ ನಿಷ್ಫಲವಾಗಿಯೇ ಉಳಿದಿದೆ.
- ಭೀಮಶಂಕರ ಸಹಕಾರಿ ಸಕ್ಕರೆ ಕಾರ್ಖಾನೆಯು ಏಪ್ರಿಲ್ 1993ರಲ್ಲಿ ನೋಂದಣಿಯಾಯಿತು. ಅನುಮೋದಿತ ಯೋಜನಾ ವೆಚ್ಚ ₹ 46.90 ಕೋಟಿಗೆ ಪ್ರತಿಯಾಗಿ ಸರ್ಕಾರದ ಷೇರು ಬಂಡವಾಳವಾದ ₹ 8.20 ಕೋಟಿಯು ಸಹಕಾರಿ ಸಕ್ಕರೆ ಕಾರ್ಖಾನೆಗೆ ಏಪ್ರಿಲ್ 1999ರಲ್ಲಿ ಬಿಡುಗಡೆಯಾಯಿತು. ಆದಾಗ್ಯೂ, ಯೋಜನಾ ವರದಿಯಲ್ಲಿ ಹೇಳಿದ್ದಂತೆ ಸಾಲ ಪಡೆಯಲು ವಿಫಲವಾದ ಕಾರಣ, ಅದು ಉತ್ಪಾದನೆಯನ್ನು ಪ್ರಾರಂಭಿಸಲಾಗಲಿಲ್ಲ. ಸಹಕಾರಿ ಸಕ್ಕರೆ ಕಾರ್ಖಾನೆ ಮಂಡಳಿಯ ನಿರ್ಣಯದ ಮೇರೆಗೆ, ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಒಂದು ಸಾರ್ವಜನಿಕ ಸೀಮಿತ ಹೊಣೆಗಾರಿಕೆಯ ಕಂಪನಿಯನ್ನಾಗಿ ಪರಿವರ್ತಿಸಲು ಸರ್ಕಾರವು ಅನುಮತಿಯನ್ನು ನೀಡಿತು (ಸೆಪ್ಟಂಬರ್ 2006). ಅದರಂತೆಯೇ, ಮೆ. ರಾಯಲ್ ಪೆರಲ್ ಶುಗರ್ಸ್ ಎಂಬ ಒಂದು ಸಾರ್ವಜನಿಕ ಸೀಮಿತ ಹೊಣೆಗಾರಿಕೆಯ ಕಂಪನಿಯನ್ನು ಈ ಉದ್ದೇಶಕ್ಕಾಗಿ ರಚಿಸಲಾಯಿತು (ಫೆಬ್ರವರಿ 2007). ಆದಾಗ್ಯೂ, ಆಯುಕ್ತರು ₹ 8.20 ಕೋಟಿ ಷೇರು ಬಂಡವಾಳವನ್ನು ಸರ್ಕಾರಕ್ಕೆ ಮರುಪಾವತಿಸಿದನಂತರ ಆಸ್ತಿ ಮತ್ತು ಜವಾಬ್ದಾರಿಯನ್ನು

[33] ಡಿಸಿಸಿ ಬ್ಯಾಂಕುಗಳಿಗೆ ₹ 14.40 ಕೋಟಿ ಹಾಗೂ ಅಪೆಕ್ಸ್ ಬ್ಯಾಂಕಿಗೆ ₹ 6.21 ಕೋಟಿ

ಮೆ. ರಾಯಲ್ ಪೆರಲ್ ಶುಗರ್ಸ್‌ಗೆ ವರ್ಗಾಯಿಸುವ ಒಂದು ದೋಷಯುಕ್ತ ಷರತ್ತಿನೊಂದಿಗೆ ಸಮಾಪನ ಆದೇಶವನ್ನು ನೀಡಿದರು (ಫೆಬ್ರವರಿ 2007). ಈ ಷರತ್ತು ಅಧಿನಿಯಮದ[34] ಪರಿಚ್ಛೇದ 73 ಮತ್ತು 74ನ್ನು ಉಲ್ಲಂಘಿಸಿದ್ದರಿಂದ, ಸರ್ಕಾರವು ನಂತರ ಅದನ್ನು ರದ್ದು ಮಾಡಿತು (ಡಿಸೆಂಬರ್ 2007). ಸರ್ಕಾರದ ಆದೇಶವನ್ನು ಮೆ. ರಾಯಲ್ ಪೆರಲ್ ಶುಗರ್ಸ್ ನ್ಯಾಯಾಲಯದಲ್ಲಿ ಪ್ರಶ್ನಿಸಿತು. ವಿಷಯವು ಭಾರತದ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿಯಿದೆ (ಅಕ್ಟೋಬರ್ 2014).

ದೋಷಯುಕ್ತ ಷರತ್ತಿನೊಂದಿಗೆ ನೀಡಲಾದ ಸಮಾಪನ ಆದೇಶದ ಜೊತೆಗೂಡಿದಂತೆ ಪರಿಚ್ಛೇದ 72ರ ಅಡಿಯಲ್ಲಿ ಕ್ರಮವನ್ನು ತೆಗೆದುಕೊಳ್ಳುವಲ್ಲಿನ ಅತಿಯಾದ ವಿಳಂಬವು ₹ 8.20 ಕೋಟಿ ಸರ್ಕಾರದ ಹೂಡಿಕೆಯನ್ನು 15 ವರ್ಷಗಳಿಂದಲೂ ನಿಷ್ಫಲ ಹೂಡಿಕೆಯನ್ನಾಗಿ ಮಾಡಿದೆ.

## 3.1.4 ಕ್ಷೀಣವಾಗುತ್ತಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳ ಹಣಕಾಸಿನ ಸ್ಥಿತಿ – ಸರ್ಕಾರದ ಮೇಲೆ ಒಂದು ಆರ್ಥಿಕ ಹೊರೆ

ಪುನಃ ಸುವ್ಯವಸ್ಥೆಗೆ ತರುವ ಯೋಜನೆಯು, ಗುರುತರವಾದ ಹಣಕಾಸಿನ ಬಿಕ್ಕಟ್ಟು ಎದುರಿಸುತ್ತಿದ್ದ ಸಹಕಾರಿ ಸಕ್ಕರೆ ಕಾರ್ಖಾನೆಗಳು ಚೇತರಿಸಿಕೊಳ್ಳುವುದಕ್ಕಾಗಿದ್ದ ಒಂದು ರಚನಾತ್ಮಕ ಮಾರ್ಗವಾಗಿದ್ದಿತು. ಆದಾಗ್ಯೂ, ಸಮಯೋಚಿತ ಕ್ರಮಗಳನ್ನು ತೆಗೆದುಕೊಳ್ಳುವಲ್ಲಿ ಕೊರತೆ ಹಾಗೂ ಅಧಿಕಾರಿಗಳ ವಿವೇಚನಾರಹಿತ ನಿರ್ಣಯಗಳು ಸಹಕಾರಿ ಸಕ್ಕರೆ ಕಾರ್ಖಾನೆಗಳ ಬಾಧ್ಯತೆಗಳನ್ನು ಹೆಚ್ಚಿಸಿದವು ಹಾಗೂ ಈ ಕೆಳಗೆ ಚರ್ಚಿಸಿರುವಂತೆ ರಾಜ್ಯದ ಬೊಕ್ಕಸಕ್ಕೆ ಹೊರೆಯನ್ನು ವರ್ಗಾಯಿಸಿದವು:

### *3.1.4.1 ಸಹಕಾರಿ ಸಕ್ಕರೆ ಕಾರ್ಖಾನೆಗಳು ಪಡೆದಿದ್ದ ಸಾಲಗಳ ಒಂದು ಬಾರಿಯ ಇತ್ಯರ್ಥದ ಕಡೆಗೆ ₹ 68.37 ಕೋಟಿಯ ಜವಾಬ್ದಾರಿ*

ಸರ್ಕಾರವು, ಸಹಕಾರಿ ಸಕ್ಕರೆ ಕಾರ್ಖಾನೆಗಳು ಪಡೆದಿರುವ ಸಾಲಗಳಿಗೆ ಖಾತರಿ ನೀಡುವುದಕ್ಕೆ ಸಂಬಂಧಿಸಿದಂತೆ, ಒಂದು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಒಂದು ಭರವಸೆ ಹಣದ ಖಾತೆಯನ್ನು (ಎಸ್ಕ್ರೋ) ತೆರೆಯಲು ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಒತ್ತಾಯಿಸುವಂತೆ ಆಯುಕ್ತರವರಿಗೆ ನಿರ್ದೇಶಿಸಿತು ಹಾಗೂ ಆ ಖಾತೆಗೆ ಎಲ್ಲಾ ಸ್ವೀಕೃತಿಗಳು, ವಸೂಲಾತಿಗಳು, ಆದಾಯಗಳು, ಇತ್ಯಾದಿಗಳನ್ನು ಜಮೆ ಮಾಡಬೇಕಿದ್ದಿತು. ಮೇಲೆ ತಿಳಿಸಲಾದ ಖಾತೆಯನ್ನು, ಸರ್ಕಾರದ ಖಾತರಿಗಳ ಅಡಿಯಲ್ಲಿ ಸಾಲಗಳನ್ನು ಪಡೆಯಲಾಗುವ ಹಣಕಾಸು ಸಂಸ್ಥೆಗಳ ಪರವಾಗಿ ಒತ್ತೆ ಇಡಬೇಕಿದ್ದಿತು. ಎಸ್ಕ್ರೋ ಖಾತೆಯ ವರಮಾನವನ್ನು ಸರ್ಕಾರದ ಖಾತರಿಯ ಸಾಲಗಳ ಪ್ರಯೋಜನಕ್ಕೆ ಮೊದಲು ಉಪಯೋಗಿಸಬೇಕಿದ್ದಿತು. ಆದಾಗ್ಯೂ, ಇದನ್ನು ಸಹಕಾರಿ ಸಕ್ಕರೆ ಕಾರ್ಖಾನೆಗಳು ಅನುಸರಿಸಲಿಲ್ಲ. ಆಯುಕ್ತರೂ ಸಹ ಸ್ಥಿತಿಗತಿಯ ಬಗ್ಗೆ ನಿಯತಕಾಲಿಕವಾಗಿ ಸಮೀಕ್ಷಿಸುವಲ್ಲಿ ವಿಫಲರಾಗಿದ್ದರು. ತತ್ಪರಿಣಾಮವಾಗಿ, **ಅನುಬಂಧ 3.1**ರಲ್ಲಿ ವಿವರಿಸಿರುವಂತೆ ಬಾಕಿ ಇದ್ದ ₹ 68.37 ಕೋಟಿ[35] (ಕಂಡಿಕೆ 3.1.2.5 ಹಾಗೂ ಕಂಡಿಕೆ 3.1.3.1ರಲ್ಲಿ ಹೇಳಿರುವ ₹ 41.30 ಕೋಟಿ ಒಳಗೊಂಡಂತೆ) ಸಾಲವನ್ನು ಸರ್ಕಾರವು ಪಾವತಿಸಬೇಕಾಯಿತು.

ಎಸ್ಕ್ರೋ ಖಾತೆಯನ್ನು ತೆರೆಯದಿದ್ದರೂ ಸಹ, ಪಾವತಿಗಳನ್ನು ಸಾಲದ ಖಾತೆಗಳಿಗೆ ಮಾಡಲಾಗಿದ್ದಿತು ಹಾಗೂ ಸಾಲಗಳ ಮರುಪಾವತಿಗಾಗಿ ಪಾವತಿಸಿರುವ ಮೊತ್ತವನ್ನು ಸಹಕಾರಿ ಸಕ್ಕರೆ ಕಾರ್ಖಾನೆಗಳಿಂದ ವಸೂಲಾತಿ ಮಾಡಲಾಗುವುದು ಎಂದು ಆಯುಕ್ತರು ಉತ್ತರಿಸಿದರು (ಆಗಸ್ಟ್ 2014). ಸಹಕಾರಿ ಸಕ್ಕರೆ ಕಾರ್ಖಾನೆಗಳು ಬ್ಯಾಂಕ್‌ಗಳಿಗೆ ಮಾತ್ರವಲ್ಲದೇ ಸರ್ಕಾರಕ್ಕೂ ಸಹ ಸಾಲಗಳ ಮರುಪಾವತಿಯಲ್ಲಿ ತಪ್ಪಿತಸ್ಥವಾಗಿದ್ದವಾದ್ದರಿಂದ ಉತ್ತರವು ಒಪ್ಪುವಂತಿರಲಿಲ್ಲ.

[34] ಅಧಿನಿಯಮದ ಪರಿಚ್ಛೇದ 73ರ ಅಡಿಯಲ್ಲಿ ಸಮಾಪಕರನ್ನು ನೇಮಕಗೊಳಿಸಿದನಂತರ, ಸಮಾಪಕರು ಅಧಿನಿಯಮದ ಪರಿಚ್ಛೇದ 74ರ ಅಡಿಯಲ್ಲಿ ನೀಡಲಾಗಿರುವ ಅಧಿಕಾರವನ್ನು ಚಲಾಯಿಸುವ ನಿಟ್ಟಿನಲ್ಲಿ ತನಿಖೆಗಳನ್ನು ಮಾಡಬೇಕು ಹಾಗೂ ಆದ್ಯತೆಯ ಮೇರೆಗೆ ಸಹಕಾರಿ ಸಕ್ಕರೆ ಕಾರ್ಖಾನೆ ವಿರುದ್ಧದ ಎಲ್ಲಾ ಬೇಡಿಕೆಗಳನ್ನು ಪಾವತಿಸಬೇಕು

[35] ಪಾಂಡವಪುರ, ವಾಣಿವಿಲಾಸ, ಕರ್ನಾಟಕ, ಭಾಗ್ಯಲಕ್ಷ್ಮಿ

## 3.1.5 ನಿರ್ಣಯ

ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಗುತ್ತಿಗೆಗೆ ನೀಡುವುದರ ಉದ್ದೇಶವು, ಸಂಪನ್ಮೂಲಗಳನ್ನು ವೃದ್ಧಿಸುವ ಹಾಗೂ ಜವಾಬ್ದಾರಿಗಳನ್ನು ಕನಿಷ್ಠಮಟ್ಟಕ್ಕೆ ತರುವುದರ ಮೂಲಕ ಕಬ್ಬು ಬೆಳೆಗಾರರಿಗೆ ಹಾಗೂ ಸಹಕಾರಿ ಸಕ್ಕರೆ ಕಾರ್ಖಾನೆಯ ಉದ್ಯೋಗಿಗಳಿಗೆ ಸಹಾಯ ಮಾಡುವುದಾಗಿದ್ದಿತು ಹಾಗೂ ಅದರಿಂದ ಊರ್ಜಿತಗೊಳ್ಳಬಲ್ಲಂತಹ ಆರ್ಥಿಕ ಚಟುವಟಿಕೆ ಹಾಗೂ ಪ್ರಾದೇಶಿಕ ಅಭಿವೃದ್ಧಿಯನ್ನು ಸಾಧಿಸುವುದಾಗಿದ್ದಿತು. ಆಯುಕ್ತರ ದಾಖಲೆಗಳ ನಮ್ಮ ಪರಿಶೀಲನೆಯು, ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಗುತ್ತಿಗೆಗೆ ನೀಡುವಲ್ಲಿ ತೆಗೆದುಕೊಂಡಂತಹ ವಿವೇಚನಾರಹಿತ ನಿರ್ಣಯಗಳು, ಅವುಗಳನ್ನು ಪುನಃ ಸುವ್ಯವಸ್ಥೆಗೆ ತರುವ ಪ್ರಕ್ರಿಯೆಯನ್ನು ವಿಫಲಗೊಳಿಸಿದ್ದಲ್ಲದೇ ಬಾಡಿಗೆಗಳನ್ನು ವಸೂಲಾತಿ ಮಾಡದಿರುವಲ್ಲಿ ಪರಿಣಮಿಸಿತು ಹಾಗೂ ಸಹಕಾರಿ ಸಕ್ಕರೆ ಕಾರ್ಖಾನೆಗಳು ಕಾರ್ಯರಹಿತವಾಗಿಯೇ ಮುಂದುವರೆದಿದ್ದವು ಎಂಬುದನ್ನು ತೋರಿಸಿಕೊಟ್ಟಿತು. ಗುತ್ತಿಗೆದಾರರು ಗುತ್ತಿಗೆ ಷರತ್ತುಗಳನ್ನು ಉಲ್ಲಂಘಿಸಿದ ಸಂದರ್ಭದಲ್ಲಿ ಹಾಗೂ ಗುತ್ತಿಗೆ ಒಪ್ಪಂದಗಳನ್ನು ಅವಧಿಗೆ ಮುನ್ನವೇ ಮುಕ್ತಾಯಗೊಳಿಸಿದಲ್ಲಿ, ಸರ್ಕಾರದ ಹಿತಾಸಕ್ತಿಯನ್ನು ಕಾಪಾಡುವುದಕ್ಕಾಗಿ ಟೆಂಡರು ದಾಖಲೆಗಳು ಅಥವಾ ಒಪ್ಪಂದಗಳು ಯಾವುದೇ ದಂಡನಾ ಅವಕಾಶಗಳನ್ನು ಹೊಂದಿರಲಿಲ್ಲ. ಸಮಾಪನ ಪ್ರಕ್ರಿಯೆಯನ್ನು ಪೂರ್ಣಗೊಳಿಸುವಲ್ಲಿ ಸಹ ವಿಪರೀತವಾದ ವಿಳಂಬವು, ಸರ್ಕಾರದ ಹಾಗೂ ಸಹಕಾರಿ ಸಕ್ಕರೆ ಕಾರ್ಖಾನೆಗಳ ಜವಾಬ್ದಾರಿಗಳು ಅಧಿಕಗೊಳ್ಳುವಲ್ಲಿ ಕೂಡ ಪರಿಣಮಿಸಿತು.

## 3.1.6 ಶಿಫಾರಸುಗಳು

- ಗುತ್ತಿಗೆದಾರರಿಂದ ಗುತ್ತಿಗೆ ಒಪ್ಪಂದದ ಅನುಸರಣೆಯನ್ನು ಆಯುಕ್ತರು ನಿಕಟವಾಗಿ ಮೇಲ್ವಿಚಾರಿಸಬೇಕು.
- ಸಹಕಾರಿ ಸಕ್ಕರೆ ಕಾರ್ಖಾನೆಗಳು/ಸರ್ಕಾರದ ಹಿತಾಸಕ್ತಿಗಳನ್ನು ಕಾಪಾಡುವುದಕ್ಕಾಗಿ ಗುತ್ತಿಗೆ ಒಪ್ಪಂದದಲ್ಲಿ ದಂಡನಾ ಅವಕಾಶಗಳನ್ನು ಸೇರಿಸಬೇಕು.
- ಆರ್ಥಿಕವಾಗಿ ಅಸ್ವಸ್ಥವಾಗಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಸಮಾಪನಗೊಳಿಸಬೇಕು.
- ಸಮಾಪನ ಪ್ರಕ್ರಿಯೆಯನ್ನು ಸರ್ಕಾರವು ಮಾರ್ಗಸೂಚಿಗಳ ಪ್ರಕಾರ ಪೂರ್ಣಗೊಳಿಸಬೇಕು.

ವಿಷಯವನ್ನು ಸರ್ಕಾರಕ್ಕೆ ಸೆಪ್ಟೆಂಬರ್ 2014ರಲ್ಲಿ ತಿಳಿಸಲಾಯಿತು; ಅವರ ಉತ್ತರವನ್ನು ನಿರೀಕ್ಷಿಸಲಾಗಿತ್ತು (ಅಕ್ಟೋಬರ್ 2014).

## 3.2 ವಿವೇಚನೆಯಿಲ್ಲದ ತೀರ್ಮಾನದಿಂದ ನಷ್ಟ

**ಬಿಡದಿ ಕೈಗಾರಿಕಾ ಪ್ರದೇಶದಲ್ಲಿ ಒಂದು ಕಂಪನಿಗೆ ಇಳಿಸಿದ ದರದಲ್ಲಿ ಭೂಮಿಯನ್ನು ಹಂಚಿಕೆ ಮಾಡಿದ್ದು ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಗೆ ₹ 5.40 ಕೋಟಿ ಮೊತ್ತದಷ್ಟು ನಷ್ಟ ಸಂಭವಿಸಲು ಕಾರಣವಾಯಿತು.**

ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯು (ಮಂಡಳಿ), ರಾಜ್ಯ ಉನ್ನತ ಮಟ್ಟದ ಪರವಾನಗಿ ಸಮಿತಿ, ರಾಜ್ಯ ಮಟ್ಟದ ಏಕಗವಾಕ್ಷಿ ಪರವಾನಗಿ ಸಮಿತಿ ಹಾಗೂ ಜಿಲ್ಲಾ ಮಟ್ಟದ ಏಕಗವಾಕ್ಷಿ ಪರವಾನಗಿ ಸಮಿತಿಗಳಿಂದ ಹೂಡಿಕೆಯ ಗಾತ್ರದ ಆಧಾರದ ಮೇರೆಗೆ ಅನುಮೋದನೆಗೊಂಡ ಯೋಜನೆಗಳನ್ನು ಸ್ಥಾಪಿಸುವುದಕ್ಕಾಗಿ ಕೈಗಾರಿಕೆಗಳಿಗೆ/ವಾಣಿಜ್ಯೋದ್ಯಮಗಳಿಗೆ ಸರ್ಕಾರದ ಆದೇಶದ ಪ್ರಕಾರ ಕೈಗಾರಿಕಾ ಭೂಮಿಯನ್ನು ಹಂಚಿಕೆ ಮಾಡುತ್ತದೆ. ಮಂಡಳಿಯು, ಭೂ ಸ್ವಾಧೀನ ವೆಚ್ಚ, ಅಭಿವೃದ್ಧಿ ವೆಚ್ಚ, ಸೇವಾ ವೆಚ್ಚಗಳು ಮತ್ತು ಸ್ವಾಧೀನ ವೆಚ್ಚ ಹಾಗೂ ಅಭಿವೃದ್ಧಿ ವೆಚ್ಚದ ಮೇಲಿನ ಬಡ್ಡಿಯನ್ನು ಪರಿಗಣಿಸಿ ಭೂಮಿಯ ಬೆಲೆಯನ್ನು ನಿಗದಿಗೊಳಿಸುತ್ತದೆ ಹಾಗೂ ಲಾಭವೂ ಇಲ್ಲದ – ನಷ್ಟವೂ ಇಲ್ಲದ ಆಧಾರದ ಮೇರೆಗೆ ಕಾರ್ಯಾಚರಣೆ ನಡೆಸುತ್ತದೆ.

ಇಂಧನ ಇಂಜೆಕ್ಷನ್ ಪಂಪುಗಳು, ಬಿಡಿಭಾಗಗಳು, ವಿತರಣಾ ವಾಲ್ವ್‌ಗಳು, ಇತ್ಯಾದಿಗಳ ತಯಾರಿಕೆಗಾಗಿ ₹ 550 ಕೋಟಿ ಹೂಡಿಕೆಯಲ್ಲಿ ಬಿಡದಿ ಕೈಗಾರಿಕಾ ಪ್ರದೇಶದಲ್ಲಿ ಒಂದು ಕೈಗಾರಿಕಾ ಘಟಕವನ್ನು ಸ್ಥಾಪಿಸುವುದಕ್ಕಾಗಿ ಮೆ. ಬಾಷ್ ಲಿಮಿಟೆಡ್ (ಬಾಷ್), ಇವರ ಯೋಜನಾ ಪ್ರಸ್ತಾವನೆಗಳಿಗೆ ರಾಜ್ಯ ಉನ್ನತ ಮಟ್ಟದ ಪರವಾನಗಿ ಸಮಿತಿಯು ಪರವಾನಗಿ ನೀಡಿತು (ಜೂನ್ 2009) ಹಾಗೂ ಈ ಉದ್ದೇಶಕ್ಕಾಗಿ 100 ಎಕರೆ ಭೂಮಿಯ ಹಂಚಿಕೆಗೆ ಮಂಜೂರಾತಿ ನೀಡಿತು. ಸರ್ಕಾರವು ಹಂಚಿಕೆಯನ್ನು ಅನುಮೋದಿಸಿತು (ಅಕ್ಟೋಬರ್ 2009) ಹಾಗೂ ಈ ಹಂಚಿಕೆಯ ನಂತರ, ಮೆ. ಬಾಷ್ ರೆಕ್ಸ್‌ರೊತ್‌ಗೆ (ರೆಕ್ಸ್‌ರೊತ್) ಬಿಡದಿ ಕೈಗಾರಿಕಾ ಪ್ರದೇಶದ ವಲಯ Iರ ಹಂತ IIರಲ್ಲಿ ಈ ಮೊದಲು (ಮೇ 2008) ಹಂಚಿಕೆ ಮಾಡಲಾಗಿದ್ದ 30 ಎಕರೆ ಭೂಮಿಯನ್ನು ಸರ್ಕಾರಕ್ಕೆ ಹಿಂತಿರುಗಿಸತಕ್ಕದ್ದು ಎಂದು ಆದೇಶಿಸಿತು. ಮಂಡಳಿಯು ಬಾಷ್‌ಗೆ ಬಿಡದಿ ಕೈಗಾರಿಕಾ ಪ್ರದೇಶದ ವಲಯ IIರ ಹಂತ IIರಲ್ಲಿ ಎಕರೆಯೊಂದಕ್ಕೆ ₹ 78 ಲಕ್ಷ ಮೊತ್ತದ ತಾತ್ಕಾಲಿಕ ದರದಲ್ಲಿ 100 ಎಕರೆ ಭೂಮಿಯನ್ನು ಹಂಚಿಕೆ ಮಾಡಿತು (13 ನವೆಂಬರ್ 2009).

ಅದೇ ವೇಳೆಯಲ್ಲಿ, 30 ಎಕರೆ ಭೂಮಿಯನ್ನು ರೆಕ್ಸ್‌ರೊತ್‌ಗೆ ಹಂಚಿಕೆ ಮಾಡಲಾಗಿದ್ದ ದರದಲ್ಲಿ ಅಂದರೆ ಎಕರೆಯೊಂದಕ್ಕೆ ₹ 60 ಲಕ್ಷದ ದರದಲ್ಲಿ 30 ಎಕರೆ ಭೂಮಿಯನ್ನು ಹಾಗೂ ಎಕರೆಯೊಂದಕ್ಕೆ ₹ 78 ಲಕ್ಷ ಮೊತ್ತದಂತೆ ಉಳಿದ 70 ಎಕರೆ ಭೂಮಿಯನ್ನು ಹಂಚಿಕೆ ಮಾಡುವಂತೆ ಬಾಷ್ ಮಂಡಳಿಯನ್ನು (9 ನವೆಂಬರ್ 2009) ಹಾಗೂ ರಾಜ್ಯ ಸರ್ಕಾರವನ್ನು (23 ನವೆಂಬರ್ 2009) ಕೋರಿತು. ಮಂಡಳಿಯು ಭೂಮಿಯ ದರವನ್ನು ಇಳಿಸಲು ಅನುಮೋದನೆ ನೀಡಿತು (19 ಡಿಸೆಂಬರ್ 2009) ಹಾಗೂ 30 ಎಕರೆಗೆ ಎಕರೆಯೊಂದಕ್ಕೆ ₹ 60 ಲಕ್ಷದಂತೆ ಹಾಗೂ ಉಳಿದ 70 ಎಕರೆಗೆ ಎಕರೆಯೊಂದಕ್ಕೆ ₹ 78 ಲಕ್ಷದಂತೆ ಭೂಮಿಯ ದರವನ್ನು ನಿಗದಿ ಪಡಿಸಿ ಬಾಷ್‌ಗೆ ಪರಿಷ್ಕೃತ ಹಂಚಿಕೆ ಆದೇಶವನ್ನು ನೀಡಿತು (2 ಫೆಬ್ರವರಿ 2010). ರೆಕ್ಸ್‌ರೊತ್ ಪಾವತಿಸಿದ್ದ ₹ 3.60 ಕೋಟಿ ಪ್ರಾರಂಭಿಕ ಠೇವಣಿ ಸೇರಿದಂತೆ ಭೂಮಿಯ ವೆಚ್ಚದ ಕಡೆಗೆ ₹ 71.57 ಕೋಟಿ[36] ಮೊತ್ತವನ್ನು ಬಾಷ್ ಪಾವತಿಸಿತು (ಜೂನ್ 2008).

ಭೂಮಿಯ ಸ್ವಲ್ಪ ಭಾಗಕ್ಕೆ ದರವನ್ನು ಇಳಿಸುವಂತೆ ಮಾಡಿದ ಕೋರಿಕೆಯನ್ನು ಮಂಡಳಿಯು ಒಪ್ಪಿಕೊಂಡಿದ್ದು ಈ ಕೆಳಗೆ ತಿಳಿಸಿರುವ ಕಾರಣಗಳಿಗಾಗಿ ಅಸಮರ್ಥನೀಯವಾಗಿತ್ತು ಎನ್ನುವುದನ್ನು ದಾಖಲೆಗಳ ಪರಿಶೀಲನೆಯು ತೋರಿಸಿಕೊಟ್ಟಿತು (ಫೆಬ್ರವರಿ 2013):

- 30 ಎಕರೆಗಳಷ್ಟು ಭೂಮಿಯನ್ನು ಬಾಷ್‌ಗೆ ಇಳಿಸಿದ ದರದಲ್ಲಿ ಹಂಚಿಕೆ ಮಾಡುವ ಮಂಡಳಿಯ ನಿರ್ಣಯಕ್ಕೆ ರಾಜ್ಯ ಉನ್ನತ ಮಟ್ಟದ ಪರವಾನಗಿ ಸಮಿತಿಯ ಪರವಾನಗಿ ಪಡೆದಿರಲಿಲ್ಲವಾದ್ದರಿಂದ ಸರ್ಕಾರದ ಅನುಮೋದನೆಯೂ ಇರಲಿಲ್ಲ ಹಾಗೂ ಭೂಮಿಯ ಹಂಚಿಕೆಯನ್ನು ಅಥವಾ ಭೂಮಿಯ ಒಂದು ಭಾಗವನ್ನು ಇಳಿಸಿದ ದರಗಳಲ್ಲಿ ಹಂಚಿಕೆ ಮಾಡಲು ಸರ್ಕಾರದ ಆದೇಶವು ಇರಲಿಲ್ಲ.
- ರೆಕ್ಸ್‌ರೊತ್‌ಗೆ ಹಂಚಿಕೆಯಾಗಿದ್ದ 30 ಎಕರೆ ಭೂಮಿಯು ಬೇರೆ ವಲಯದಲ್ಲಿದ್ದಿತು (ವಲಯ I) ಹಾಗೂ ಆ ವಲಯದಲ್ಲಿ ಭರಿಸಲಾದ ಅಭಿವೃದ್ಧಿ ವೆಚ್ಚವನ್ನು ಪರಿಗಣಿಸಿ ಎಕರೆಯೊಂದಕ್ಕೆ ಹಂಚಿಕೆ ದರ ₹ 60 ಲಕ್ಷವನ್ನು ನಿಗದಿಗೊಳಿಸಲಾಗಿದ್ದಿತು. ಆದ್ದರಿಂದ, ವಲಯ Iರ ದರವನ್ನು ಹೊಸದಾಗಿ ರಚಿಸಲಾದ ವಲಯ IIಕ್ಕೆ ಅನ್ವಯಿಸಿದ್ದುದು ನಿಯಮಬಾಹಿರವಾಗಿತ್ತು ಹಾಗೂ ಸಮರ್ಥನೀಯವಾಗಿರಲಿಲ್ಲ.

[36] ಕೊಳಚೆ ಪ್ರದೇಶ ಅಭಿವೃದ್ಧಿ ಸೆಸ್ ಕಡೆಗೆ ₹ 9.97 ಲಕ್ಷ ಒಳಗೊಂಡಂತೆ ವಹಿಸಿಕೊಡಲಾದ 98.56 ಎಕರೆಗೆ

ಇದನ್ನು ಸ್ಪಷ್ಟಪಡಿಸಿದನಂತರ (ಮಾರ್ಚ್ 2014), ಯೋಜನೆಯು ಅನುಮೋದನೆಗೊಂಡ ದಿನಾಂಕದಂದು ಚಾಲ್ತಿಯಲ್ಲಿದ್ದ ದರಗಳು, ಅಂದರೆ ಎಕರೆಯೊಂದಕ್ಕೆ ₹ 60 ಲಕ್ಷವನ್ನು 30 ಎಕರೆ ಭೂಮಿಗೆ ವಿಧಿಸಲಾಯಿತು ಎಂದು ಸರ್ಕಾರವು ಉತ್ತರಿಸಿತು (ಆಗಸ್ಟ್ 2014).

ವಲಯ IIರ ಹಂಚಿಕೆ ದರವು ಏಕಪ್ರಕಾರವಾಗಿ ಎಕರೆಯೊಂದಕ್ಕೆ ₹ 78 ಲಕ್ಷ ಆಗಿರಬೇಕಿದ್ದರಿಂದ ಉತ್ತರವು ಒಪ್ಪುವಂತಿಲ್ಲ. ಈ ದರವನ್ನು ಸರ್ಕಾರದ ನಿರ್ದಿಷ್ಟ ಆದೇಶಗಳ ಮೂಲಕವಷ್ಟೇ ಇಳಿಸಬಹುದಾಗಿತ್ತು; ಅದನ್ನು ಪಡೆದುಕೊಂಡಿರಲಿಲ್ಲ.

ಹೀಗೆ, 30 ಎಕರೆ ಭೂಮಿಯನ್ನು ಬಾಷ್‌ಗೆ ಇಳಿಸಿದ ದರಗಳಲ್ಲಿ ವಿವೇಚನೆಯಿಲ್ಲದೆ ಹಂಚಿದ್ದು ಮಂಡಳಿಗೆ ₹ 5.40 ಕೋಟಿ[37] ನಷ್ಟ ಸಂಭವಿಸುವಲ್ಲಿ ಪರಿಣಮಿಸಿತು.

## 3.3 ವೆಚ್ಚದ ವ್ಯತ್ಯಾಸದ ವಸೂಲಾತಿಯಲ್ಲಿ ವಿಳಂಬದಿಂದ ನಷ್ಟ

**ಅಂತಿಮ ವೆಚ್ಚವನ್ನು ನಿಗದಿಗೊಳಿಸಿದನಂತರವೂ ಹಂಚಿಕೆಯನ್ನು ಪಡೆದವರಿಂದ ವ್ಯತ್ಯಾಸದ ವೆಚ್ಚವನ್ನು ವಸೂಲಾತಿ ಮಾಡುವುದಕ್ಕಾಗಿ ತಗಾದೆ ನೋಟೀಸುಗಳನ್ನು ನೀಡುವಲ್ಲಿನ ವಿಳಂಬವು ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಗೆ ₹ 4.27 ಕೋಟಿ ನಷ್ಟ ಸಂಭವಿಸಲು ಕಾರಣವಾಯಿತು.**

ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯು (ಮಂಡಳಿ) ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುತ್ತದೆ ಹಾಗೂ ಅವುಗಳನ್ನು ವಾಣಿಜ್ಯೋದ್ಯಮಿಗಳಿಗೆ ಕೈಗಾರಿಕಾ ಉದ್ದೇಶಗಳಿಗಾಗಿ ಹಂಚಿಕೆ ಮಾಡುತ್ತದೆ. ಹಂಚಿಕೆಯನ್ನು ಪಡೆದವರು ಭೂಮಿಯ ತಾತ್ಕಾಲಿಕ ವೆಚ್ಚವನ್ನು ಪಾವತಿಸಬೇಕು; ಅದರ ಆಧಾರದ ಮೇರೆಗೆ ಗುತ್ತಿಗೆ ಬಾಡಿಗೆಯ ಪಾವತಿ, ಕೈಗಾರಿಕಾ ಉತ್ಪನ್ನವನ್ನು ಪ್ರಾರಂಭಿಸುವುದು, ಇತ್ಯಾದಿ ನಿರ್ದಿಷ್ಟ ಷರತ್ತುಗಳನ್ನು ನಿರ್ದಿಷ್ಟಪಡಿಸುವ ಗುತ್ತಿಗೆ ಒಪ್ಪಂದವನ್ನು, ಆರು/ಹತ್ತು ವರ್ಷಗಳಿಗೆ ಮಾಡಿಕೊಳ್ಳಲಾಗುವುದು. ಗುತ್ತಿಗೆ ಷರತ್ತುಗಳನ್ನು ಪೂರ್ಣಗೊಳಿಸಿದನಂತರ ಹಾಗೂ ಅಂತಿಮ ವೆಚ್ಚದ ಪಾವತಿಯ ನಂತರ ಕ್ರಯ ಪತ್ರವನ್ನು ಮಾಡಿಕೊಡಲಾಗುವುದು. ಹಂಚಿಕೆಯನ್ನು ಪಡೆದವರಿಗೆ ನೀಡಲಾಗುವ ಹಂಚಿಕೆ ಪತ್ರಗಳು, ಭೂಮಿಯ ಬೆಲೆಯನ್ನು ಸೂಕ್ತ ಸಮಯದಲ್ಲಿ ನಿರ್ಧಾರಣೆ ಮಾಡಲಾಗುವುದು ಹಾಗೂ ತಿಳಿಸಲಾಗುವುದು ಎಂದು ಹೇಳುತ್ತವೆ.

ಬಿಡದಿ, ಮಾಲೂರು IIIನೇ ಹಂತ ಹಾಗೂ ಬೊಮ್ಮಸಂದ್ರ – ಜಿಗಣಿ ಸಂಪರ್ಕ ರಸ್ತೆ ಕೈಗಾರಿಕಾ ಪ್ರದೇಶಗಳ ಕೈಗಾರಿಕಾ ನಿವೇಶನಗಳ ಅಂತಿಮ ದರಗಳನ್ನು ಮಂಡಳಿಯು ಮಾರ್ಚ್ 2008 ಹಾಗೂ ಮೇ 2008ರಲ್ಲಿ ನಿರ್ಧಾರಣೆ ಮಾಡಿದ್ದಿತು. 37 ಪ್ರಕರಣಗಳಿಗೆ ಸಂಬಂಧಿಸಿದಂತೆ ₹ 12.90 ಕೋಟಿ ಮೊತ್ತದಷ್ಟು ವ್ಯತ್ಯಾಸದ ವೆಚ್ಚವನ್ನು (ಅಂತಿಮ ದರಗಳಿಂದ ಈಗಾಗಲೇ ಪಾವತಿಸಲಾಗಿರುವ ತಾತ್ಕಾಲಿಕ ವೆಚ್ಚ ಕಳೆದನಂತರ) ಪಾವತಿಸುವಂತೆ ತಗಾದೆ ನೋಟೀಸುಗಳನ್ನು 32ರಿಂದ 56 ತಿಂಗಳುಗಳ ವಿಳಂಬಗಳೊಂದಿಗೆ ಮಾರ್ಚ್ 2011 ಹಾಗೂ ಮಾರ್ಚ್ 2013ರ ನಡುವೆ ನೀಡಲಾಗಿದ್ದಿತು ಎನ್ನುವುದನ್ನು ಪರೀಕ್ಷಾ ತನಿಖೆಯು ತೋರಿಸಿಕೊಟ್ಟಿತು.

ಮಂಡಳಿಯು ಹೆಚ್ಚುವರಿ/ಬಳಸಿಕೊಳ್ಳದ ನಿಧಿಯನ್ನು ನಿಶ್ಚಿತ ಅವಧಿ ಠೇವಣಿಗಳಲ್ಲಿ ಇಡುತ್ತದೆ ಹಾಗೂ ವ್ಯತ್ಯಾಸದ ವೆಚ್ಚವನ್ನು ವಸೂಲಾತಿ ಮಾಡುವಲ್ಲಿನ ವಿಳಂಬದಿಂದಾಗಿ ಮಂಡಳಿಯು, ವಸೂಲಿ ಆಗಬಹುದಾಗಿದ್ದ ₹ 12.90 ಕೋಟಿಯನ್ನು ಹೂಡಿಕೆ ಮಾಡುವ ಅವಕಾಶವನ್ನು ಕಳೆದುಕೊಂಡಿತು.

---

[37] 30 ಎಕರೆಗೆ, ಎಕರೆಯೊಂದಕ್ಕೆ ₹ 18 ಲಕ್ಷದಂತೆ (₹ 78 ಲಕ್ಷದಿಂದ ₹ 60 ಲಕ್ಷ ಕಳೆದನಂತರ)

ಠೇವಣಿಗಳ ಮೇಲೆ ಭಾರತೀಯ ಸ್ಟೇಟ್ ಬ್ಯಾಂಕ್ ನೀಡುತ್ತಿದ್ದ ಬಡ್ಡಿ ದರಗಳನ್ನು[38] ಪರಿಗಣಿಸಿದಲ್ಲಿ, ತಗಾದೆ ನೋಟೀಸಿನ ವಿಳಂಬದ ಕಾರಣ ಉಂಟಾದ ಬಡ್ಡಿಯ ನಷ್ಟವು ₹ 4.27 ಕೋಟಿಗೆ ಲೆಕ್ಕಾಚಾರವಾಗುತ್ತದೆ (**ಅನುಬಂಧ 3.2**). ಮಂಡಳಿಯ ವಿಳಂಬಿತ ತಗಾದೆ ನೋಟೀಸಿನ ಫಲಾನುಭವಿಗಳಲ್ಲಿ ಉನ್ನತ ಮಟ್ಟದ ಲಾಭದಾಯಕ ಕಂಪನಿಗಳು ಮತ್ತು ಸಂಸ್ಥೆಗಳು[39] ಸೇರಿದ್ದವು.

ಭೂಮಿಯ ಹಂಚಿಕೆಯನ್ನು ಪಡೆದವರು ಅಂತಿಮ ವೆಚ್ಚದ ಪಾವತಿಗಳನ್ನು ಮಾಡುವುದಕ್ಕೆ ಅನುಕೂಲವಾಗುವಂತೆ, ಹಂಚಿಕೆದಾರರೆಲ್ಲರಿಗೂ ತಗಾದೆ ನೋಟೀಸುಗಳನ್ನು ನೀಡುವಂತೆ ಶಾಖಾ ಕಚೇರಿಗಳಿಗೆ ಸುತ್ತೋಲೆಗಳನ್ನು ಕಳುಹಿಸಲು ತಕ್ಷಣದ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಸರ್ಕಾರವು ತನ್ನ ಉತ್ತರದಲ್ಲಿ ತಿಳಿಸಿತು (ಅಕ್ಟೋಬರ್ 2014).

**ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ**

## 3.4 ವರಮಾನದ ನಷ್ಟ

**2003 ಹಾಗೂ 2010ರ ನಡುವಿನ ಅವಧಿಯಲ್ಲಿ ಕಿರು ಅರಣ್ಯ ಉತ್ಪನ್ನಗಳನ್ನು ಹೊರತೆಗೆಯುವ ಹಕ್ಕಿನ ಹರಾಜು ಹಾಕುವಲ್ಲಿನ ವಿಫಲತೆಯು ಸರ್ಕಾರಕ್ಕೆ ₹ 12.75 ಕೋಟಿ ವರಮಾನದ ನಷ್ಟದಲ್ಲಿ ಪರಿಣಮಿಸಿತು.**

ಒಂದು ಅರಣ್ಯ ವಿಭಾಗವು ಕೈಗೊಳ್ಳುವ ಎಲ್ಲಾ ಚಟುವಟಿಕೆಗಳೂ ಅನುಮೋದಿತ ಕ್ರಿಯಾ ಯೋಜನೆಯ ಪ್ರಕಾರ ಆಗಿರತಕ್ಕದ್ದು. ಮಂಗಳೂರಿನ ಅರಣ್ಯ ವಿಭಾಗದ (ವಿಭಾಗ) 2002–2012ರ ಅವಧಿಯ ಕ್ರಿಯಾ ಯೋಜನೆಯು, ಪಶ್ಚಿಮ ಘಟ್ಟಗಳ ಸ್ಥಳೀಯ ಸಸ್ಯವರ್ಗವಾಗಿದ್ದ *ಐಲಂಥಸು ಮಲಬಾರಿಕಾ* ಮರಗಳ ಕಾಂಡಗಳಿಂದ ಒಸರುವ ಹಾಗೂ ಅಗರಬತ್ತಿಗಳ ತಯಾರಿಕೆಯಲ್ಲಿ ಬಳಸಲಾಗುವ ಒಂದು ದಹ್ಯ ಪದಾರ್ಥವಾದ ಹಾಲುಮಡ್ಡಿಯನ್ನು ಹೊರತೆಗೆಯುವುದನ್ನೂ ನಿರ್ದಿಷ್ಟಪಡಿಸಿದ್ದಿತು. ಹಾಲುಮಡ್ಡಿಯು ಒಂದು ಕಿರು ಅರಣ್ಯ ಉತ್ಪನ್ನವಾಗಿದೆ ಹಾಗೂ ಈ ಕಿರು ಅರಣ್ಯ ಉತ್ಪನ್ನದ ಹೊರತೆಗೆಯುವಿಕೆ ಹಾಗೂ ಹರಾಜಿನ ಸವಿವರ ಮಾರ್ಗಸೂಚಿಗಳನ್ನು ಕರ್ನಾಟಕ ಅರಣ್ಯ ಸಂಹಿತೆಯ (ಸಂಹಿತೆ) ಅನುಬಂಧ XXIVರಲ್ಲಿ ಹೇಳಲಾಗಿದೆ. ಹೊರತೆಗೆಯುವ ಹಾಗೂ ಅದರ ಹರಾಜಿನ ಹಕ್ಕನ್ನು ಎರಡು ವರ್ಷಗಳ ಅವಧಿಗೆ ನೀಡಲಾಗುವುದು.

ಮಿತಿಮೀರಿದ ಪ್ರಮಾಣದಲ್ಲಿ ಹೊರತೆಗೆದಿದ್ದರ ಕಾರಣ, ಅದರ ಪುನರುತ್ಪತ್ತಿಗೆ ಅನುಕೂಲ ಕಲ್ಪಿಸುವುದಕ್ಕಾಗಿ, ಸರ್ಕಾರವು ಹಾಲುಮಡ್ಡಿ ಹೊರತೆಗೆಯುವುದನ್ನು ನಿಷೇಧಿಸಿದ್ದಿತು (ಏಪ್ರಿಲ್ 1991). ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಶಿಫಾರಸಿನ ಮೇರೆಗೆ, ಸರ್ಕಾರವು ಹಾಲುಮಡ್ಡಿಯನ್ನು ಹೊರತೆಗೆಯುವುದು/ಸಂಗ್ರಹಿಸುವುದರ ಮೇಲಿನ ನಿಷೇಧವನ್ನು ತೆಗೆದುಹಾಕಿತು (ಮಾರ್ಚ್ 2002). ಆದಾಗ್ಯೂ, ವಿಭಾಗವು 2011–13ರ ಎರಡು ವರ್ಷಗಳ ಅವಧಿಗೆ ಹಾಲುಮಡ್ಡಿಯನ್ನು ಹೊರತೆಗೆಯುವ ಹಕ್ಕನ್ನು ಹರಾಜು ಹಾಕುವುದಕ್ಕೆ ಕ್ರಮವನ್ನು, ನಿಷೇಧವನ್ನು ತೆಗೆದ ಸುಮಾರು ಹತ್ತು ವರ್ಷಗಳು ಕಳೆದ ನಂತರ, ಜನವರಿ 2011ರಲ್ಲಿಯಷ್ಟೇ ತೆಗೆದುಕೊಂಡಿತು. ಸರ್ಕಾರವು ದೊಡ್ಡ ಪ್ರಮಾಣದ ವಿವಿಧೋದ್ದೇಶ ಸಂಘಗಳ ವ್ಯಾಪ್ತಿಯಲ್ಲಿದ್ದ ಪ್ರದೇಶಗಳನ್ನು ಹೊರತುಪಡಿಸಿದ ಪ್ರದೇಶಗಳ ಹರಾಜಿಗೆ ಟೆಂಡರ್ ಕರೆಯಲು ಅನುಮೋದನೆಯನ್ನು ನೀಡಿತು. ಹರಾಜು ಪ್ರಕ್ರಿಯೆಯು 2011–13 ಸಾಲಿಗೆ ₹ ಐದು ಕೋಟಿ ವರಮಾನವನ್ನು ತಂದುಕೊಟ್ಟಿತು.

---

[38] 30.3.2009ರವರೆಗೆ ಒಂದು ವರ್ಷದ ಒಳಗಿನ ಅವಧಿಯ ಠೇವಣಿಗೆ ಬಡ್ಡಿ ದರ 7%, 1.4.2009ರಿಂದ 31.3.2011ರ ಅವಧಿಗೆ ಒಂದು ವರ್ಷದಿಂದ ಎರಡು ವರ್ಷಗಳಿಗಿಂತಲೂ ಕಡಿಮೆ ಅವಧಿಗೆ 8.1% ಹಾಗೂ 1.4.2011ರಿಂದ ತಗಾದೆಯ ದಿನದವರೆಗೆ ಒಂದು ವರ್ಷದಿಂದ 554 ದಿನಗಳವರೆಗೆ 8.25%

[39] ಪ್ರಮುಖ ಫಲಾನುಭವಿಗಳು: ಮೆ. ಇಂಗರ್‌ಸಾಲ್ ರಾಂಡ್ ಇಂಟರ್‌ನ್ಯಾಷನಲ್ (ಇಂಡಿಯಾ) ಲಿಮಿಟೆಡ್, ಮೆ. ಶೋಭಾ ಇಂಟೀರಿಯರ್ಸ್ ಪ್ರೈವೇಟ್ ಲಿಮಿಟೆಡ್, ಮೆ. ಫ್ಲೂಚರಿಸ್ಟಿಕ್ ಡಯಾಗ್ನೋಸ್ಟಿಕ್ ಇಮೇಜಿಂಗ್ ಸೆಂಟರ್ ಪ್ರೈವೇಟ್ ಲಿಮಿಟೆಡ್, ಮೆ. ಶೋಭಾ ಡೆವಲಪರ್ಸ್ ಲಿಮಿಟೆಡ್, ಮೆ. ಪ್ಯಾರಾಗಾನ್ ಆರ್ಟ್ಸ್ ಅಂಡ್ ಎಕ್ಸ್‌ಪೋರ್ಟ್ಸ್, ಮೆ. ಆನ್ಕೋ ಥೆರಪೀಸ್ ಲಿಮಿಟೆಡ್, ಮೆ. ಅಗೀಲಾ ಸ್ಪೆಷಾಲಿಟೀಸ್ ಪ್ರೈವೇಟ್ ಲಿಮಿಟೆಡ್

ವಿಭಾಗದ ದಾಖಲೆಗಳ ನಮ್ಮ ಪರೀಶೀಲನೆಯು, ಸರ್ಕಾರದಿಂದ ನಿಷೇಧವು ತೆಗೆದುಹಾಕಲ್ಪಟ್ಟಿದ್ದರೂ 2003–11ರ ಅವಧಿಗೆ ಹಾಲುಮಡ್ಡಿಯನ್ನು ಹೊರತೆಗೆಯದಿರುವುದಕ್ಕೆ ಯಾವುದೇ ಕಾರಣಗಳನ್ನೂ ದಾಖಲಿಸಿರಲಿಲ್ಲ ಎನ್ನುವುದನ್ನು ತೋರಿಸಿಕೊಟ್ಟಿತು. 2003–11ರ ಅವಧಿಗೆ ಹಾಲುಮಡ್ಡಿಯನ್ನು ಹೊರತೆಗೆಯದಿದ್ದುದು **ಕೋಷ್ಟಕ 3.2**ರಲ್ಲಿ ತೋರಿಸಿರುವಂತೆ ಸರ್ಕಾರಕ್ಕೆ ₹ 12.75 ಕೋಟಿ ವರಮಾನದ ನಷ್ಟ ಸಂಭವಿಸುವಲ್ಲಿ ಪರಿಣಮಿಸಿತು:

**ಕೋಷ್ಟಕ 3.2: ಹಾಲುಮಡ್ಡಿಯನ್ನು ಹೊರತೆಗೆಯುವ ಹಕ್ಕುಗಳನ್ನು ಹರಾಜು ಮಾಡದಿದ್ದುದರ ಕಾರಣ ಉಂಟಾದ ವರಮಾನದ ನಷ್ಟ**

(ಮೊತ್ತ ₹ನಲ್ಲಿ)

| ಅವಧಿ | ಮೌಲ್ಯ [40] | ಶೇಕಡ ಎಂಟರಂತೆ ಅರಣ್ಯ ಅಭಿವೃದ್ಧಿ ತೆರಿಗೆ | ಒಟ್ಟು |
|---|---|---|---|
| 2003–05 | 2,04,83,365 | 16,38,669 | 2,21,22,034 |
| 2005–07 | 2,56,04,206 | 20,48,336 | 2,76,52,542 |
| 2007–09 | 3,20,05,258 | 25,60,421 | 3,45,65,679 |
| 2009–11 | 4,00,06,573 | 32,00,526 | 4,32,07,099 |
| **ಒಟ್ಟು** | **11,80,99,402** | **94,47,952** | **12,75,47,354** |

ಇದನ್ನು ಸ್ಪಷ್ಟಪಡಿಸಿದನಂತರ, ಮಂಗಳೂರಿನ ಅರಣ್ಯಗಳ ಉಪ ಸಂರಕ್ಷಣಾ ಅಧಿಕಾರಿಗಳು ಈ ಕೆಳಗಿನ ಅಂಶಗಳನ್ನು ತಿಳಿಸಿದರು:

- ಉನ್ನತ ಅಧಿಕಾರಿಗಳ ಜೊತೆಗಿನ ಪತ್ರ ವ್ಯವಹಾರದಲ್ಲಿನ ಹಾಗೂ ಹೊರತೆಗೆಯಲು ಸೂಕ್ತ ಮರಗಳ ಪಟ್ಟಿ ಮಾಡುವಲ್ಲಿನ ವಿಳಂಬದ ಕಾರಣ ಹೊರತೆಗೆಯುವ ಹಕ್ಕುಗಳನ್ನು ಹರಾಜು ಮಾಡಲಾಗಲಿಲ್ಲ.
- ಹಾಲುಮಡ್ಡಿಯನ್ನು ಮುಂಚಿತವಾಗಿ ಹೊರತೆಗೆಯುವುದರಿಂದ ಮರಗಳಿಗೆ ಹೆಚ್ಚಿನ ಹಾನಿ ಉಂಟಾಗುತ್ತದೆ ಹಾಗೂ ವಿಳಂಬಿತ ಸಂಗ್ರಹಣೆಯು ಮರಗಳಿಂದ ಅಧಿಕ ಫಸಲಿನ ಇಳುವರಿಯಲ್ಲಿ ಫಲಿಸುತ್ತದೆ; ಮತ್ತು
- ಸರ್ಕಾರದ ಆದೇಶದ ಪ್ರಕಾರ ಹಕ್ಕುಗಳನ್ನು ಬೃಹತ್ ಪ್ರಮಾಣದ ವಿವಿದೋದ್ದೇಶ ಸಂಘಗಳಿಗೆ ನೀಡಬೇಕು.

ಈ ಕೆಳಗಿನ ಕಾರಣಗಳಿಂದ ಉತ್ತರವು ಒಪ್ಪುವಂತಿರಲಿಲ್ಲ:

- ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಶಿಫಾರಸಿನ ನಂತರ ಸರ್ಕಾರವು ನಿಷೇಧವನ್ನು ಮಾರ್ಚ್ 2002ರಲ್ಲಿಯೇ ತೆಗೆದುಹಾಕಿದ್ದಿತು, ಆದ್ದರಿಂದ ಪತ್ರ ವ್ಯವಹಾರ ಹಾಗೂ ಪಟ್ಟಿ ಮಾಡುವುದಕ್ಕೆ ಹೆಚ್ಚುಕಡಿಮೆ ಒಂಬತ್ತು ವರ್ಷಗಳ ವಿಪರೀತ ವಿಳಂಬದ ಕಾರಣವನ್ನು ಅಧ್ಯಾರೋಪಿಸುವ ಉತ್ತರವು ಸಮರ್ಥನೀಯವಾಗಿರಲಿಲ್ಲ.
- ಈ ತೋಪುಗಳನ್ನು 1952 ಹಾಗೂ 1990ರ ನಡುವಿನ ಅವಧಿಯಲ್ಲಿ ಬೆಳೆಯಲಾಗಿದ್ದಿತು ಹಾಗೂ ಅನುಮೋದಿತ ಕ್ರಿಯಾ ಯೋಜನೆಯ ಪ್ರಕಾರ ಹೊರತೆಗೆಯುವಿಕೆಗೆ ಪಕ್ವವಾಗಿದ್ದವು. ಹಾನಿಯಿಂದ ರಕ್ಷಿಸಲು, ಟೆಂಡರ್ ಷರತ್ತುಗಳಲ್ಲಿ ಛೇದನದ ಗಾತ್ರವನ್ನು, ಮಿತಿಮೀರಿದ ಹೊರತೆಗೆಯುವಿಕೆಯನ್ನು ಮತ್ತು ಮರಗಳಿಗೆ ಪರಿಣಾಮಕಾರಿ ಹಾನಿಯನ್ನು ತಡೆಯಲು, ನಿರ್ದಿಷ್ಟಪಡಿಸಲಾಗಿತ್ತು.

[40] 2009–11ರ ಅವಧಿಗೆ ಮೌಲ್ಯವನ್ನು 2011–13ರ ಬ್ಲಾಕ್ ಅವಧಿಯ ವರಮಾನವಾಗಿದ್ದ ₹ 5,00,08,216ರ ಶೇಕಡಾ 80ರಷ್ಟು ಎಂದು ಲೆಕ್ಕಹಾಕಲಾಗಿದೆ ಮತ್ತು ಅದರಂತೆಯೇ ಇತರೆ ಬ್ಲಾಕ್ ಅವಧಿಗಳಿಗೆ ಶೇಕಡಾ 20ರಂತೆ ಕಳೆಯುವ ಮೂಲಕ ಲೆಕ್ಕಹಾಕಲಾಗಿದೆ

- ಬೃಹತ್ ಪ್ರಮಾಣದ ವಿವಿಧೋದ್ದೇಶ ಸಂಘಗಳ ಪ್ರದೇಶಗಳನ್ನು ಹೊರತುಪಡಿಸಿ ಇತರೆ ಪ್ರದೇಶಗಳಿಗೆ ಟೆಂಡರ್ ಕರೆಯಬೇಕೆಂದು ಆದೇಶವು ನಿರ್ದಿಷ್ಟಪಡಿಸಿದ್ದಿತಾದ್ದರಿಂದ ಪ್ರದೇಶಗಳ ಬಗ್ಗೆ ಯಾವುದೇ ಗೊಂದಲಗಳಿರಲಿಲ್ಲ.

ಈ ರೀತಿಯಾಗಿ, ಹಾಲುಮಡ್ಡಿಯ ಹೊರತೆಗೆಯುವಿಕೆಯ ಹಕ್ಕುಗಳಿಗಾಗಿ 2003–11ರಿಂದ ಹರಾಜನ್ನು ಹಾಕದಿದ್ದುದು, ಅತ್ಯಂತ ಸಾಂಪ್ರದಾಯಿಕ ರೀತಿಯಲ್ಲಿ ಲೆಕ್ಕ ಹಾಕಿದರೂ ಹಾಗೂ ಕೋಷ್ಟಕ 3.2ರಿಂದ ಎರಡು ವರ್ಷಗಳ ಸರಾಸರಿಯನ್ನು ಮಾತ್ರ ಗಣನೆಗೆ ತೆಗೆದುಕೊಂಡರೂ, ಕೇವಲ ಎರಡು ವರ್ಷಗಳ ಅವಧಿಗೆ ಸಂಭವಿಸಿದ ನಷ್ಟವು ₹ 3.20 ಕೋಟಿ ಆಗುತ್ತದೆ.

ವಿಷಯವನ್ನು ಸರ್ಕಾರಕ್ಕೆ ಜುಲೈ 2014ರಲ್ಲಿ ತಿಳಿಸಲಾಯಿತು; ಅವರ ಉತ್ತರವನ್ನು ನಿರೀಕ್ಷಿಸಲಾಗಿತ್ತು (ಅಕ್ಟೋಬರ್ 2014).

## 3.5 ಹೂಡಿಕೆಯ ದುರ್ನಿರ್ವಹಣೆ

**ಸರ್ಕಾರದ ಸೂಚನೆಗಳ ಕಡೆಗಣಿಸುವಿಕೆ ಮತ್ತು ಅಗತ್ಯ ಕಾರ್ಯಶ್ರದ್ಧೆಯನ್ನು ಚಲಾಯಿಸದಿರುವಿಕೆಯ ಜೊತೆಗೆ ನಿಶ್ಚಿತ ಠೇವಣಿ ದೃಢೀಕರಣ ಪತ್ರಗಳ ಸಂಗ್ರಹಣೆಯಲ್ಲಿ ಅಸಾಮಾನ್ಯ ವಿಳಂಬವು ₹ 10 ಕೋಟಿ ಹೂಡಿಕೆ ಮತ್ತು ₹ 93 ಲಕ್ಷ ಬಡ್ಡಿಯ ನಗದೀಕರಣವಾಗದಿರುವಲ್ಲಿ ಫಲಿಸಿತು.**

ಸಾರ್ವಜನಿಕ ವಲಯದ ಸಂಸ್ಥೆಗಳು ತಮ್ಮಲ್ಲಿರುವ ಹೆಚ್ಚುವರಿ ನಿಧಿಯನ್ನು ಹೂಡಿಕೆ ಮಾಡುವುದಕ್ಕಾಗಿ, ಸರ್ಕಾರವು ನವೆಂಬರ್ 2009ರಲ್ಲಿ ಸವಿವರ ನಿರ್ದೇಶನಗಳನ್ನು ನೀಡಿದ್ದಿತು, ಅದು ಇನ್ನಿತರ ವಿಷಯಗಳ ಜೊತೆಗೆ, ಈ ನಿಧಿಯನ್ನು ಹೇಗೆ ಹೂಡಿಕೆ ಮಾಡಬೇಕು ಎನ್ನುವುದನ್ನು ನಿರ್ಧರಿಸಲು ಹಣಕಾಸು/ಹೂಡಿಕೆ ಸಮಿತಿಯನ್ನು ರಚಿಸುವಂತೆ ನಿರ್ದಿಷ್ಟಪಡಿಸಿದ್ದಿತು. ಅಂತಹ ಸಮಿತಿಯು ಕೈಗೊಂಡಂತಹ ಪ್ರತಿಯೊಂದು ಹೂಡಿಕೆ ನಿರ್ಣಯವನ್ನೂ ನಿರ್ದೇಶಕರ ಮಂಡಳಿಯು ಅದರ ಮುಂದಿನ ಸಭೆಯಲ್ಲಿ ಸ್ಥಿರೀಕರಿಸಬೇಕಿದ್ದಿತು.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು (ಮಂಡಳಿ), ಹಣವನ್ನು ಠೇವಣಿ ಇಡುವಂತೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಬೆಂಗಳೂರು ಪ್ರಧಾನ ಶಾಖೆಯ ಸಹಾಯಕ ಮಹಾ ವ್ಯವಸ್ಥಾಪಕರು ಮಾಡಿದ ಕೋರಿಕೆಯ ಮೇರೆಗೆ (06 ಮೇ 2013), ಕಾರ್ಪೋರೇಷನ್ ಬ್ಯಾಂಕ್‌ನ ಮೇಲೆ ಹೊರಸೆಳೆದಿದ್ದ ಪ್ರತಿಯೊಂದೂ ₹ ಐದು ಕೋಟಿಯ ಎರಡು ಚೆಕ್‌ಗಳನ್ನು ನೀಡಿತು (16 ಮೇ 2013). ಪ್ರತಿಯೊಂದೂ ₹ ಒಂದು ಕೋಟಿಯ 10 ನಿಶ್ಚಿತ ಅವಧಿ ಠೇವಣಿ ಪ್ರಮಾಣ ಪತ್ರಗಳನ್ನು ನೀಡುವಂತೆ ಚೆಕ್‌ಗಳನ್ನು ರವಾನಿಸಲಾಗಿದ್ದ 16 ಮೇ 2013ರ ಪತ್ರಗಳು ನಿರ್ದಿಷ್ಟಪಡಿಸಿದ್ದವು. ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಲ್ಲಿ ಚೆಕ್‌ಗಳು 17 ಮೇ 2013ರಂದೇ ನಗದೀಕರಣಗೊಂಡರೂ, ನಿಶ್ಚಿತ ಅವಧಿ ಠೇವಣಿ ಪ್ರಮಾಣ ಪತ್ರಗಳನ್ನು ತಕ್ಷಣ ನೀಡಲಿಲ್ಲ. ತದನಂತರ, 26 ಜುಲೈ 2013ರಂದು ಮಂಡಳಿಯು, ನಿಶ್ಚಿತ ಅವಧಿ ಠೇವಣಿ ಪ್ರಮಾಣ ಪತ್ರಗಳ ನೀಡಿಕೆಗಾಗಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರನ್ನು ಸಂಪರ್ಕಿಸಿತು. ಮಂಡಳಿಯು ಒಂದು ವರ್ಷದ ಅವಧಿಯ ಹಾಗೂ ವಾರ್ಷಿಕ ಶೇಕಡಾ ಒಂಬತ್ತು ಬಡ್ಡಿ ಒಳಗೊಂಡ ಪ್ರತಿಯೊಂದೂ ₹ ಐದು ಕೋಟಿ ಮೊತ್ತದ ಎರಡು ನಿಶ್ಚಿತ ಅವಧಿ ಠೇವಣಿ ಪ್ರಮಾಣ ಪತ್ರಗಳನ್ನು 3 ಆಗಸ್ಟ್ 2013ರಂದು ಸ್ವೀಕರಿಸಿತು; ಇವು 17 ಮೇ 2014ರಂದು ವಾಯಿದೆ ಮುಗಿಯುತ್ತಿದ್ದವು.

ಮಂಡಳಿಯು, ನಿಶ್ಚಿತ ಅವಧಿ ಠೇವಣಿ ಪ್ರಮಾಣ ಪತ್ರಗಳನ್ನು ಲಗತ್ತಿಸಿದ 17 ಮೇ 2014ರ ಪತ್ರದ ಮೂಲಕ, ಆದಾಯವನ್ನು ಕಾರ್ಪೋರೇಷನ್ ಬ್ಯಾಂಕ್‌ನ ತನ್ನ ಖಾತೆಗೆ ಜಮೆ ಮಾಡುವಂತೆ ಸ್ಟೇಟ್

ಬ್ಯಾಂಕ್ ಆಫ್ ಮೈಸೂರನ್ನು ಕೋರಿತು. ಆದರೆ, ಮಂಡಳಿಯು ಪಡೆದಿದ್ದ ಸಾಲವನ್ನು ಬಡ್ಡಿಯ ಸಮೇತ ಅಂದರೆ ಒಟ್ಟು ₹ 9.64 ಕೋಟಿಯನ್ನು[41] ಕಳೆದನಂತರ ನಿಶ್ಚಿತ ಅವಧಿ ಠೇವಣಿ ಪ್ರಮಾಣ ಪತ್ರಗಳ ಆದಾಯವನ್ನು ಜಮೆ ಮಾಡಲಾಗುವುದೆಂದು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ತಿಳಿಸಿತು (20 ಮೇ 2014). ಮಂಡಳಿಯು, ತಾನು ಯಾವುದೇ ಸಾಲವನ್ನು ಬಳಸಿಕೊಂಡಿರುವ ಬಗ್ಗೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಹೇಳಿಕೆಯನ್ನು ತಿರಸ್ಕರಿಸಿತು (22 ಮತ್ತು 26 ಮೇ 2014ರ ಪತ್ರಗಳು) ಮತ್ತು ಮಂಡಳಿಯಿಂದ ಸಾಲ ಬಳಸಿಕೊಂಡಿರುವುದಕ್ಕೆ ದಾಖಲೆಗಳ ಸಾಕ್ಷ್ಯಾಧಾರಗಳನ್ನು ಕೋರಿತು. ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ದಾಖಲೆಗಳ ಪ್ರತಿಗಳನ್ನು ಒದಗಿಸಿತು (29 ಮೇ 2014), ಅವುಗಳು ನಕಲಿ ದಾಖಲೆಗಳು ಹಾಗೂ ಬ್ಯಾಂಕ್ ಅಧಿಕಾರಿಗಳಿಂದ ಕೃತ್ರಿಮವಾಗಿ ರಚಿಸಲ್ಪಟ್ಟವುಗಳು ಎಂದು ಮಂಡಳಿಯು ವಾದಿಸಿತು. ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಕೂಡ, ಮಂಡಳಿಗೆ ಬರೆದ ತನ್ನ ಪತ್ರದಲ್ಲಿ (26 ಮೇ 2014), ಮಂಡಳಿಯು ನಿಶ್ಚಿತ ಅವಧಿ ಠೇವಣಿ ಪ್ರಮಾಣ ಪತ್ರಗಳ ಬಣ್ಣದ ಛಾಯಾ ಪ್ರತಿಗಳನ್ನು ಲಗತ್ತಿಸಿದೆಯೇ ಹೊರತು ಮೂಲ ನಿಶ್ಚಿತ ಅವಧಿ ಠೇವಣಿ ಪ್ರಮಾಣ ಪತ್ರಗಳಲ್ಲ; ಅವು ತನ್ನ ಬಳಿ ಲಭ್ಯವಿರುವುದಾಗಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಸಾಧಿಸಿತು.

ಮಂಡಳಿಯು ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ವಿರುದ್ಧವಾಗಿ ಒಂದು ಪ್ರಥಮ ಮಾಹಿತಿ ವರದಿಯನ್ನು 29 ಮೇ 2014ರಂದು ಬೆಂಗಳೂರಿನ ಉಪ್ಪಾರಪೇಟೆ ಆರಕ್ಷಕ ಠಾಣೆಯ ಸ್ಥಾನಿಕ ಅಧಿಕಾರಿಗಳಿಗೆ ಸಲ್ಲಿಸಿ, ಘಟನೆಗಳನ್ನು ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ನಿಶ್ಚಿತ ಅವಧಿ ಠೇವಣಿಗಳ ಮೊತ್ತಗಳನ್ನು ಜಮೆ ಮಾಡದಿರುವ ಬಗ್ಗೆ ವಿವರಣೆ ನೀಡಿತು.

ಸೆಪ್ಟಂಬರ್ 2014ರಲ್ಲಿದ್ದಂತೆ, ಹೂಡಿಕೆಯ ಆದಾಯ ಹಾಗೂ ಅವುಗಳ ಮೇಲಿನ ಬಡ್ಡಿಯು ನಗದೀಕರಣಗೊಂಡಿರಲಿಲ್ಲ. ಈ ಸಂಬಂಧವಾಗಿ ಈ ಕೆಳಗಿನ ನಿಯಮಬಾಹಿರತೆಗಳನ್ನು ಗಮನಿಸಲಾಯಿತು:

- ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಲ್ಲಿ 16 ಮೇ 2013ರಂದು ಮಾಡಲಾದ ₹ 10 ಕೋಟಿ ಹೂಡಿಕೆಯು ಸರ್ಕಾರದಿಂದ ನೀಡಲ್ಪಟ್ಟಿದ್ದ (27 ನವೆಂಬರ್ 2009) ನಿರ್ದೇಶನಗಳ ಪ್ರಕಾರ ಅಗತ್ಯವಿದ್ದಂತೆ ಮಂಡಳಿಯ ನಿರ್ದೇಶಕರ ಮಂಡಳಿಯಿಂದ ಅನುಮೋದಿಸಲ್ಪಟ್ಟಿರಲಿಲ್ಲ.
- ಮಂಡಳಿಯು ಪ್ರತಿಯೊಂದೂ ₹ ಒಂದು ಕೋಟಿಯ 10 ನಿಶ್ಚಿತ ಅವಧಿ ಠೇವಣಿ ಪ್ರಮಾಣ ಪತ್ರಗಳನ್ನು ನೀಡುವಂತೆ ನಿರ್ದಿಷ್ಟಪಡಿಸಿದ್ದಿತು, ಅದಕ್ಕೆ ಪ್ರತಿಯಾಗಿ ಮಂಡಳಿಯು ಪ್ರತಿಯೊಂದು ₹ ಐದು ಕೋಟಿಯ ಎರಡು ನಿಶ್ಚಿತ ಅವಧಿಯ ಪ್ರಮಾಣ ಪತ್ರಗಳನ್ನು ಸಂಗ್ರಹಿಸಿತು. ಈ ರೀತಿಯಾಗಿ ನಿರ್ದೇಶನಗಳಿಗೆ ವಿರುದ್ಧವಾಗಿ ನಿಶ್ಚಿತ ಅವಧಿ ಠೇವಣಿ ಪ್ರಮಾಣ ಪತ್ರಗಳನ್ನು ಸ್ವೀಕರಿಸಿದ್ದುದು ಸರಿಯಾಗಿರಲಿಲ್ಲ ಹಾಗೂ ಹೊರಸೆಳೆಯುವಿಕೆಯ ಸಂಭಾವ್ಯತೆಯನ್ನು ಅದು ಕಡಿಮೆಗೊಳಿಸಿದ್ದಿತು.
- ವಾಯಿದೆಯು ಮುಕ್ತಾಯಗೊಂಡನಂತರ ಮಂಡಳಿಯು, ತಾನು ಪಡೆದುಕೊಂಡಿದ್ದ ನಿಶ್ಚಿತ ಅವಧಿ ಠೇವಣಿ ಪ್ರಮಾಣಪತ್ರಗಳನ್ನು ಲಗತ್ತಿಸುವ ಮೂಲಕ ಆದಾಯವನ್ನ ಜಮೆ ಮಾಡುವಂತೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರನ್ನು ಕೋರಿತು (17 ಮೇ 2014 ದಿನಾಂಕದ ಪತ್ರ). ಆದರೆ, ಲಗತ್ತಿಸಲಾಗಿರುವ ನಿಶ್ಚಿತ ಅವಧಿ ಠೇವಣಿ ಪ್ರಮಾಣಪತ್ರಗಳು ಬಣ್ಣದ ಛಾಯಾ ಪ್ರತಿಗಳೇ ಹೊರತು ಮೂಲ ಪ್ರಮಾಣ ಪತ್ರಗಳಲ್ಲ ಎಂದು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ತಿಳಿಸಿತು. ಮಂಡಳಿಯು, ಈ ಹಕ್ಕು ಸಾಧನೆಯನ್ನು ಪ್ರತಿಭಟಿಸಲಿಲ್ಲ.

[41] ಸಾಲದ ಅಸಲು ₹ 9 ಕೋಟಿ ಹಾಗೂ ಬಡ್ಡಿ ₹ 64 ಲಕ್ಷ

ನಾವು ಮೇಲಿನ ಘಟನೆಗಳಿಂದ ಈ ಕೆಳಗಿನ ಅಂಶಗಳನ್ನು ಗಮನಿಸಿದೆವು:

- ❖ ಮಂಡಳಿಯು ಅಗತ್ಯ ಕಾರ್ಯತತ್ಪರತೆ ಮತ್ತು ಚುರುಕುತನವನ್ನು ತೋರಿಸಲಿಲ್ಲ ಏಕೆಂದರೆ ಎರಡು ತಿಂಗಳಿಗೂ ಮೀರಿದ ವಿಳಂಬದೊಂದಿಗೆ ನಿಶ್ಚಿತ ಅವಧಿ ಠೇವಣಿ ಪ್ರಮಾಣ ಪತ್ರಗಳನ್ನು ಪಡೆದುಕೊಳ್ಳುವಲ್ಲಿ ಅಸಡ್ಡೆಯಿದ್ದಿತು, ಅವು ಕೇವಲ ಬಣ್ಣದ ಛಾಯಾ ಪ್ರತಿಗಳಾಗಿದ್ದವು.
- ❖ ಮಂಡಳಿಯ ನಿರ್ದೇಶಕರ ಮಂಡಳಿಯು, ಈ ಕೆಳಗಿನವುಗಳಿಗೆ ಕಾರಣಗಳನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಯಾವುದೇ ಆಂತರಿಕ ಅಥವಾ ಇಲಾಖಾ ತನಿಖೆಯನ್ನು ಕೈಗೊಳ್ಳಲಿಲ್ಲ:
  - (ಅ) ಹೂಡಿಕೆ ಸಮಿತಿಯಿಂದ ಮಾಡಲಾದ ಹೂಡಿಕೆಗೆ ಸ್ಥಿರೀಕರಣ ಪಡೆಯದಿರುವುದು;
  - (ಆ) ಹೂಡಿಕೆಯಲ್ಲಿ ಮಾರ್ಗಪಲ್ಲಟ, ಏಕೆಂದರೆ ಪ್ರತಿಯೊಂದೂ ₹ ಒಂದು ಕೋಟಿಯ 10 ನಿಶ್ಚಿತ ಅವಧಿ ಪ್ರಮಾಣ ಪತ್ರಗಳನ್ನು ನೀಡುವಂತೆ ಮಾಡಲಾಗಿದ್ದ ನಿರ್ದೇಶನಗಳಿಗೆ ಪ್ರತಿಯಾಗಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಪ್ರತಿಯೊಂದು ₹ ಐದು ಕೋಟಿಯ ಎರಡು ನಿಶ್ಚಿತ ಅವಧಿ ಠೇವಣಿ ಪ್ರಮಾಣ ಪತ್ರಗಳನ್ನು ನೀಡಿದ್ದಿತು;
  - (ಇ) ಮಂಡಳಿಯಿಂದ ನಿಶ್ಚಿತ ಅವಧಿ ಠೇವಣಿ ಪ್ರಮಾಣ ಪತ್ರಗಳ ಸಂಗ್ರಹಣೆಯಲ್ಲಿ ವಿಳಂಬ.

ವಿಷಯವನ್ನು ಸರ್ಕಾರಕ್ಕೆ ತಿಳಿಸಲಾಗಿ, ಸುಳ್ಳು ಹಾಗೂ ನಕಲಿ ಸಹಿಯ ದಾಖಲೆಗಳನ್ನು ಸೃಷ್ಟಿಸುವ ಮೂಲಕ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ವಂಚಿಸಿದೆ ಎನ್ನುವ ಮಂಡಳಿಯ ಉತ್ತರಗಳ ಮೇಲೆ ಸರ್ಕಾರವು ತನ್ನ ಅಭಿಪ್ರಾಯವನ್ನು ತಿಳಿಸಿತು (ಆಗಸ್ಟ್ 2014). ಸರ್ಕಾರವು ಮುಂದುವರೆದು, ನಿಶ್ಚಿತ ಅವಧಿ ಠೇವಣಿ ಪ್ರಮಾಣ ಪತ್ರಗಳನ್ನು ಪಡೆದುಕೊಳ್ಳುವಲ್ಲಿ ನ್ಯಾಯಸಮ್ಮತವಲ್ಲದ ವಿಳಂಬವಿದ್ದಿತು, ಹೂಡಿಕೆಯನ್ನು ಮಂಡಳಿಯ ಅನುಮೋದನೆಯಿಲ್ಲದೆಯೇ ಮಾಡಲಾಗಿದ್ದಿತು ಹಾಗೂ ಮೂಲ ನಿಶ್ಚಿತ ಅವಧಿ ಠೇವಣಿ ಪ್ರಮಾಣ ಪತ್ರಗಳನ್ನು ಪಡೆದುಕೊಳ್ಳುವಲ್ಲಿ ಮಂಡಳಿಯ ಸಿಬ್ಬಂದಿಯ ಅಸಡ್ಡೆಯಿದ್ದಿತು, ಆದ್ದರಿಂದ, ತಮ್ಮ ಜವಾಬ್ದಾರಿಯಿಂದ ತಾವೇ ಮುಕ್ತರಾಗಲು ಮಂಡಳಿಯು ನೀಡಿರುವ ಉತ್ತರವನ್ನು ಸರ್ಕಾರವು ಒಪ್ಪಿಕೊಂಡಿಲ್ಲ ಎಂದು ಸಹಾ ತಿಳಿಸಿತು.

ಹೀಗೆ, ಮಂಡಳಿಯಿಂದ ಸರ್ಕಾರದ ನಿರ್ದಿಷ್ಟ ಸವಿವರ ನಿರ್ದೇಶನಗಳ ಕಡೆಗಣನೆ ಮತ್ತು ಅರ್ಹ ಕಾರ್ಯತತ್ಪರತೆಯ ಶೂನ್ಯ ಚಲಾವಣೆಯು, ₹ 10 ಕೋಟಿ ಹೂಡಿಕೆಯ ಹಾಗೂ ಅದರ ಮೇಲಿನ ಬಡ್ಡಿ ₹ 93 ಲಕ್ಷದ (ನಿಶ್ಚಿತ ಅವಧಿ ಠೇವಣಿಗಳ ವಾಯಿದೆ ಮುಗಿಯುವ ದಿನಾಂಕದವರೆಗೆ) ಶೂನ್ಯ ನಗದೀಕರಣದಲ್ಲಿ ಪರಿಣಮಿಸಿತು.

**ಮೂಲಸೌಕರ್ಯ ಅಭಿವೃದ್ಧಿ ಇಲಾಖೆ**

## 3.6 ನಿಷ್ಫಲ ವೆಚ್ಚ

**ಅಸಮರ್ಪಕ ಯೋಜನೆ ಹಾಗೂ ನಾಗರಿಕ ವಾಯುಯಾನ ಸೇವೆಗಳನ್ನು ಪ್ರಾರಂಭಿಸಲು ಅಗತ್ಯವಿದ್ದ ಕಾರ್ಯವಿಧಾನಗಳು ಪೂರ್ಣಗೊಳ್ಳುವ ಮೊದಲು ನಿಧಿಯನ್ನು ಬಿಡುಗಡೆ ಮಾಡುವಲ್ಲಿ ಅನುಚಿತ ಆತುರವು ₹ 3.02 ಕೋಟಿಯ ನಿಷ್ಫಲ ವೆಚ್ಚವಾಗುವಲ್ಲಿ ಹಾಗೂ ₹ 2.60 ಕೋಟಿಯು ತಡೆಹಿಡಿಯುವಲ್ಲಿ ಪರಿಣಮಿಸಿತು.**

ಕರ್ನಾಟಕ ಸರ್ಕಾರವು, ಪ್ರಸ್ತುತ ಇರುವಂತಹ ವಿಮಾನ–ಹಾದಿಯನ್ನು ಅಭಿವೃದ್ಧಿಪಡಿಸುವ ಹಾಗೂ *ಗುರ್–ತ–ಗದ್ದಿ*[42] ಸಂದರ್ಭದಲ್ಲಿ ನಾಗರಿಕ ವಾಯುಯಾನ ಸೇವೆಗಳನ್ನು ಪ್ರಾರಂಭಿಸುವ ಉದ್ದೇಶದಿಂದ, ಬೀದರ್‌ನ ರಕ್ಷಣಾ ಇಲಾಖೆಯ ವಿಮಾನ ನಿಲ್ದಾಣದ[43] ಹತ್ತಿರ ಒಂದು ಟರ್ಮಿನಲ್ ಕಟ್ಟಡದ ನಿರ್ಮಾಣಕ್ಕಾಗಿ ₹ ಮೂರು ಕೋಟಿ ಮೊತ್ತವನ್ನು ಮಂಜೂರು ಮಾಡಿದ್ದಿತು (ಜೂನ್ 2008). ರಕ್ಷಣಾ ಇಲಾಖೆಯ ವಿಮಾನ ನಿಲ್ದಾಣವು, ಒಂದು ಖಾಸಗಿ ಸಂಸ್ಥೆಯಾದ ಸಾರ್ವಜನಿಕ ಖಾಸಗಿ ಪಾಲುದಾರಿಕೆ ವಿಧಾನದಲ್ಲಿನ ಜಿಎಂಆರ್ ಹೈದರಾಬಾದ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತದಿಂದ (ಜಿಎಚ್‌ಐಎಎಲ್) ಕಾರ್ಯಾಚರಣೆ ಮಾಡಲ್ಪಡುತ್ತಿರುವ (ಮಾರ್ಚ್ 2008ರಿಂದ) ಹೈದರಬಾದಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ 150 ಕಿಮೀಗಳ ಒಳಗೆ ಇದೆ. ತಾತ್ಕಾಲಿಕ ಟರ್ಮಿನಲ್ ಕಟ್ಟಡದ ವಿವಿಧ ಕಾಮಗಾರಿಗಳಿಗಾಗಿನ ಯೋಜನೆಯ ಆವಿಷ್ಕಾರ, ಉತ್ಕರ್ಷಣೆ ಹಾಗೂ ಅಂದಾಜುಗಳಿಗಾಗಿ ಭಾರತೀಯ ವಿಮಾನನಿಲ್ದಾಣ ಪ್ರಾಧಿಕಾರದಿಂದ ಅನುಮೋದನೆಯನ್ನು ಪಡೆದುಕೊಂಡ (ಜೂನ್ 2008) ಬೀದರ್‌ನ ಜಿಲ್ಲಾಧಿಕಾರಿಯವರಿಗೆ ಮೊತ್ತವನ್ನು ಬಿಡುಗಡೆಗೊಳಿಸಲಾಗಿದ್ದಿತು. ಬೀದರ್‌ನ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರು ಕಾಮಗಾರಿಯನ್ನು ಟೆಂಡರ್ ಆಧಾರದ ಮೇರೆಗೆ ಒಂದು ಸಂಸ್ಥೆಗೆ ₹ 3.05 ಕೋಟಿಗೆ ಅಕ್ಟೋಬರ್ 2008ರ ವೇಳೆಗೆ ಪೂರ್ಣಗೊಳಿಸಬೇಕೆಂಬ ಷರತ್ತಿನ ಮೇರೆಗೆ ನೀಡಿದರು (ಜುಲೈ 2008). ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆಯ ಮೂಲಕ ಕಾರ್ಯಗತಗೊಳಿಸಲ್ಪಟ್ಟ ಕಾಮಗಾರಿಯು ₹ 3.02 ಕೋಟಿ ಒಟ್ಟು ವೆಚ್ಚದಲ್ಲಿ ಜೂನ್ 2009ರಲ್ಲಿ ಪೂರ್ಣಗೊಂಡಿದ್ದಿತು ಹಾಗೂ ಅಂತಿಮ ಬಿಲ್ಲನ್ನು ಜನವರಿ 2012ರಲ್ಲಿ ಪಾವತಿಸಲಾಗಿದ್ದಿತು. ಆದಾಗ್ಯೂ, ಜಿಲ್ಲಾಧಿಕಾರಿಯವರು, ತಾತ್ಕಾಲಿಕ ಟರ್ಮಿನಲ್ ಕಟ್ಟಡದ ನಿರ್ಮಾಣಕ್ಕಾಗಿ ಭೂಮಿಯನ್ನು ಇನ್ನೂ ಸ್ವಾಧೀನಪಡಿಸಿಕೊಳ್ಳಬೇಕಾಗಿದ್ದಿತು (ಮಾರ್ಚ್ 2014).

ಮುಂದುವರೆದು, ಕರ್ನಾಟಕ ಸರ್ಕಾರವು ನಾಗರಿಕ ಭೂಭಾಗವನ್ನು[44] ಅಭಿವೃದ್ಧಿಪಡಿಸುವುದಕ್ಕಾಗಿ ಸ್ವಾಧೀನಪಡಿಸಿಕೊಳ್ಳಬೇಕಾದ 125 ಎಕರೆಗಳಷ್ಟು ಭೂಮಿಯನ್ನು ಬೀದರ್‌ನಲ್ಲಿ ಗುರುತಿಸಿತು ಹಾಗೂ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಗೆ ₹ 2.60 ಕೋಟಿ ಮೊತ್ತವನ್ನು ಬಿಡುಗಡೆ ಮಾಡಿತು (ಜುಲೈ 2007 ಹಾಗೂ ಏಪ್ರಿಲ್ 2008). ಆದಾಗ್ಯೂ, ಈ ಭೂಮಿಯು ಇನ್ನೂ ಸ್ವಾಧೀನವಾಗಬೇಕಿದ್ದಿತು (ಮಾರ್ಚ್ 2014).

---

[42] ಶ್ರೀ ಗುರು ಗ್ರಂಥ ಸಾಹಿಬ್‌ಜೀಯವರ 300ನೇ ವರ್ಧ್ಯಂತೋತ್ಸವ ಹಾಗೂ ಶ್ರೀ ಗುರು ಗೋವಿಂದ ಸಿಂಗ್‌ಜೀಯವರ ಪುಣ್ಯ ತಿಥಿ – ಅಕ್ಟೋಬರ್/ನವೆಂಬರ್ 2008

[43] ರಕ್ಷಣಾ ಮಂತ್ರಾಲಯದ ತಾತ್ವಿಕ ಅನುಮೋದನೆಯನ್ನು ನವೆಂಬರ್ 2006ರಲ್ಲಿ ಪಡೆದುಕೊಳ್ಳಲಾಗಿದ್ದಿತು

[44] ವಿಮಾನ ನಿಲ್ದಾಣದಿಂದ ಯಾವುದೇ ವಿಮಾನ ಸಾರಿಗೆ ಸೇವೆಗಳನ್ನು ಬಳಸಿಕೊಳ್ಳುವ ಯಾವುದೇ ವ್ಯಕ್ತಿಗಳು ಬಳಸಿಕೊಳ್ಳುವುದಕ್ಕಾಗಿ ಅಥವಾ ಸರಕುಸಾಮಗ್ರಿಗಳನ್ನು ಅಥವಾ ಮಾಲುಗಳನ್ನು ನಿರ್ವಹಿಸುವುದಕ್ಕಾಗಿ ಕೇಂದ್ರದ ಯಾವುದೇ ರಕ್ಷಣಾ ಸಿಬ್ಬಂದಿಗೆ ಸಂಬಂಧಿಸಿರುವ ಒಂದು ವಿಮಾನ ನಿಲ್ದಾಣಕ್ಕೆ ಹಂಚಿಕೆ ಮಾಡಲಾಗಿರುವ ಪ್ರದೇಶ ಹಾಗೂ ಅಂತಹ ಪ್ರದೇಶದಲ್ಲಿ ಇರುವ ಯಾವುದೇ ಕಟ್ಟಡ ಅಥವಾ ನಿರ್ಮಾಣಗಳನ್ನು ಒಳಗೊಂಡಿರುತ್ತದೆ

ತಾತ್ಕಾಲಿಕ ಟರ್ಮಿನಲ್ ಕಟ್ಟಡವು ಕಾರ್ಯಕ್ರಮ ಅಂದರೆ *ಗುರ್–ತ–ಗದ್ದಿ* ಮುಕ್ತಾಯವಾದ ನಂತರ ಜೂನ್ 2009ರಲ್ಲಿ ಪೂರ್ಣಗೊಂಡಿತು, ಆದರೆ ಜಿಎಚ್ಐಎಎಲ್ ಆಕ್ಷೇಪಣೆ ವ್ಯಕ್ತಪಡಿಸಿದ್ದರಿಂದ ಸೃಷ್ಟಿಸಲಾಗಿದ್ದ ಮೂಲಭೂತಸೌಕರ್ಯವನ್ನು ಬಳಸಿಕೊಳ್ಳಲಾಗಲಿಲ್ಲ.

ತಾತ್ಕಾಲಿಕ ಟರ್ಮಿನಲ್ ಕಟ್ಟಡವನ್ನು ನಿರ್ಮಿಸಿ ಐದು ವರ್ಷಗಳೇ ಕಳೆದರೂ ಸಹ, ಈ ಕೆಳಗಿನ ಲೋಪದೋಷಗಳು ಸೃಷ್ಟಿಸಲಾದ ಆಸ್ತಿಯನ್ನು ಬಳಸಿಕೊಳ್ಳದಿರುವಲ್ಲಿ ಪರಿಣಮಿಸಿತು:

- ತಾತ್ಕಾಲಿಕ ಟರ್ಮಿನಲ್ ಕಟ್ಟಡಕ್ಕೆ ನಿಧಿಯನ್ನು ಬಿಡುಗಡೆ ಮಾಡುವ ಮೊದಲು ಪ್ರಸ್ತಾವಿತ ನಾಗರಿಕ ಭೂಬಾಗದಲ್ಲಿ ವಾಯು ಸಂಚಾರ/ವಾಯು ಸಾರಿಗೆ ಅನುಕೂಲತೆಯನ್ನು ಒದಗಿಸುವ ಸಲುವಾಗಿ ಭಾರತೀಯ ವಿಮಾನನಿಲ್ದಾಣ ಪ್ರಾಧಿಕಾರದ ಜೊತೆ ಯಾವುದೇ ಪರಸ್ಪರ ತಿಳುವಳಿಕೆ ಪತ್ರ/ ಒಪ್ಪಂದವನ್ನು ಮಾಡಿಕೊಳ್ಳಲಿಲ್ಲ.
- ಬೀದರ್‌ನಲ್ಲಿರುವ ರಕ್ಷಣಾ ಇಲಾಖೆಯ ವಿಮಾನ ನಿಲ್ದಾಣವು ಹೈದರಾಬಾದಿನ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಿಂದ 150 ಕಿಮೀಗಳ ಒಳಗೆ ಇರುವುದರಿಂದ, ರಿಯಾಯಿತಿ ಒಡಂಬಡಿಕೆಯ ಷರತ್ತು 5.2.2ರ ಪ್ರಕಾರ ಹೈದರಾಬಾದಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರದ ರಿಯಾಯಿತಿದಾರರಿಂದ (ಜಿಎಚ್ಐಎಎಲ್) ಯಾವುದೇ ಆಕ್ಷೇಪಣೆ ಇರುವುದಿಲ್ಲ ಎಂದು ಪ್ರಮಾಣ ಪತ್ರವನ್ನು ಪಡೆದುಕೊಳ್ಳುವ ಅಗತ್ಯವಿತ್ತು. ಅಂತಹ ವಿಶಿಷ್ಟತೆಗಳು ಅಂತಹ ರಿಯಾಯಿತಿ ಒಪ್ಪಂದಗಳಿಗೆ ಸಾಮಾನ್ಯವಾಗಿರುತ್ತವೆ ಹಾಗೂ ಅಂತಹ ಷರತ್ತು ಜುಲೈ 2004ರಲ್ಲಿ ಕಾರ್ಯಗತಗೊಳಿಸಲಾದ ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಬಂಧಿಸಿದಂತೆ ಇದ್ದುದರಿಂದ ಕರ್ನಾಟಕ ಸರ್ಕಾರದ ಅರಿವಿನಲ್ಲಿರಬೇಕಿದ್ದಿತು. ಕರ್ನಾಟಕ ಸರ್ಕಾರವು ಯಾವುದೇ ಆಕ್ಷೇಪಣೆಯಿಲ್ಲ ಎನ್ನುವ ಅಗತ್ಯ ಪ್ರಮಾಣ ಪತ್ರವನ್ನು ಜಿಎಚ್ಐಎಎಲ್‌ನಿಂದ ಪಡೆದುಕೊಂಡಿರಲಿಲ್ಲ.

ಹೀಗೆ, ದೋಷಪೂರಿತ ಯೋಜನೆ, ನಾಗರಿಕ ವಾಯುಯಾನ ಸೇವೆಗಳನ್ನು ಪ್ರಾರಂಭಿಸುವುದಕ್ಕಾಗಿ ಅಗತ್ಯವಿದ್ದ ಕಾರ್ಯವಿಧಾನಗಳು ಪೂರ್ಣಗೊಳ್ಳುವ ಮೊದಲೇ ನಿಧಿಯನ್ನು ಬಿಡುಗಡೆಗೊಳಿಸುವಲ್ಲಿ ಹಾಗೂ ತಾತ್ಕಾಲಿಕ ಟರ್ಮಿನಲ್ ಕಟ್ಟಡದ ನಿರ್ಮಾಣದಲ್ಲಿ ಅನುಚಿತ ಆತುರವು ₹ 3.02 ಕೋಟಿಯು ನಿಷ್ಫಲ ವೆಚ್ಚವಾಗುವುದರ ಜೊತೆಗೆ ₹ 2.60 ಕೋಟಿಯ ತಡೆಹಿಡಿದಿಡುವಲ್ಲಿ ಪರಿಣಮಿಸಿತು.

ವಿಷಯವನ್ನು ಸರ್ಕಾರಕ್ಕೆ ಜುಲೈ 2014ರಲ್ಲಿ ತಿಳಿಸಲಾಯಿತು; ಅವರ ಉತ್ತರವನ್ನು ನಿರೀಕ್ಷಿಸಲಾಗಿತ್ತು (ಅಕ್ಟೋಬರ್ 2014).

**ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ**

## 3.7 ತಪ್ಪು ವ್ಯಾಖ್ಯಾನದಿಂದ ಅಧಿಕ ಪಾವತಿ

**ಒಂದು ರಸ್ತೆಯ ನಿರ್ಮಾಣಕ್ಕೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ನಿಧಿಗಳನ್ನು ಪಡೆಯುವಲ್ಲಿ ವಿಪರೀತ ವಿಳಂಬವು ₹ 10.56 ಕೋಟಿ ಹೆಚ್ಚುವರಿ ಹೊರೆಯಾಗುವಂತಾಯಿತು. ಬಡ್ಡಿಯನ್ನು ತಪ್ಪಾಗಿ ಲೆಕ್ಕ ಹಾಕಿದ್ದ ಕಾರಣ ಬಡ್ಡಿಯ ಕಡೆಗೆ ₹ 3.96 ಕೋಟಿ ಅಧಿಕ ಪಾವತಿಯಾಗುವಲ್ಲಿ ಪರಿಣಮಿಸಿತು.**

ಸಾರ್ವಜನಿಕ ಉದ್ದೇಶಗಳಿಗಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡಲ್ಲಿ, ಪರಿಹಾರ ಮೊತ್ತದ ಪಾವತಿಯು ವಿಳಂಬವಾಗದಂತೆ ಇಲಾಖಾ ಅಧಿಕಾರಿಗಳು ಗಮನ ಹರಿಸತಕ್ಕದ್ದು ಎಂದು ಕರ್ನಾಟಕ ಹಣಕಾಸು ಸಂಹಿತೆಯ ಕಲಮು 153 ನಿರ್ದಿಷ್ಟಪಡಿಸಿದೆ. ನ್ಯಾಯಾಲಯದ ತೀರ್ಪುಗಳ ಪ್ರಕಾರ ಭೂ ಸ್ವಾಧೀನ ಪಾವತಿಗಳ ತ್ವರಿತ ಇತ್ಯರ್ಥಕ್ಕಾಗಿ, ಸರ್ಕಾರವು ತನ್ನ ಸುತ್ತೋಲೆ ನಿರ್ದೇಶನಗಳನ್ನು (ಮಾರ್ಚ್ 1982 ಹಾಗೂ ಆಗಸ್ಟ್ 1982) ಪುನರುಚ್ಚರಿಸುವ ವೇಳೆಯಲ್ಲಿ (15 ಜನವರಿ 2005)

ಭೂಸ್ವಾಧೀನಾಧಿಕಾರಿಗಳು/ಆಡಳಿತಾತ್ಮಕ ಇಲಾಖೆಗಳ ಮುಖ್ಯಸ್ಥರು, ಜಪ್ತಿ ಆದೇಶಗಳಿಂದ ತಪ್ಪಿಸಿಕೊಳ್ಳಲು ಅಥವಾ ನ್ಯಾಯಾಲಯ ನಿಂದನೆಗಳಿಂದ ತಪ್ಪಿಸಿಕೊಳ್ಳಲು, ಪ್ರಕರಣದ ವಿವರಗಳನ್ನು ಒದಗಿಸಿ ಆರ್ಥಿಕ ಇಲಾಖೆಯಿಂದ ನಿಧಿಯ ತಕ್ಷಣದ ಬಿಡುಗಡೆಗೆ ಕೋರತಕ್ಕದ್ದು ಎಂದು ಸೂಚಿಸಿದ್ದಿತು. ಸಂಪೂರ್ಣ ವಿವರಗಳು ಲಭ್ಯವಿಲ್ಲದಿದ್ದಲ್ಲಿ, ಪ್ರಕರಣವನ್ನು ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿನ ಅಧಿಕಾರಯುಕ್ತ ಸಮಿತಿಗೆ ನಿಧಿಯ ಬಿಡುಗಡೆಗಾಗಿ ಉಲ್ಲೇಖಿಸಲಾಗುವುದು.

ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ವಿಭಾಗ, ಚಿಕ್ಕೋಡಿ, ಇವರು ಭೂಸ್ವಾಧೀನ ಅಧಿನಿಯಮದ (ಅಧಿನಿಯಮ) ಪ್ರಕಾರ ಭೂಸ್ವಾಧೀನವು ಬಾಕಿಯಿದ್ದಂತೆ, ಉಗರ್‌ನಿಂದ ಕುಸ್ನಲ್ ಗ್ರಾಮದವರೆಗೆ ರಸ್ತೆ ನಿರ್ಮಾಣಕ್ಕಾಗಿ ಅಥಣಿ ತಾಲೂಕಿನ ಮೂರು ಗ್ರಾಮಗಳಲ್ಲಿ ವಿವಿಧ ಕಂದಾಯ ಸರ್ವೆ ಸಂಖ್ಯೆಗಳ ಅಡಿಯಲ್ಲಿ 40 ಎಕರೆ 23.5 ಗುಂಟೆ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡಿದ್ದರು (ಮಾರ್ಚ್ 1963). ಭೂಸ್ವಾಧೀನಾಧಿಕಾರಿಗಳು ಭೂಸ್ವಾಧೀನ ಅಧಿನಿಯಮದ ಪರಿಚ್ಛೇದ 11ರ ಪ್ರಕಾರ ಭೂಮಿಯ ಮೌಲ್ಯವನ್ನು ಎಕರೆಯೊಂದಕ್ಕೆ ₹ 6,000ಕ್ಕೆ ನಿಗಧಿಪಡಿಸಿ, ಅಧಿನಿಯಮದನ್ವಯ ಇತರ ಲಾಭಗಳೊಂದಿಗೆ, 31 ಜುಲೈ 1987ರಂದು ತೀರ್ಪು ನೀಡಿದರು.

ಭೂಸ್ವಾಧೀನಾಧಿಕಾರಿಗಳು ನೀಡಿದ ಅಸಮರ್ಪಕ ಭೂ ಪರಿಹಾರ ತೀರ್ಪಿನಿಂದ ಮನನೊಂದ ಭೂ ಮಾಲೀಕರು, ಅಥಣಿಯ ನಗರ ಸಿವಿಲ್ ನ್ಯಾಯಾಲಯದಲ್ಲಿ ಮನವಿ ಸಲ್ಲಿಸಿದರು (ಮಾರ್ಚ್ 1989); ನ್ಯಾಯಾಲಯವು ಪರಿಹಾರದ ಮೊತ್ತವನ್ನು ಎಕರೆಯೊಂದಕ್ಕೆ ₹ 65,000ಕ್ಕೆ ಹೆಚ್ಚಿಸಿತಲ್ಲದೇ (ಜನವರಿ/ಫೆಬ್ರವರಿ 1999) ಹೆಚ್ಚಿಸಲಾದ ಪರಿಹಾರದ ಮೇಲೆ ಶೇಕಡಾ 30ರಷ್ಟು ನಷ್ಟ ಪರಿಹಾರ ಮತ್ತು ಸ್ವಾಧೀನಕ್ಕೆ ತೆಗೆದುಕೊಂಡ ದಿನದಿಂದ ತೀರ್ಪು ನೀಡಿದ ದಿನದವರೆಗೆ ಶೇಕಡಾ 12ರಷ್ಟು ಹೆಚ್ಚುವರಿ ಮಾರುಕಟ್ಟೆ ಮೌಲ್ಯವನ್ನೂ ನೀಡಿತು. ನ್ಯಾಯಾಲಯವು ಅಧಿನಿಯಮದ ಅನುವುಗಳ ಪ್ರಕಾರ, ಸ್ವಾಧೀನಕ್ಕೆ ತೆಗೆದುಕೊಂಡ ದಿನದಿಂದ ಪರಿಹಾರವನ್ನು ಪಾವತಿಸುವ ದಿನದವರೆಗೆ, ಮೊದಲ ವರ್ಷಕ್ಕೆ ಶೇಕಡಾ 9ರಂತೆ ಹಾಗೂ ತದನಂತರದ ಅವಧಿಗೆ ಶೇಕಡಾ 15ರಂತೆ ಭೂಮಾಲೀಕರಿಗೆ ಬಡ್ಡಿ ಪಾವತಿಸಲೂ ಆದೇಶ ನೀಡಿತು.

ನ್ಯಾಯಾಲಯದ ಅದೇಶವನ್ನು ಪ್ರಶ್ನಿಸಿ ಮೇಲ್ಮನವಿಯನ್ನು ಸಲ್ಲಿಸದಂತೆ ಕಾನೂನು ಇಲಾಖೆಯು ಮಾರ್ಚ್/ಮೇ 1999ರಲ್ಲಿ ತನ್ನ ನಿರ್ಣಯವನ್ನು ತಿಳಿಸಿತ್ತು. ನ್ಯಾಯಾಲಯದ ಆದೇಶಗಳ ಪ್ರಕಾರ, ಜೂನ್ 1999ರಲ್ಲಿದ್ದಂತೆ, ಅಗತ್ಯವಿದ್ದ ಮೊತ್ತವು ₹ 6.33 ಕೋಟಿಗೆ[45] ಲೆಕ್ಕಾಚಾರವಾಯಿತು. ಕಾರ್ಯನಿರ್ವಾಹಕ ಇಂಜಿನಿಯರರು, ಎಲ್ಲಾ ಭೂ ಮಾಲೀಕರ ಬೇಡಿಕೆಗಳನ್ನು ಇತ್ಯರ್ಥಗೊಳಿಸಲು ಆರ್ಥಿಕ ಇಲಾಖೆಯಿಂದ ನಿಧಿಯ ಬಿಡುಗಡೆಯನ್ನು ಕೋರಲಿಲ್ಲ. ಅದರ ಬದಲಾಗಿ, ಭೂ ಮಾಲೀಕರು ನ್ಯಾಯಾಲಯದಿಂದ ಪಡೆದ ಜಾರಿ ಆದೇಶಗಳ ಮೇರೆಗೆ ಭೂಸ್ವಾಧೀನಾಧಿಕಾರಿಗಳು ಬೇಡಿಕೆಗಳನ್ನು ಮಂಡಿಸಿದಾಗಲೆಲ್ಲಾ, ಭೂಸ್ವಾಧೀನಾಧಿಕಾರಿಗಳಿಗೆ ಸ್ವಲ್ಪ ಸ್ವಲ್ಪವಾಗಿ ಕಾರ್ಯನಿರ್ವಾಹಕ ಇಂಜಿನಿಯರ್‌ರವರು ಪಾವತಿ ಮಾಡಿದರು. ಪಾವತಿಗಳನ್ನು ಭಾಗಶಃ ಮಾಡಿದ ಪರಿಣಾಮವಾಗಿ, ನ್ಯಾಯಾಲಯದ ಆದೇಶದ 15 ವರ್ಷಗಳ ನಂತರವೂ ಭೂ ಮಾಲೀಕರ ಬಾಕಿಗಳನ್ನು ಸಂಪೂರ್ಣವಾಗಿ ಇತ್ಯರ್ಥಗೊಳಿಸಿರಲಿಲ್ಲ. ಸೆಪ್ಟೆಂಬರ್ 2014ರಲ್ಲಿದ್ದಂತೆ, ಭೂಸ್ವಾಧೀನಾಧಿಕಾರಿಗಳು ಲೆಕ್ಕ ಹಾಕಿದ ಪರಿಹಾರದ ಒಟ್ಟು ಮೊತ್ತವು ₹ 16.89 ಕೋಟಿ ಆಗಿದ್ದಿತು, ಅದರ ಪೈಕಿ ಭೂಸ್ವಾಧೀನಾಧಿಕಾರಿಗಳು ಬೇಡಿಕೆಯಿಟ್ಟಿದ್ದ ₹ 10.84 ಕೋಟಿಯನ್ನು ಕಾರ್ಯನಿರ್ವಾಹಕ ಇಂಜಿನಿಯರ್‌ರವರು ಡಿಸೆಂಬರ್ 2000 ಹಾಗೂ ಏಪ್ರಿಲ್ 2014ರ ನಡುವೆ ಪಾವತಿಸಿದ್ದರು. ಕಾನೂನು ಇಲಾಖೆಯ ಅಭಿಪ್ರಾಯವನ್ನು ಸ್ವೀಕರಿಸಿದ ಕೂಡಲೇ ನಿಧಿಯನ್ನು ಪಡೆಯದಿದ್ದುದು ₹ 10.56 ಕೋಟಿ ಹೆಚ್ಚುವರಿ ಹೊರೆಯಲ್ಲಿ ಪರಿಣಮಿಸಿತು.

---

[45] ಭೂ ಪರಿಹಾರ, ನಷ್ಟಪರಿಹಾರ ಹಾಗೂ ಹೆಚ್ಚುವರಿ ಮಾರುಕಟ್ಟೆ ಮೌಲ್ಯ ಇವುಗಳನ್ನು ಒಳಗೊಂಡಂತೆ ಅಸಲಿನ ಮೊತ್ತವು ₹ 97.92 ಲಕ್ಷ ಹಾಗೂ ಜೂನ್ 1999ರವರೆಗೆ ಬಡ್ಡಿಯು ₹ 5.35 ಕೋಟಿ

ಮುಂದುವರೆದ ಪರಿಶೀಲನೆಯು, ಕಾರ್ಯನಿರ್ವಾಹಕ ಇಂಜಿನಿಯರ್‌ರವರು ಎರಡನೆಯ ಕಂತಿನಿಂದ ಮುಂದಿನ ಪಾವತಿಗಳನ್ನು ಮಾಡುವಾಗ ಬಾಕಿ ಬಡ್ಡಿಯನ್ನೂ ಅಸಲು ಎಂದು ಪರಿಗಣಿಸಿ ಅದರ ಮೇಲೆ ಶೇಕಡಾ 15 ಬಡ್ಡಿಯನ್ನು ಪಾವತಿಸಿದ್ದರು ಎನ್ನುವುದನ್ನು ತೋರಿಸಿತು (ಜನವರಿ 2014). ಇದು ಬಡ್ಡಿಯ ಮೇಲೆ ಬಡ್ಡಿಯನ್ನು ಪಾವತಿಸಿದಂತಾಗುತ್ತದೆ. ಬಾಕಿ ಇರುವ ಬಡ್ಡಿಯ ಮೇಲೆ ಬಡ್ಡಿ ಪಾವತಿಸಲು ಅನುವು ಮಾಡದಿರುವ ಅಧಿನಿಯಮದ ವಿಧಿಗಳನ್ನು ಇದು ಉಲ್ಲಂಘಿಸಿದ್ದಿತು. ಈ ರೀತಿ ತಪ್ಪು ಲೆಕ್ಕ ಹಾಕಿದ ಕಾರಣ, 92 ಪ್ರಕರಣಗಳಲ್ಲಿ ಅಧಿಕ ಪಾವತಿಯು **ಅನುಬಂಧ 3.3**ರಲ್ಲಿ ತೋರಿಸಿರುವಂತೆ ₹ 3.96 ಕೋಟಿಗೆ ಲೆಕ್ಕಾಚಾರವಾಯಿತು.

ಭೂಸ್ವಾಧೀನಾಧಿಕಾರಿಗಳು ಒದಗಿಸಿದ ಲೆಕ್ಕಾಚಾರ ಪತ್ರಗಳ ಪ್ರಕಾರ ಮೊತ್ತವನ್ನು ಠೇವಣಿ ಇಡಲಾಗಿತ್ತು, ಪಾವತಿಗಳನ್ನು ಮಾಡುವ ಮುನ್ನ ಇವು ಕಾರ್ಯನಿರ್ವಾಹಕ ಇಂಜಿನಿಯರರಿಂದ ಪರಿಶೀಲಿಸಲ್ಪಟ್ಟಿದ್ದವು ಎಂದು ಸರ್ಕಾರವು ಉತ್ತರಿಸಿತು (ಸೆಪ್ಟಂಬರ್ 2014). ಮುಂದುವರೆದು, ಬಾಕಿ ಇರುವ ಬಡ್ಡಿಯನ್ನು ಅಸಲಿನ ಮೊತ್ತ ಎಂದು ಪರಿಗಣಿಸಿ, ಬಡ್ಡಿಯನ್ನು ಲೆಕ್ಕ ಹಾಕುವ ವೇಳೆಯಲ್ಲಿ ಬಡ್ಡಿಯೂ ಸೇರಿದಂತೆ ಬಾಕಿಯಿದ್ದ ಮೊತ್ತದ ಮೇಲೆ, ನ್ಯಾಯಲಯದ ಆದೇಶದ ಪ್ರಕಾರ ಲೆಕ್ಕ ಹಾಕಲಾಗಿದ್ದಿತು ಎಂದೂ ಸರ್ಕಾರವು ತಿಳಿಸಿತು. ಆದ್ದರಿಂದ, ಮಾಡಲಾಗಿದ್ದ ಪಾವತಿಯು ಸರಿಯಾಗಿತ್ತು.

ಅಧಿನಿಯಮದ ಪರಿಚ್ಛೇದ 34ರ ಪ್ರಕಾರ ಹಾಗೂ ಅಧಿನಿಯಮದ ಅನುವುಗಳ ಪ್ರಕಾರ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡ ದಿನದಿಂದ ಪಾವತಿ ಮಾಡಿದ ದಿನದವರೆಗೆ ಬಡ್ಡಿ ಪಾವತಿಸುವಂತೆ ನ್ಯಾಯಾಲಯವು ತೀರ್ಪು ನೀಡಿತ್ತು ಹಾಗೂ ಅಧಿನಿಯಮದ ಅನುವುಗಳು ಬಾಕಿ ಇರುವ ಬಡ್ಡಿಯ ಮೇಲೆ ಬಡ್ಡಿಯನ್ನು ಪಾವತಿಸಲು ಅನುವು ಮಾಡಿಲ್ಲವಾದ್ದರಿಂದ ಉತ್ತರವನ್ನು ಒಪ್ಪಲಾಗಲಿಲ್ಲ. ಮಧ್ಯಂತರ ಪಾವತಿಗಳನ್ನು ಪಡೆದ ಭೂ ಮಾಲೀಕರು, ಅಷ್ಟೇ ಭೂಮಿಗೆ ಯಾವುದೇ ಮೊತ್ತ ಪಡೆಯದ ಭೂ ಮಾಲೀಕರುಗಳಿಗಿಂತ ಅಧಿಕವಾಗಿ ಸ್ವೀಕರಿಸಿದ್ದರಾದ್ದರಿಂದ ಬಡ್ಡಿಯನ್ನು ಅಸಲು ಎಂದು ಪರಿಗಣಿಸುವುದು ಒಂದು ತಪ್ಪು ಲೆಕ್ಕ ಹಾಕುವ ಪದ್ಧತಿಯಾಗಿದೆ.

## 3.8 ಅಸಮರ್ಥನೀಯ ವೆಚ್ಚ

**ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸಿದನಂತರ ಅದನ್ನು ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರಕ್ಕೆ ವರ್ಗಾಯಿಸುವ ಬದಲು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು ರಾಜ್ಯದ ಬೊಕ್ಕಸಕ್ಕೆ ₹ 5.40 ಕೋಟಿಯಷ್ಟು ಹೊರೆಯಾಗುವಲ್ಲಿ ಪರಿಣಮಿಸಿತು.**

ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣ ಮತ್ತು ನಿರ್ವಹಣೆಗೆ ನಿಧಿಯನ್ನು ಕೇಂದ್ರ ಸರ್ಕಾರವು ಒದಗಿಸುತ್ತದೆ ಹಾಗೂ ಕಾಮಗಾರಿಗಳನ್ನು ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ರಾಷ್ಟ್ರೀಯ ಹೆದ್ದಾರಿ ವಿಭಾಗಗಳು ಕಾರ್ಯಗತಗೊಳಿಸುತ್ತವೆ.

ಡಿಸೆಂಬರ್ 2009ರಲ್ಲಿ ನಡೆಸಲು ನಿಶ್ಚಯಿಸಲಾಗಿದ್ದ ತುಳು ಸಮ್ಮೇಳನವನ್ನು ದೃಷ್ಟಿಯಲ್ಲಿಟ್ಟುಕೊಂಡು, ರಾಜ್ಯ ಹೆದ್ದಾರಿ 64ರ ಒಂದು ಭಾಗವಾಗಿದ್ದ ಕಡೂರು–ಕಂಜನಗಡ ರಸ್ತೆಯನ್ನು ಕಿಮೀ 100ರಿಂದ 175ರವರೆಗೆ ₹ ಆರು ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲು ಸರ್ಕಾರವು ಆಡಳಿತಾತ್ಮಕ ಅನುಮೋದನೆಯನ್ನು ನೀಡಿದ್ದಿತು (ನವೆಂಬರ್ 2009).

ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖಾ ವಿಭಾಗ, ಮಂಗಳೂರು, ಇವರು ಕಾಮಗಾರಿಯನ್ನು ಮೂವರು ವಿವಿಧ ಗುತ್ತಿಗೆದಾರರಿಗೆ ವಹಿಸಿದರು (ಡಿಸೆಂಬರ್ 2009 ಹಾಗೂ ಫೆಬ್ರವರಿ 2010ರ ನಡುವೆ). ಎರಡು ಕಾಮಗಾರಿಗಳು ಫೆಬ್ರವರಿ 2010ರಲ್ಲಿ ಪೂರ್ಣಗೊಂಡರೆ, ಒಂದು ಕಾಮಗಾರಿಯು ಗುತ್ತಿಗೆದಾರರಿಂದ

ಜನವರಿ 2010ರಲ್ಲಿ ತ್ಯಜಿಸಲ್ಪಟ್ಟಿತ್ತು. ಮೂರು ಕಾಮಗಾರಿಗಳ ಹಾಗೂ ಅವುಗಳ ಪ್ರಗತಿಯ ವಿವರಗಳು **ಕೋಷ್ಟಕ 3.3**ರಲ್ಲಿ ತೋರಿಸಿರುವಂತಿದ್ದವು:

**ಕೋಷ್ಟಕ 3.3: ಕಾಮಗಾರಿಯ ಪ್ರಗತಿ**

| ಸರಪಳಿ ಕಿಮೀ | ಕಾಮಗಾರಿ ಆದೇಶದ ದಿನಾಂಕ | ಅಂದಾಜು ವೆಚ್ಚ | ಟೆಂಡರ್ ಮೊತ್ತ | ಒಟ್ಟು ವೆಚ್ಚ | ಮುಕ್ತಾಯದ ದಿನಾಂಕ |
|---|---|---|---|---|---|
| | | (₹ ಕೋಟಿಯಲ್ಲಿ) | | | |
| 100ರಿಂದ 124 | 31.12.2009 | 2.00 | 2.22 | 2.22 | 10.02.2010 |
| 124ರಿಂದ 145 | 06.01.2010 | 2.80 | 3.04 | 1.83 | ಕಾಮಗಾರಿಯು ತ್ಯಜಿಸಲ್ಪಟ್ಟಿತು (15.01.2010) |
| 145ರಿಂದ 175 | 22.02.2010 | 1.20 | 1.35 | 1.35 | 25.02.2010 |
| | **ಒಟ್ಟು** | **6.00** | **6.61** | **5.40** | |

ರಸ್ತೆಗಳ ಅಭಿವೃದ್ಧಿಯ ಮೇಲೆ ರಾಜ್ಯದ ಬೊಕ್ಕಸದಿಂದ ಒಟ್ಟು ₹ 5.40 ಕೋಟಿ ವೆಚ್ಚ ಮಾಡಿದ್ದು ಅಸಮರ್ಥನೀಯವಾಗಿತ್ತು ಏಕೆಂದರೆ ಕಡೂರು–ಕಂಜನಗಡ ರಸ್ತೆಯು ಕೇಂದ್ರ ಸರ್ಕಾರದಿಂದ ರಾಷ್ಟ್ರೀಯ ಹೆದ್ದಾರಿ 234 ಎಂದು (ಮಂಗಳೂರಿನಿಂದ–ತಮಿಳುನಾಡಿನಲ್ಲಿರುವ ತಿರುವಣ್ಣಾಮಲೈ–ವಿಲ್ಲುಪುರಂಗೆ) ರಾಷ್ಟ್ರೀಯ ಹೆದ್ದಾರಿ ಅಧಿನಿಯಮ, 1956ರ ಪ್ರಕಾರ ಮುಂಚೆಯೇ ಅಧಿಸೂಚಿತವಾಗಿತ್ತು (ಫೆಬ್ರವರಿ 2009) ಎನ್ನುವುದನ್ನು ಲೆಕ್ಕಪರಿಶೋಧನೆಯ ಪರಿಶೀಲನೆಯು ತೋರಿಸಿಕೊಟ್ಟಿತು (ಅಕ್ಟೋಬರ್ 2012). ಹಾಗಿದ್ದರೂ, ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ವಹಿಸಿಕೊಡಲಿಲ್ಲ. ರಸ್ತೆಯನ್ನು ಮಂಗಳೂರಿನ ರಾಷ್ಟ್ರೀಯ ಹೆದ್ದಾರಿ ವಿಭಾಗಕ್ಕೆ 14 ತಿಂಗಳು ಕಳೆದನಂತರವಷ್ಟೇ ವಹಿಸಿಕೊಡಲಾಗಿದ್ದಿತು (ಮೇ 2010).

ಇದನ್ನು ಸ್ಪಷ್ಟಪಡಿಸಿದನಂತರ, ಕೇಂದ್ರ ಸರ್ಕಾರದ ಅನುದಾನಗಳನ್ನು ಪಡೆಯಲಾಗಲಿಲ್ಲವಾದ್ದರಿಂದ ತುಳು ಸಮ್ಮೇಳನದ ಅನುದಾನಗಳಿಂದ (ರಾಜ್ಯದ ಅನುದಾನಗಳು) ಕಾಮಗಾರಿಗಳನ್ನು ಕಾರ್ಯಗತಗೊಳಿಸಲಾಯಿತು ಎಂದು ಕಾರ್ಯನಿರ್ವಾಹಕ ಇಂಜಿನಿಯರರು ತಿಳಿಸಿದರು (ಅಕ್ಟೋಬರ್ 2012). ಈ ರಾಜ್ಯ ಹೆದ್ದಾರಿಯನ್ನು ಕೇಂದ್ರ ಸರ್ಕಾರವು ಫೆಬ್ರವರಿ 2009ರಲ್ಲಿಯೇ ಒಂದು ರಾಷ್ಟ್ರೀಯ ಹೆದ್ದಾರಿ ಎಂದು ಅಧಿಸೂಚಿಸಿದ್ದರಿಂದ ಮತ್ತು ಈ ರಸ್ತೆಯ ಮೇಲ್ದರ್ಜೀಕರಣಕ್ಕೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ವಹಿಸಿಕೊಡಬೇಕಿತ್ತಾದ್ದರಿಂದ ಉತ್ತರವು ಒಪ್ಪುವಂತಿರಲಿಲ್ಲ.

ಹೀಗೆ, ರಸ್ತೆಯನ್ನು ಅಭಿವೃದ್ಧಿಗಾಗಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ವಹಿಸಿಕೊಡಬೇಕಿದ್ದಿತು ಎನ್ನುವ ವಾಸ್ತವಾಂಶದ ಹೊರತಾಗಿಯೂ ರಸ್ತೆಯ ಅಭಿವೃದ್ಧಿಯ ಮೇಲೆ ಭರಿಸಲಾದ ವೆಚ್ಚವು, ರಾಜ್ಯದ ಬೊಕ್ಕಸದಿಂದ ₹ 5.40 ಕೋಟಿ ಅಸಮರ್ಥನೀಯ ವೆಚ್ಚದಲ್ಲಿ ಪರಿಣಮಿಸಿತು.

ವಿಷಯವನ್ನು ಸರ್ಕಾರಕ್ಕೆ ಜುಲೈ 2014ರಲ್ಲಿ ತಿಳಿಸಲಾಯಿತು; ಅವರ ಉತ್ತರವನ್ನು ನಿರೀಕ್ಷಿಸಲಾಗಿತ್ತು (ಅಕ್ಟೋಬರ್ 2014).

## 3.9 ಇಟ್ಟಿಗೆ ಕಾರ್ಖಾನೆಯ ಗುತ್ತಿಗೆ ನೀಡುವಿಕೆಯಲ್ಲಿ ವರಮಾನದ ನಷ್ಟ

**ಗುತ್ತಿಗೆ ಒಪ್ಪಂದದಲ್ಲಿ ನಿರ್ದಿಷ್ಟಪಡಿಸಿದ್ದಂತೆ ಗುತ್ತಿಗೆ ಬಾಡಿಗೆಯನ್ನು ಪರಿಷ್ಕರಿಸದಿದ್ದುದು ₹ 2.29 ಕೋಟಿ ವರಮಾನದ ನಷ್ಟದಲ್ಲಿ ಪರಿಣಮಿಸಿತು.**

ಕರ್ನಾಟಕ ಲೋಕೋಪಯೋಗಿ ಇಲಾಖೆಯ ಸಂಹಿತೆಯ (ಸಂಹಿತೆ) ಕಂಡಿಕೆ 206ರ ಪ್ರಕಾರ, ಸರ್ಕಾರಕ್ಕೆ ಸಂಬಂಧಿಸಿದ ಭೂಮಿ ಮತ್ತು ಕಟ್ಟಡಗಳನ್ನು ಖಾಸಗಿ ವ್ಯಕ್ತಿಗಳಿಗೆ ಮುಕ್ತ ಹರಾಜು ಅಥವಾ ಟೆಂಡರು ಪ್ರಕ್ರಿಯೆಯ ಮೂಲಕ ಗುತ್ತಿಗೆಗೆ ನೀಡತಕ್ಕದ್ದು. ಹರಾಜುಗಳನ್ನು ನಡೆಸದೇ ಇರುವ ಸಂದರ್ಭಗಳಲ್ಲಿ, ಜಿಲ್ಲೆಗಳ ಜಿಲ್ಲಾಧಿಕಾರಿಗಳ ಜೊತೆ ಸಮಾಲೋಚಿಸಿ ಅಂತಹುದೇ ಅಥವಾ ಇತರೆ ಭೂಮಿಗೆ ಪಡೆಯಬಹುದಾದವುಗಳನ್ನು ಗಮನದಲ್ಲಿಟ್ಟುಕೊಂಡು ದರಗಳನ್ನು ನಿಗಧಿಗೊಳಿಸತಕ್ಕದ್ದು. ಒಂದೇ ಸಲಕ್ಕೆ ಐದು ವರ್ಷ ಮೀರಿದ ಅವಧಿಗೆ ಗುತ್ತಿಗೆಗೆ ನೀಡುವುದನ್ನೂ ಸಹ ಅನುವುಗಳು ನಿಷೇಧಿಸಿವೆ.

14 ಎಕರೆ 39 ಗುಂಟೆಗಳಲ್ಲಿ ಹರಡಿಕೊಂಡಿರುವ ಬೆಂಗಳೂರಿನ ಹೊಸಕೋಟೆ ಸಮೀಪದ ಮೇಡಹಳ್ಳಿಯ ಸರ್ಕಾರಿ ಇಟ್ಟಿಗೆ ಕಾರ್ಖಾನೆಯನ್ನು ಲೋಕೋಪಯೋಗಿ ಇಲಾಖೆಯ ಅಗತ್ಯತೆಗಳಿಗಾಗಿ ಇಟ್ಟಿಗೆಗಳ ತಯಾರಿಕೆಗಾಗಿ 1971ರಲ್ಲಿ ಸ್ಥಾಪಿಸಲಾಯಿತು. ಅದು ನಷ್ಟವನ್ನು ಅನುಭವಿಸುತ್ತಿದ್ದುದರಿಂದ, ಇಟ್ಟಿಗೆ ತಯಾರಿಸುವುದನ್ನು ಏಪ್ರಿಲ್ 1998ರಲ್ಲಿ ಸ್ಥಗಿತಗೊಳಿಸಿತು. ಒಂಬತ್ತು ಎಕರೆ ಐದು ಗುಂಟೆಗಳಷ್ಟು ವಿಸ್ತಾರದ ಭೂಮಿಯಲ್ಲಿ ಸೃಷ್ಟಿಸಲಾಗಿರುವ ಮೂಲಸೌಕರ್ಯವನ್ನು ಬಳಸಿಕೊಳ್ಳುವ ಉದ್ದೇಶದಿಂದ, ಇಟ್ಟಿಗೆ ಕಾರ್ಖಾನೆಯನ್ನು 30 ವರ್ಷಗಳಿಗೆ, ಪ್ರಾರಂಭಿಕ ಐದು ವರ್ಷಗಳಿಗೆ ವಾರ್ಷಿಕ ಗುತ್ತಿಗೆ ಬಾಡಿಗೆ ₹ 1.05 ಲಕ್ಷದಂತೆ ಹಾಗೂ ತದನಂತರ ಪ್ರತೀ ಐದು ವರ್ಷಗಳಿಗೆ ಒಂದು ಸಲ ಶೇಕಡಾ 15ರ ದರದಲ್ಲಿ ಗುತ್ತಿಗೆ ಬಾಡಿಗೆಯನ್ನು ಹೆಚ್ಚಳಗೊಳಿಸುವ ಷರತ್ತಿನೊಂದಿಗೆ, ಗುತ್ತಿಗೆ ಆಧಾರದ ಮೇರೆಗೆ ಶ್ರೀ ಧನರಾಜ್‌ರವರಿಗೆ ನೀಡಲು ಬೆಂಗಳೂರಿನ ಸಂಪರ್ಕಗಳು ಮತ್ತು ಕಟ್ಟಡಗಳ ವಿಭಾಗದ ಮುಖ್ಯ ಇಂಜಿನಿಯರ್‌ರವರು ಪ್ರಸ್ತಾವನೆಗಳನ್ನು ಸಲ್ಲಿಸಿದರು (ಫೆಬ್ರವರಿ 2004). ಸರ್ಕಾರವು ಪ್ರಸ್ತಾವನೆಗಳನ್ನು ಒಪ್ಪಿಕೊಳ್ಳುವ ವೇಳೆಯಲ್ಲಿ (ಸೆಪ್ಟೆಂಬರ್ 2005), ಗುತ್ತಿಗೆ ಅವಧಿಯನ್ನು 25 ವರ್ಷಗಳಿಗೆ ಇಳಿಸಿತು ಹಾಗೂ ಇನ್ನಿತರ ಷರತ್ತುಗಳೊಂದಿಗೆ ಪ್ರತೀ ಮೂರು ವರ್ಷಗಳಿಗೆ ಒಂದು ಸಲ ಶೇಕಡಾ 10ರ ದರದಲ್ಲಿ ಹೆಚ್ಚಳಗೊಳಿಸಬೇಕೆಂಬ ಷರತ್ತಿನೊಂದಿಗೆ ವಾರ್ಷಿಕ ಗುತ್ತಿಗೆ ಬಾಡಿಗೆಯನ್ನು ₹ 2.10 ಲಕ್ಷಕ್ಕೆ ನಿಗದಿಗೊಳಿಸಿತು. ಪ್ರತೀ ಐದು ವರ್ಷಗಳಿಗೆ ಒಮ್ಮೆ ಗುತ್ತಿಗೆ ಬಾಡಿಗೆಯನ್ನು ಪರಿಷ್ಕರಿಸುವ ಹಕ್ಕನ್ನು ಸರ್ಕಾರವು ತನ್ನ ವಿವೇಚನೆಯಲ್ಲಿ ಕಾಯ್ದಿರಿಸಿಕೊಂಡಿತು ಹಾಗೂ ಪೂರ್ವಾನುಮತಿಯಿಲ್ಲದೆಯೇ ಇತರೆ ಚಟುವಟಿಕೆಗಳನ್ನು ಕೈಗೊಳ್ಳುವುದನ್ನು ಪ್ರತಿಬಂಧಿಸಿತು. ಅದರಂತೆಯೇ, 2005–07 ಸಾಲುಗಳಿಗೆ ವಾರ್ಷಿಕ ಬಾಡಿಗೆಯನ್ನು ₹ 2.10 ಲಕ್ಷ ಹಾಗೂ 2008ರಿಂದ 2030ರವರೆಗಿನ ಉಳಿದ 22 ವರ್ಷಗಳಿಗೆ ₹ 2.31 ಲಕ್ಷದಂತೆ ನಿಗದಿಪಡಿಸಿ, ಶ್ರೀ ಧನರಾಜ್ ಹಾಗೂ ಬೆಂಗಳೂರಿನ ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಇಂಜಿನಿಯರ್‌ರವರ ನಡುವೆ, ಒಂದು ಗುತ್ತಿಗೆ ಒಡಂಬಡಿಕೆಯನ್ನು 5 ಅಕ್ಟೋಬರ್ 2005ರಂದು ಕಾರ್ಯಗತಗೊಳಿಸಲಾಗಿದ್ದಿತು. ಛಾವಣಿ ಹೆಂಚುಗಳು, ಟೊಳ್ಳು ಇಟ್ಟಿಗೆಗಳು, ಆರ್‌ಸಿಸಿ ನಾಮ ಫಲಕಗಳು, ನೆಲ ಹಾಸುಗಳು, ಇತ್ಯಾದಿಗಳನ್ನು ತಯಾರಿಸಲು ಗುತ್ತಿಗೆದಾರರಿಗೆ ಸರ್ಕಾರವು ಅನುಮತಿ ನೀಡಿದ್ದಿತು (ಜೂನ್ 2010). ಗುತ್ತಿಗೆದಾರರು ಮಾರ್ಚ್ 2014ರಲ್ಲಿದ್ದಂತೆ ಗುತ್ತಿಗೆ ಬಾಡಿಗೆಯ ಕಡೆಗೆ ₹ 19.15 ಲಕ್ಷ ಮೊತ್ತವನ್ನು ಪಾವತಿಸಿದ್ದರು.

ದಾಖಲೆಗಳ ಪರಿಶೀಲನೆಯು (ಸೆಪ್ಟೆಂಬರ್ 2013) ಈ ಕೆಳಗಿನ ಅಂಶಗಳನ್ನು ತೋರಿಸಿಕೊಟ್ಟಿತು:

- ಸಂಹಿತೆಯ ಅನುವುಗಳಲ್ಲಿ ನಿರ್ದಿಷ್ಟಪಡಿಸಿರುವಂತೆ ಭೂಮಿ ಮತ್ತು ಅದರ ಜೊತೆಯಲ್ಲಿದ್ದ ಇಟ್ಟಿಗೆ ಕಾರ್ಖಾನೆಯನ್ನು ಗುತ್ತಿಗೆಗೆ ನೀಡುವ ವೇಳೆಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸುವ ಅಥವಾ ಮುಕ್ತ ಹರಾಜಿನ ಪದ್ಧತಿಯನ್ನು ಅನುಸರಿಸಿರಲಿಲ್ಲ. ಅಲ್ಲದೇ, ಗುತ್ತಿಗೆ ಬಾಡಿಗೆಯನ್ನು ನಿಗದಿಪಡಿಸುವ ಮೊದಲು ಸಂಬಂಧಿಸಿದ ಜಿಲ್ಲಾಧಿಕಾರಿಗಳ ಜೊತೆ ಸಮಾಲೋಚನೆಗಳನ್ನೂ ನಡೆಸಿರಲಿಲ್ಲ

- ❖ ಭೂಮಿಯನ್ನು ಒಂದೇ ಸಲಕ್ಕೆ ಐದು ವರ್ಷಗಳನ್ನು ಮೀರಿದ ಅವಧಿಗೆ ಗುತ್ತಿಗೆ ನೀಡುವುದನ್ನು ನಿರ್ಬಂಧಿಸಿರುವ ಸಂಹಿತೆಯ ಅನುವುಗಳನ್ನು ಉಲ್ಲಂಘಿಸಿ 25 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲಾಗಿದ್ದಿತು.
- ❖ ಸರ್ಕಾರವು ಅನುಮೋದಿಸಿದ್ದಂತೆ ಪ್ರತೀ ಮೂರು ವರ್ಷಗಳಿಗೆ ಒಮ್ಮೆ ಶೇಕಡಾ 10ರ ದರದಲ್ಲಿ ಗುತ್ತಿಗೆ ಬಾಡಿಗೆಯನ್ನು ಹೆಚ್ಚಳಗೊಳಿಸುವ ಷರತ್ತಿಗೆ ಪ್ರತಿಯಾಗಿ ಕಾರ್ಯನಿರ್ವಾಹಕ ಇಂಜಿನಿಯರ್‌ರವರು ಮೂರು ವರ್ಷಗಳ ನಂತರ ಒಂದು ಸಲ ಮಾತ್ರ ಶೇಕಡಾ 10ರ ದರದಲ್ಲಿ ಗುತ್ತಿಗೆ ಬಾಡಿಗೆಯನ್ನು ಹೆಚ್ಚಳಗೊಳಿಸುವ ಷರತ್ತಿನೊಂದಿಗೆ ಗುತ್ತಿಗೆ ಒಡಂಬಡಿಕೆಯನ್ನು ಪೂರ್ಣಗೊಳಿಸಿದ್ದರು; ಇದು ಅನಧಿಕೃತವಾಗಿತ್ತು.
- ❖ ಗುತ್ತಿಗೆ ಬಾಡಿಗೆಯನ್ನು ಐದು ವರ್ಷಗಳ ನಂತರ ಪರಿಷ್ಕರಿಸಲು ಸ್ವಂತ ವಿವೇಚನೆಯ ಅಧಿಕಾರವನ್ನು ಗುತ್ತಿಗೆ ಒಪ್ಪಂದವು ಅನುವು ಮಾಡಿದ್ದಿತು ಮತ್ತು ಅದು ಸಾಮಾನ್ಯ ಸಂದರ್ಭದಲ್ಲಿ ಅಕ್ಟೋಬರ್ 2010ರಲ್ಲಿ ಪರಿಷ್ಕರಿಸಲು ಬಾಕಿ ಇದ್ದಿತು. ಇಲಾಖೆಯು, ಗುತ್ತಿಗೆದಾರರಿಗೆ ವಿವಿಧ ಇತರೆ ಉತ್ಪನ್ನಗಳ ತಯಾರಿಕೆಯನ್ನು ಕೈಗೊಳ್ಳಲು ಅನುಮತಿಯನ್ನು ನೀಡುವ ಮೂಲಕ ವ್ಯಾಪಾರ ವಿಸ್ತರಣೆಗೆ ಅನುವು ಮಾಡಿಕೊಟ್ಟಿತಾದರೂ (ಜೂನ್ 2010) ಗುತ್ತಿಗೆ ಬಾಡಿಗೆಯನ್ನು ಪರಿಷ್ಕರಿಸಲಿಲ್ಲ.
- ❖ ಐದು ವರ್ಷಗಳ ನಂತರ ಅಂದರೆ ಅಕ್ಟೋಬರ್ 2010ರಿಂದ ಪಾವತಿಸಬೇಕಾದ ವಾರ್ಷಿಕ ಗುತ್ತಿಗೆ ಬಾಡಿಗೆಯು ಗುತ್ತಿಗೆಗೆ ನೀಡಲಾಗಿರುವ ಭೂಮಿಯ ಮಾರ್ಗಸೂಚಿ ಮೌಲ್ಯದ ಶೇಕಡಾ ಏಳರ ದರದಲ್ಲಿ ಲೆಕ್ಕ ಹಾಕಲಾದಂತೆ, ವರ್ಷ ಒಂದಕ್ಕೆ ₹ 67.87 ಲಕ್ಷ[46] ಆಗುತ್ತದೆ. ಗುತ್ತಿಗೆ ಬಾಡಿಗೆಯನ್ನು ಪರಿಷ್ಕರಿಸದಿದ್ದ ಕಾರಣ ಅಕ್ಟೋಬರ್ 2010ರಿಂದ ಮಾರ್ಚ್ 2014ರ ಅವಧಿಗೆ ಒಟ್ಟಾರೆ ವರಮಾನದ ನಷ್ಟವು ₹ 2.29 ಕೋಟಿ[47] ಆಗುತ್ತದೆ.

ಗುತ್ತಿಗೆ ಬಾಡಿಗೆಯನ್ನು ಪರಿಷ್ಕರಿಸುವುದಕ್ಕಾಗಿ ಪ್ರಸ್ತಾವನೆಯನ್ನು ಉನ್ನತ ಅಧಿಕಾರಿಗಳಿಗೆ ಸಲ್ಲಿಸಲಾಗಿದೆ ಎಂದು ಕಾರ್ಯನಿರ್ವಾಹಕ ಇಂಜಿನಿಯರ್‌ರವರು ತಮ್ಮ ಉತ್ತರದಲ್ಲಿ ತಿಳಿಸಿದರು (ಮೇ 2014).

ವಿಷಯವನ್ನು ಸರ್ಕಾರಕ್ಕೆ ಏಪ್ರಿಲ್ 2014ರಲ್ಲಿ ತಿಳಿಸಲಾಯಿತು; ಅವರ ಉತ್ತರವನ್ನು ನಿರೀಕ್ಷಿಸಲಾಗಿತ್ತು (ಅಕ್ಟೋಬರ್ 2014).

## 3.10 ಅಂಗೀಕರಿಸಲಾಗದ ಪಾವತಿ

**ಓರ್ವ ಗುತ್ತಿಗೆದಾರರಿಗೆ ಗುತ್ತಿಗೆ ಅನುವುಗಳನ್ನು ಉಲ್ಲಂಘಿಸಿ, ವ್ಯತ್ಯಾಸದ ಅಂಶಗಳಿಗೆ ₹ 1.02 ಕೋಟಿಯಷ್ಟು ದರ ಹೊಂದಾಣಿಕೆಯನ್ನು ಪಾವತಿಸಲಾಯಿತು.**

ಬೆಂಗಳೂರಿನ ರಾಷ್ಟ್ರೀಯ ಹೆದ್ದಾರಿಗಳ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್‌ರವರು, "ರಾಷ್ಟ್ರೀಯ ಹೆದ್ದಾರಿ–212ರ 240.450 ಕಿಮೀನಲ್ಲಿ ಕಬಿನಿ ನದಿಗೆ ಅಡ್ಡಲಾಗಿ ಒಂದು ಭಾರಿ ಸೇತುವೆಯ ನಿರ್ಮಾಣ" ಕಾಮಗಾರಿಯನ್ನು ಓರ್ವ ಗುತ್ತಿಗೆದಾರರಿಗೆ ಟೆಂಡರ್ ಆಧಾರದ ಮೇರೆಗೆ ₹ 34.90 ಕೋಟಿ ವೆಚ್ಚದಲ್ಲಿ 30 ತಿಂಗಳುಗಳ ಒಳಗೆ ಪೂರ್ಣಗೊಳಿಸಬೇಕೆಂಬ ಷರತ್ತಿನೊಂದಿಗೆ ನೀಡಿದ್ದರು (ಜುಲೈ 2010). ಒಪ್ಪಂದವು, ನಿರ್ದಿಷ್ಟ ಸೂತ್ರದ ಪ್ರಕಾರ ಸಾಮಗ್ರಿಗಳು, ಕೂಲಿ, ಇಂಧನ ಹಾಗೂ ಕೀಲೆಣ್ಣೆ, ಇತ್ಯಾದಿಗಳ ವೆಚ್ಚದಲ್ಲಿನ ಹೆಚ್ಚಳ ಅಥವಾ ಇಳಿಮುಖತೆಗಳ ಕಡೆಗೆ ಬೆಲೆ ಹೊಂದಾಣಿಕೆ

---

[46] ಒಂದು ಎಕರೆಗೆ ₹ 85,00,000ದ 7% + ಕೈಗಾರಿಕಾ ಉದ್ದೇಶಗಳಿಗಾಗಿ 25% (ಕರ್ನಾಟಕ ಸರ್ಕಾರದ ನೋಂದಣಿಯ ಇನ್ಸ್‌ಪೆಕ್ಟರ್ ಜನರಲ್‌ರವರು ಮತ್ತು ಮುದ್ರಾಂಕಗಳ ಶುಲ್ಕ ಆಯುಕ್ತರವರು ಏಪ್ರಿಲ್ 2007ರಲ್ಲಿ ನೀಡಿರುವ ಮಾರ್ಗಸೂಚಿ ಮೌಲ್ಯದ ಪ್ರಕಾರ ಎಕರೆಯೊಂದಕ್ಕೆ ₹ 85 ಲಕ್ಷ) ಅಂದರೆ. ₹ 5,95,000 + ₹ 1,48,750 = ₹ 7,43,750. 9 ಎಕರೆಗೆ: (9 × ₹ 7,43,750) = ₹ 66,93,750 ಹಾಗೂ 5 ಗುಂಟೆಗೆ: (₹ 7,43,750 ÷ 40) × 5 = ₹ 92,969. ಸಂಪೂರ್ಣ ವಿಸ್ತೀರ್ಣಕ್ಕೆ: (₹ 66,93,750 + ₹ 92,969) = ₹ 67,86,719

[47] (₹ 67,86,719 − ₹ 2,31,000) ÷ 12 × 42 ತಿಂಗಳು = ₹ 2,29,45,017

ಷರತ್ತನ್ನು ಒಳಗೊಂಡಿದ್ದಿತು ಹಾಗೂ ಹೊಂದಾಣಿಕೆಯನ್ನು ಪ್ರಸಕ್ತ ತಿಂಗಳಿನಲ್ಲಿ ಕಾರ್ಯಗತಗೊಳಿಸಲಾದ ಕಾಮಗಾರಿಯ ಒಟ್ಟು ಮೌಲ್ಯದ ಮೇಲೆ ಮಾಸಿಕವಾಗಿ ಮಾಡಬೇಕಾಗಿದ್ದಿತು. ಒಡಂಬಡಿಕೆಯ ಷರತ್ತು 47ರ ಪ್ರಕಾರ, ಪ್ರಸಕ್ತ ಸಾಲಿನಲ್ಲಿ ಕಾರ್ಯಗತಗೊಳಿಸಲಾದ ಕಾಮಗಾರಿಯ ಒಟ್ಟು ಮೌಲ್ಯವು, ಹೊಂದಾಣಿಕೆಯನ್ನು ಪರಸ್ಪರ ಒಪ್ಪಿಕೊಳ್ಳಲಾದ ಷರತ್ತುಗಳ ಪ್ರಕಾರ ಪ್ರತ್ಯೇಕವಾಗಿ ಲೆಕ್ಕ ಹಾಕಲ್ಪಡಬೇಕಿದ್ದ ವ್ಯತ್ಯಯಗಳ ಅಡಿಯಲ್ಲಿ ಕಾರ್ಯಗತಗೊಳಿಸಲಾದ ಕಾಮಗಾರಿಗಳ ಮೌಲ್ಯವನ್ನು ಒಳಗೊಂಡಿರುವುದಿಲ್ಲ.

ಕಾಮಗಾರಿಯು, ಇನ್ನಿತರವುಗಳ ಜೊತೆಗೆ ಬಲವರ್ಧಿತ ಮಣ್ಣಿನ ಗೋಡೆಗಳ ನಿರ್ಮಾಣವನ್ನು ಒಳಗೊಂಡಿದ್ದಿತು. ಭಾರತ ಸರ್ಕಾರದ ರಸ್ತೆಗಳು, ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯವು ಕಾಮಗಾರಿಗೆ ತಾಂತ್ರಿಕ ಅನುಮೋದನೆಯನ್ನು ನೀಡುವ ವೇಳೆಯಲ್ಲಿ (ಜುಲೈ 2008), ಬಲವರ್ಧಿತ ಮಣ್ಣಿನ ಗೊಡೆಗಳ ನಿರ್ಮಾಣಕ್ಕೆ ಉಕ್ಕಿನ ಬಲವರ್ಧನೆಯನ್ನು ಬಳಸಿಕೊಳ್ಳತಕ್ಕದ್ದು ಎಂದು ನಿರ್ದಿಷ್ಟಪಡಿಸಿದ್ದಿತು. ಬೆಂಗಳೂರಿನ ರಾಷ್ಟ್ರೀಯ ಹೆದ್ದಾರಿ ವಲಯದ 2007–08 ಸಾಲಿನ ದರಪಟ್ಟಿಯು ಬಲವರ್ಧಿತ ಗೋಡೆಗೆ ದರಗಳನ್ನು ಹೊಂದಿರಲಿಲ್ಲವಾದ್ದರಿಂದ, ಓರ್ವ ಸಲಹೆಗಾರರಿಂದ ತಯಾರಾದ ಅಂದಾಜಿನಲ್ಲಿ ಬಲವರ್ಧಿತ ಗೋಡೆಗೆ ಮಾರುಕಟ್ಟೆ ದರ (ಚಮೀ ಒಂದಕ್ಕೆ ₹ 4,000) ಅಳವಡಿಸಿಕೊಳ್ಳಲಾಯಿತು. ಗುತ್ತಿಗೆದಾರರು ಬಲವರ್ಧಿತ ಗೋಡೆಗೆ ಚಮೀ ಒಂದಕ್ಕೆ ₹ 4,300ರಂತೆ ದರವನ್ನು ನೀಡಿದ್ದರು. ಭೂಮಿಯ ಬಲವರ್ಧನೆಗೆ ಸತುವನ್ನು ಲೇಪಿಸಿದ ಉಕ್ಕನ್ನು ಬಳಸಿಕೊಂಡು ಬಲವರ್ಧಿತ ಗೋಡೆಯನ್ನು ನಿರ್ಮಿಸುವುದಕ್ಕಾಗಿ ಅನುಸರಿಸಬೇಕಾದ ಷರತ್ತುಗಳನ್ನು ಗುತ್ತಿಗೆದಾರರಿಗೆ ಫೆಬ್ರವರಿ 2011ರಲ್ಲಿ ನೀಡಲಾಗಿದ್ದಿತು. ಭೂಮಿಯ ಬಲವರ್ಧನೆಗೆ ಸಾಮಗ್ರಿಯನ್ನು ಟೆಂಡರಿನಲ್ಲಿ ನಿರ್ದಿಷ್ಟಪಡಿಸಿಲ್ಲ ಎಂದು ಗುತ್ತಿಗೆದಾರರು ತಿಳಿಸಿ (ಏಪ್ರಿಲ್ 2011), ಸತುವನ್ನು ಲೇಪಿಸಿದ ಉಕ್ಕಿನ ಬದಲಿಗೆ ಪಾಲಿಮರ್ ಪಟ್ಟಿಗಳನ್ನು ಬಳಸುವಂತೆ ಸಲಹೆ ನೀಡಿದರು. ಇಲಾಖೆಯು, ತನ್ನಲ್ಲಿ ನೋಂದಾಯಿಸಲ್ಪಟ್ಟಿದ್ದ ಸಂಸ್ಥೆಗಳಿಂದ ದರಗಳನ್ನು ಪಡೆದ ನಂತರ ಪಾಲಿಮರ್ ಪಟ್ಟಿಗಳನ್ನು ಬಳಸಿಕೊಂಡು ಬಲವರ್ಧಿತ ಗೋಡೆಯ ನಿರ್ಮಾಣಕ್ಕೆ ಚಮೀ ಒಂದಕ್ಕೆ ₹ 4,276.33ರಂತೆ ಪರಿಷ್ಕೃತ ದರಕ್ಕೆ ಅನುಮೋದನೆಯನ್ನು ನೀಡಿತು (ಜನವರಿ 2012). ಈ ವ್ಯತ್ಯಯದ ಬಾಬಿಗಾಗಿ ಗುತ್ತಿಗೆದಾರರ ಜೊತೆ ಒಂದು ಪೂರಕ ಒಪ್ಪಂದವನ್ನು ಮಾಡಿಕೊಳ್ಳಲಾಯಿತು (ಫೆಬ್ರವರಿ 2012). ಗುತ್ತಿಗೆದಾರರಿಗೆ ಚಾಲ್ತಿ ಲೆಕ್ಕ ಬಿಲ್ಲುಗಳ ಕಡೆಗೆ ₹ 36.92 ಕೋಟಿಯನ್ನು ಮತ್ತು ಬೆಲೆ ಹೊಂದಾಣಿಕೆ ಕಡೆಗೆ ₹ 7.53 ಕೋಟಿ ಮೊತ್ತವನ್ನು, ಜೂನ್ 2013ರಲ್ಲಿದ್ದಂತೆ, ಪಾವತಿಸಲಾಗಿದ್ದಿತು.

ಬೆಲೆ ಹೊಂದಾಣಿಕೆ ಕಡೆಗೆ ಪಾವತಿ ಮಾಡುವ ವೇಳೆಯಲ್ಲಿ ವಿಭಾಗವು, ಪೂರಕ ಒಪ್ಪಂದದ ಅಡಿಯಲ್ಲಿ ಕಾರ್ಯಗತಗೊಳಿಸಲಾದ ಕಾಮಗಾರಿಗಳ ಬೆಲೆ ಹೊಂದಾಣಿಕೆ ಕಡೆಗೆ ₹ 1.02 ಕೋಟಿಯನ್ನು ಪಾವತಿಸಿದ್ದಿತು ಎನ್ನುವುದನ್ನು ಬೆಂಗಳೂರಿನ ರಾಷ್ಟ್ರೀಯ ಹೆದ್ದಾರಿ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್‌ರವರ ದಾಖಲೆಗಳ ಪರಿಶೀಲನೆಯು ತೋರಿಸಿಕೊಟ್ಟಿತು (ಅಕ್ಟೋಬರ್ 2013). ಪೂರಕ ಒಪ್ಪಂದವು ಅಂತಹ ಬೆಲೆ ಹೊಂದಾಣಿಕೆಗೆ ಅನುವು ಮಾಡಿರಲಿಲ್ಲವಾದ್ದರಿಂದ, ಇದು ಅಂಗೀಕಾರಾರ್ಹವಾಗಿರಲಿಲ್ಲ ಹಾಗೂ ಗುತ್ತಿಗೆ ಅನುವುಗಳ ವ್ಯಾಪ್ತಿಯಿಂದ ಹೊರಗಿದ್ದಿತು.

ಇದನ್ನು ಸ್ಪಷ್ಟಪಡಿಸಿದನಂತರ (ಅಕ್ಟೋಬರ್ 2013), ಕಾರ್ಯನಿರ್ವಾಹಕ ಇಂಜಿನಿಯರ್‌ರವರು ಈ ಕೆಳಗಿನಂತೆ ಉತ್ತರಿಸಿದರು (ಮೇ 2014):

- ❖ ಪಾಲಿಮರ್ ಪಟ್ಟಿಗಳನ್ನು ಪರಿಗಣಿಸುವ ಮೂಲಕ ಟೆಂಡರು ಬಾಬಿಗೆ ಒಂದು ಸವಿವರ ದರ ವಿಶ್ಲೇಷಣೆಯನ್ನು ಒದಗಿಸುವಂತೆ ಗುತ್ತಿಗೆದಾರರನ್ನು ಕೇಳಲಾಯಿತು ಹಾಗೂ ಟೆಂಡರು–ಪೂರ್ವ ದರಕ್ಕೆ ಸಕ್ಷಮ ಅಧಿಕಾರಿಯವರು ಅನುಮೋದನೆಯನ್ನು ನೀಡಿರುವರು.

- ❖ ಮೂಲ ಒಪ್ಪಂದವು ಒಳಗೊಂಡಿದ್ದ ಷರತ್ತುಗಳು ಪೂರಕ ಒಡಂಬಡಿಕೆಗೂ ಅನ್ವಯಗೊಳ್ಳುತ್ತವೆ ಮತ್ತು ದರ ಹೊಂದಾಣಿಕೆಯನ್ನು ಗುತ್ತಿಗೆ ಷರತ್ತುಗಳ ಉಪಬಂಧ 47.1ರ ಪ್ರಕಾರ, ಅಂಶವು ಮೂಲ ಅಥವಾ ವ್ಯತ್ಯಯದ್ದೋ ಎನ್ನುವುದನ್ನು ಪರಿಗಣಿಸದೇ, ಪಾವತಿಸಲಾಯಿತು.

ಈ ಕೆಳಗಿನ ಕಾರಣಗಳಿಂದ ಉತ್ತರವನ್ನು ಒಪ್ಪಲಿಲ್ಲ:

- ❖ ಗುತ್ತಿಗೆದಾರರು, ಇಲಾಖೆಯು ಕೋರಿದಾಗ, ಪಾಲಿಮರ್ ಪಟ್ಟಿಯಲ್ಲದೇ ಉಕ್ಕಿನ ಪಟ್ಟಿಗಳನ್ನು ಉಪಯೋಗಿಸಿಕೊಂಡು ಬಲವರ್ಧಿತ ಗೋಡೆಗಾಗಿ ಸವಿವರ ದರ ವಿಶ್ಲೇಷಣೆಯನ್ನು ಚಮೀ ಒಂದಕ್ಕೆ ಅನುಕ್ರಮವಾಗಿ ₹ 2,908 ಹಾಗೂ ₹ 4,963ರಂತೆ ಒದಗಿಸಿದ್ದರು (ಡಿಸೆಂಬರ್ 2011). ಪಾಲಿಮರ್ ಪಟ್ಟಿಗಳನ್ನು ಬಳಸಿಕೊಂಡು ಬಲವರ್ಧಿತ ಗೋಡೆಯ ನಿರ್ಮಾಣಕ್ಕಾಗಿ ಚಮೀ ಒಂದಕ್ಕೆ ₹ 4,276.33ರ ದರವನ್ನು ಇಲಾಖೆಯು, ತನ್ನ ಪಟ್ಟಿಯಲ್ಲಿ ನೋಂದಾಯಿಸಲ್ಪಟ್ಟಿದ್ದ ಸಂಸ್ಥೆಗಳಿಂದ ದರಗಳನ್ನು ಪಡೆದುಕೊಂಡನಂತರ, ಅನುಮೋದಿಸಿದ್ದಿತು ಹಾಗೂ ಅದು ಗುತ್ತಿಗೆದಾರರು ತಿಳಿಸಿದ್ದ ಚಮೀ ಒಂದರ ದರ ₹ 2,908ಕ್ಕಿಂತ ಬಹಳ ಅಧಿಕವಾಗಿದ್ದಿತು. ಪ್ರಚಲಿತವಿದ್ದ ಮಾರುಕಟ್ಟೆ ದರವನ್ನು ಪಾವತಿಸಲಾಗಿದ್ದಿತಾದ್ದರಿಂದ ದರಗಳನ್ನು ಪರಿಷ್ಕರಿಸುವುದಕ್ಕೆ ಮುಂಚೆ ಇದ್ದಂತಹ ದರವನ್ನು ಪಾವತಿಸಲಾಗಿದ್ದಿತು ಎನ್ನುವ ಇಲಾಖೆಯ ವಾದವು ತಪ್ಪುಗಳಿಂದ ಕೂಡಿದೆ/ತಪ್ಪುದಾರಿಗೆ ಎಳೆಯುವಂತಿದೆ.
- ❖ ದರ ಹೊಂದಾಣಿಕೆಯ ಉದ್ದೇಶಕ್ಕಾಗಿ ಕಾರ್ಯಗತಗೊಳಿಸಲಾದ ಕಾಮಗಾರಿಯ ಒಟ್ಟು ಮೌಲ್ಯದಿಂದ ವ್ಯತ್ಯಯಗಳ ಅಡಿಯಲ್ಲಿ ಕಾರ್ಯಗತವಾದ ಕಾಮಗಾರಿಯ ಮೌಲ್ಯವನ್ನು ಹೊರತೆಗೆಯತಕ್ಕದ್ದು ಎಂದು ಮೂಲ ಒಪ್ಪಂದವು ಅನುವು ಮಾಡಿದ್ದಿತಾದ್ದರಿಂದ ಹಾಗೂ ಪೂರಕ ಒಪ್ಪಂದವು ಸಹಾ ಬೆಲೆ ಹೊಂದಾಣಿಕೆಯ ಪಾವತಿಗೆ ಅನುವು ಮಾಡಿರಲಿಲ್ಲವಾದ್ದರಿಂದ, ಬೆಲೆ ಹೊಂದಾಣಿಕೆಯು ಪೂರಕ ಒಡಂಬಡಿಕೆಯ ಅಡಿಯಲ್ಲಿ ಕಾರ್ಯಗತಗೊಳಿಸಲಾದ ಕಾಮಗಾರಿಗಳಿಗೂ ಅನ್ವಯಗೊಳ್ಳುತ್ತದೆ ಎನ್ನುವ ಉತ್ತರವು ಒಪ್ಪುವಂತಿಲ್ಲ.

ವಿಷಯವನ್ನು ಸರ್ಕಾರಕ್ಕೆ ಜುಲೈ 2014ರಲ್ಲಿ ತಿಳಿಸಲಾಯಿತು; ಅವರ ಉತ್ತರವನ್ನು ನಿರೀಕ್ಷಿಸಲಾಗಿತ್ತು (ಅಕ್ಟೋಬರ್ 2014).

**ಜಲ ಸಂಪನ್ಮೂಲ ಇಲಾಖೆ – ಸಣ್ಣ ನೀರಾವರಿ**

## 3.11 ನಿರರ್ಥಕ ಹೂಡಿಕೆ

**ಒಂದು ಏತ ನೀರಾವರಿ ಯೋಜನೆಯಲ್ಲಿ ದೋಷಯುಕ್ತ ಯೋಜನೆ, ಅಸಮರ್ಪಕ ಮೇಲ್ವಿಚಾರಣೆ ಹಾಗೂ ವಿವಿಧ ಭಾಗಗಳನ್ನು ಒಟ್ಟುಗೂಡಿಸುವಲ್ಲಿ ವಿಫಲತೆಯು ₹ 2.30 ಕೋಟಿಯು ನಿರರ್ಥಕ ಹೂಡಿಕೆಯಾಗುವಲ್ಲಿ ಪರಿಣಮಿಸಿತು. 660 ಎಕರೆಗಳಷ್ಟು ಹೊಲಗದ್ದೆಗಳಿಗೆ ನೀರಾವರಿಯ ಅನುಕೂಲತೆ ನೀಡುವ ಉದ್ದೇಶವು ಏಳು ವರ್ಷಗಳು ಕಳೆದನಂತರವೂ ಈಡೇರಿರಲಿಲ್ಲ.**

ಉದ್ದೇಶಿತ ಪ್ರಯೋಜನಗಳನ್ನು ಪಡೆಯುವುದಕ್ಕಾಗಿ ಒಂದು ಕಾಮಗಾರಿಯನ್ನು ಒಂದು ಕಾಲಮಿತಿಯ ಒಳಗೆ ಪೂರ್ಣಗೊಳಿಸುವುದಕ್ಕಾಗಿ ಸವಿವರ ಸಮೀಕ್ಷೆ ಹಾಗೂ ಕ್ರಮಬದ್ಧ ಪರೀಕ್ಷಣೆ, ಸಮರ್ಪಕ ಯೋಜನೆ ಮತ್ತು ಮೇಲ್ವಿಚಾರಣೆ, ವಿವಿಧ ಭಾಗಗಳನ್ನು ಒಟ್ಟುಗೂಡಿಸುವಿಕೆ, ಇವು ಅತ್ಯಗತ್ಯವಾಗಿವೆ.

ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಹಿರೆಪಡಸಲಗಿಯಲ್ಲಿ 1979ರಲ್ಲಿ ನಿರ್ಮಿಸಲಾಗಿದ್ದ ಏತ ನೀರಾವರಿ ಯೋಜನೆಯನ್ನು ನಬಾರ್ಡ್[48] ಸಹಾಯಧನದ ಕಾಮಗಾರಿಯ ಅಡಿಯಲ್ಲಿ

[48] ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗಾಗಿ ರಾಷ್ಟ್ರೀಯ ಬ್ಯಾಂಕು

₹ 2.63 ಕೋಟಿ ಅಂದಾಜು ವೆಚ್ಚದಲ್ಲಿ ಪುನರುಜ್ಜೀವನಗೊಳಿಸುವ ಪ್ರಸ್ತಾವನೆಯನ್ನು ಮಾಡಲಾಯಿತು. ಏತ ನೀರಾವರಿಗೆ ಪುನರುಜ್ಜೀವನ ನೀಡುವ ಯೋಜನೆಯು 660 ಎಕರೆಗೆ, ಅಂದರೆ 600 ಎಕರೆ ಹೊಸ ಪ್ರದೇಶ ಹಾಗೂ 60 ಎಕರೆ ಪ್ರಸ್ತುತ ಇದ್ದ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿಯನ್ನು ಒದಗಿಸುವುದಕ್ಕಾಗಿ ರೂಪ ತಾಳಿತು. ಪ್ರಸ್ತಾವಿಸಲಾದ ಯೋಜನೆಯು, ಪ್ರಸ್ತುತ ಇದ್ದ ನೀರನ್ನು ಒಳಹಾಯಿಸುವ ಬಾವಿ, ನೀರನ್ನು ಒಳಹಾಯಿಸುವ ಕೊಳವೆ ಹಾಗೂ ಜಾಕ್‌ವೆಲ್ ಇವುಗಳನ್ನು ಉಪಯೋಗಿಸಿಕೊಳ್ಳುವುದರ ಜೊತೆಗೆ ಹೊಸದಾದ ಏರುಕೊಳವೆ[49], ಪಂಪ್‌ಗಳು ಹಾಗೂ ನಾಲೆಗಳನ್ನು ಒದಗಿಸಿತ್ತು. ಏರುಕೊಳವೆ ಹಾಗೂ ನಾಲೆಗಳಿಗಾಗಿ 16 ಎಕರೆ 32 ಗುಂಟೆ ಭೂಮಿಯ ಸ್ವಾಧೀನಪಡಿಸಿಕೊಳ್ಳುವುದಕ್ಕೂ ಅಂದಾಜು ಅನುವು ಮಾಡಿದ್ದಿತು. ಹಿರೆಪಡಸಲಗಿಯ ಏತ ನೀರಾವರಿ ಯೋಜನೆಗೆ ಪುನರುಜ್ಜೀವನ ನೀಡುವ ಕಾಮಗಾರಿಯು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ), ವಿಜಾಪುರ ಇವರಿಂದ ಓರ್ವ ಗುತ್ತಿಗೆದಾರರಿಗೆ, ಟೆಂಡರ್ ಆಧಾರದಲ್ಲಿ, 12 ತಿಂಗಳಿನ ಒಳಗೆ ಪೂರ್ಣಗೊಳಿಸಬೇಕೆಂಬ ಷರತ್ತಿನೊಂದಿಗೆ ₹ 2.19 ಕೋಟಿಗೆ ವಹಿಸಲ್ಪಟ್ಟಿತು (ಫೆಬ್ರವರಿ 2007).

ಕಾಮಗಾರಿಯನ್ನು ಕಾರ್ಯಗತಗೊಳಿಸುವ ವೇಳೆಯಲ್ಲಿ, ತಮ್ಮದೇ ಸ್ವಂತ ಪಂಪ್ ಸೆಟ್‌ಗಳನ್ನು ಸ್ಥಾಪಿಸಿಕೊಂಡಿರುವುದರಿಂದ ನೀರಾವರಿ ಅನುಕೂಲತೆಗಳನ್ನು ತಮಗೆ ನೀಡುವ ಅಗತ್ಯವಿಲ್ಲ ಎಂದು ಹೊಸ ಅಚ್ಚುಕಟ್ಟು ಪ್ರದೇಶದ ರೈತರು ತಿಳಿಸಿದರು (ಏಪ್ರಿಲ್ 2009). ಆದ್ದರಿಂದ, ನೀರಾವರಿ ಅನುಕೂಲತೆಗಳನ್ನು ಒದಗಿಸುವುದಕ್ಕಾಗಿ ಸಾವಲಗಿ ಗ್ರಾಮದಲ್ಲಿ 560 ಎಕರೆಗಳಷ್ಟು ಮತ್ತೊಂದು ಅಚ್ಚುಕಟ್ಟು ಪ್ರದೇಶವನ್ನು ಗುರುತಿಸಲಾಯಿತು, ಇದು ₹ 34.54 ಲಕ್ಷ ಹೆಚ್ಚುವರಿ ವೆಚ್ಚವು ಒಳಗೊಂಡ ಏರುಕೊಳವೆಯ ಉದ್ದವನ್ನು ಹೆಚ್ಚಿಸುವ ಅಗತ್ಯತೆಯನ್ನು ಉಂಟುಮಾಡಿತು. ಇದು ಗುತ್ತಿಗೆದಾರರಿಗೆ ಮಾರ್ಚ್ 2011ರವರೆಗೆ ಕಾಲಾವಧಿಯ ವಿಸ್ತರಣೆಯನ್ನು ನೀಡುವ ಅಗತ್ಯತೆಯನ್ನು ಉಂಟು ಮಾಡಿತು. ಸಮಯದ ವಿಸ್ತರಣೆ ಮಾಡಿದರೂ, ಗುತ್ತಿಗೆದಾರರು ಕಾಮಗಾರಿಯನ್ನು ಪೂರ್ಣಗೊಳಿಸಲಾಗಲಿಲ್ಲ ಮತ್ತು ಅಂತಿಮವಾಗಿ ಗುತ್ತಿಗೆದಾರರ ಜವಾಬ್ದಾರಿ ಮತ್ತು ವೆಚ್ಚದ ಮೇಲೆ ಗುತ್ತಿಗೆಯು ಮುಖ್ಯ ಇಂಜಿನಿಯರರಿಂದ ಕೊನೆಗೊಳಿಸಲ್ಪಟ್ಟಿತು (ಮೇ 2012). ಇನ್ನೂ ಪೂರ್ಣಗೊಳಿಸಬೇಕಾಗಿದ್ದ ಬಾಕಿ ಕಾಮಗಾರಿಗಳು ₹ 40.45 ಲಕ್ಷ ಅಂದಾಜು ವೆಚ್ಚದ 1,155 ಮೀ ಉದ್ದದ ಏರುಕೊಳವೆ ಹಾಕುವುದು, ವಿತರಣಾ ಚೇಂಬರಿನ ನಿರ್ಮಾಣ, ಇತ್ಯಾದಿಗಳನ್ನು ಒಳಗೊಂಡಿದ್ದವು. ಗುತ್ತಿಗೆದಾರರಿಗೆ, ಪಂಪ್ ಯಂತ್ರದ ಕಡೆಗೆ ₹ 24.65 ಲಕ್ಷ ಸೇರಿದಂತೆ, ₹ 1.79 ಕೋಟಿಯನ್ನು ಪಾವತಿಸಲಾಗಿದ್ದಿತು. ಭೂಸ್ವಾಧೀನಕ್ಕೆ ಪಾವತಿಯೂ ಕೂಡಿದಂತೆ ಭರಿಸಲಾಗಿದ್ದ ಒಟ್ಟು ವೆಚ್ಚವು ₹ 2.30 ಕೋಟಿ ಆಗಿದ್ದಿತು (ಮಾರ್ಚ್ 2014).

ದಾಖಲೆಗಳ ಪರಿಶೀಲನೆಯು ಈ ಕೆಳಗಿನ ಅಂಶಗಳನ್ನು ತೋರಿಸಿಕೊಟ್ಟಿತು:

- ಯೋಜನಾ-ಪೂರ್ವ ಸಮೀಕ್ಷೆಯು ದೋಷಯುಕ್ತವಾಗಿದ್ದಿತು, ಏಕೆಂದರೆ ಯೋಜನೆಗೆ ಅನುಮೋದನೆ ನೀಡುವ ಮೊದಲು ಈಗಾಗಲೇ ಅಭಿವೃದ್ಧಿಯಾಗಿದ್ದ ಹಾಗೂ ಸುಸ್ಪಷ್ಟವಾಗಿ ಅಗತ್ಯತೆ ಇರದ ಅಚ್ಚುಕಟ್ಟು ಪ್ರದೇಶವನ್ನು ಪರಿಗಣಿಸುವಲ್ಲಿ ವಿಫಲವಾಗಿದ್ದಿತು. ಮುಂದುವರೆದು, ಹೊಸ ಅಚ್ಚುಕಟ್ಟು ಪ್ರದೇಶದ ಸರ್ವೆ ಸಂಖ್ಯೆಗಳ ವಿವರಗಳು ದಾಖಲೆಗಳಿಂದ ಕಂಡುಬರುತ್ತಿರಲಿಲ್ಲ.
- ಕಾಮಗಾರಿಯನ್ನು ಗುತ್ತಿಗೆದಾರರಿಗೆ ವಹಿಸಿದನಂತರ ಭೂಸ್ವಾಧೀನವಾಗಿದ್ದಿದು ಕಾಮಗಾರಿಯನ್ನು ಪೂರ್ಣಗೊಳಿಸುವಲ್ಲಿನ ವಿಳಂಬಕ್ಕೆ ಕಾರಣವಾಯಿತು. ಮೂರು ಎಕರೆ 13 ಗುಂಟೆಯಷ್ಟು ಉಳಿಕೆ ಭೂಮಿಯನ್ನು ಇನ್ನೂ ಸ್ವಾಧೀನಪಡಿಸಿಕೊಳ್ಳಬೇಕಿತ್ತು.
- ಪಂಪ್ ಯಂತ್ರವು ಗುತ್ತಿಗೆದಾರರಿಂದ ಅಗತ್ಯತೆಗಿಂತ ಮೊದಲೇ ಸರಬರಾಜಾಗಿತ್ತು (ಫೆಬ್ರವರಿ 2010), ಇದು ಪರೀಕ್ಷೆಗೊಳಗಾಗದೆಯೇ ಉಳಿದಿದೆ (ಅಕ್ಟೋಬರ್ 2014).

[49] ಏರುಕೊಳವೆಯೆಂದರೆ ಪಂಪ್ ಮಾಡಲಾದ ನೀರನ್ನು ವಿತರಣಾ ತೊಟ್ಟಿಗೆ ಹರಿಸುವ ಒಂದು ವ್ಯವಸ್ಥೆ

- ❖ ಮುಖ್ಯ ಇಂಜಿನಿಯರ್‌ರವರು ಮೇ 2012ರಲ್ಲಿ ಗುತ್ತಿಗೆದಾರರ ಜವಾಬ್ದಾರಿ ಮತ್ತು ವೆಚ್ಚದ ಮೇಲೆ ಗುತ್ತಿಗೆಯನ್ನು ಕೊನೆಗೊಳಿಸಿದರೂ, ಕಾರ್ಯನಿರ್ವಾಹಕ ಇಂಜಿನಿಯರರು ಗುತ್ತಿಗೆಯನ್ನು ವಾಸ್ತವಿಕವಾಗಿ ಜುಲೈ 2013ರಲ್ಲಿ ಕೊನೆಗೊಳಿಸಿದರು. ಗುತ್ತಿಗೆಯನ್ನು ಕೊನೆಗೊಳಿಸುವಲ್ಲಿನ ವಿಳಂಬಕ್ಕೆ ಕಾರಣಗಳು ದಾಖಲೆಗಳಲ್ಲಿ ಇರಲಿಲ್ಲ. ಭದ್ರತಾ ಠೇವಣಿ ₹ 9.01 ಲಕ್ಷವು ಸಹಾ ಮುಟ್ಟುಗೋಲಾಗಿರಲಿಲ್ಲ.

ಹೀಗೆ, ಏಳು ವರ್ಷಗಳ ಹಿಂದೆ ಬದ್ಧತೆಯಿಂದ ಕೂಡಿದ ನಿಧಿಯ ಲಭ್ಯತೆಯ ಜೊತೆ ಪ್ರಾರಂಭವಾದ ಹಾಗೂ ಮೂಲತಃ ಮಾರ್ಚ್ 2008ರ ವೇಳೆಗೆ ಪೂರ್ಣವಾಗಲು ಪ್ರಕ್ಷೇಪಿಸಲಾಗಿದ್ದ ಯೋಜನೆಯು ಅಸಮರ್ಪಕ ಯೋಜನೆ ಹಾಗೂ ಭೂಸ್ವಾಧೀನದಲ್ಲಿ ವಿಳಂಬದ ಕಾರಣದಿಂದ ಇನ್ನೂ ಅಪೂರ್ಣವಾಗಿಯೇ ಉಳಿದು (ಅಕ್ಟೋಬರ್ 2014), ₹ 2.30 ಕೋಟಿ ಹೂಡಿಕೆಯು ನಿರರ್ಥಕವಾಗುವಂತಾಯಿತು. ಮುಂದುವರೆದು, ಯೋಜನೆಯನ್ನು ಪೂರ್ಣಗೊಳಿಸಲು ಯಾವುದೇ ಕಾಲಮಿತಿಯನ್ನೂ ನಿಗದಿಪಡಿಸಿಲ್ಲ.

ವಿಷಯವನ್ನು ಸರ್ಕಾರಕ್ಕೆ ಜುಲೈ 2014ರಲ್ಲಿ ತಿಳಿಸಲಾಯಿತು; ಅವರ ಉತ್ತರವನ್ನು ನಿರೀಕ್ಷಿಸಲಾಗಿತ್ತು (ಅಕ್ಟೋಬರ್ 2014).

## 3.12 ನಿಷ್ಫಲ ವೆಚ್ಚ

**ನಾಲೆಗಳ ಜೊತೆಯಲ್ಲಿ ಸಣ್ಣ ನೀರಾವರಿ ಕೆರೆ ನಿರ್ಮಾಣದ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯು ಅನುಮೋದಿತ ಅಂದಾಜಿನ ನಿರ್ದಿಷ್ಟ ನಿರೂಪಣೆಗಳ ಅನುಸಾರ ಇರದಿದ್ದುದು ಮುಕ್ತಾಯಕ್ಕೆ ಮುಂಚೆಯೇ ಗುತ್ತಿಗೆಯು ಕೊನೆಗೊಳ್ಳುವುದಕ್ಕೆ ಮತ್ತು ₹ 1.97 ಕೋಟಿ ನಿಷ್ಫಲ ವೆಚ್ಚವಾಗುವುದಕ್ಕೆ ದಾರಿಮಾಡಿಕೊಟ್ಟಿತು.**

ಬೆಳಗಾವಿ ಜಿಲ್ಲೆ ಹಾಗೂ ತಾಲ್ಲೂಕಿನ ಅತ್ತವಾಡ ಗ್ರಾಮದ ಬಳಿ ಸಣ್ಣ ನೀರಾವರಿ ಕೆರೆಯ ನಿರ್ಮಾಣವನ್ನು ಬೆಳಗಾವಿಯ ಸಣ್ಣ ನೀರಾವರಿ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್‌ರವರು 2009–10ರಲ್ಲಿ, 110 ಹೆಕ್ಟೇರ್‌ಗೆ ನೀರಾವರಿ ಒದಗಿಸುವುದಕ್ಕಾಗಿ, 2.12ರ ಲಾಭ ವೆಚ್ಚ ಅನುಪಾತದ[50] ಜೊತೆ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಧಿ XIV (ನಬಾರ್ಡ್[51]) ಅಡಿಯಲ್ಲಿ ₹ 1.71 ಕೋಟಿ ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಂಡರು. ಅನುಮೋದನೆಗೊಂಡಿದ್ದ ಅಂದಾಜು, ಮಣ್ಣಿನ ಏರಿಯ ನಿರ್ಮಾಣ, ಕೋಡಿ, ನೀರಾವರಿ ನಾಲೆ, 11.303 ಹೆಕ್ಟೇರ್ ಭೂಸ್ವಾಧೀನ, ಸಾದಿಲ್ವಾರು, ಸಮೀಕ್ಷೆ, ಇತ್ಯಾದಿಗಳನ್ನು ಒಳಗೊಂಡಿದ್ದಿತು. ₹ 1.36 ಕೋಟಿ ಅಂದಾಜು ವೆಚ್ಚದ ಕಾಮಗಾರಿಯ ಭಾಗವನ್ನು (ಭೂ ಸ್ವಾಧೀನ, ಸಾದಿಲ್ವಾರು, ಸಮೀಕ್ಷೆಯನ್ನು ಹೊರತುಪಡಿಸಿ) ಟೆಂಡರಿಗೆ ಇಡಲಾಯಿತು ಹಾಗೂ ಓರ್ವ ಗುತ್ತಿಗೆದಾರರಿಗೆ ₹ 1.53 ಕೋಟಿಗೆ, ಒಂಬತ್ತು ತಿಂಗಳುಗಳಲ್ಲಿ ಮುಕ್ತಾಯಗೊಳಿಸಬೇಕೆಂದು, ವಹಿಸಲಾಯಿತು (ಫೆಬ್ರವರಿ 2010).

ಗುತ್ತಿಗೆದಾರರು, ನಾಲೆಗಳನ್ನು ಹೊರತುಪಡಿಸಿ, ಕಾಮಗಾರಿಯನ್ನು ಜೂನ್ 2012ರಲ್ಲಿ ಪೂರ್ಣಗೊಳಿಸಿದರು. ಪ್ರತಿಯೊಂದು 1.5 ಕಿಮೀ ಉದ್ದದ ಎಡ ದಂಡೆ ಹಾಗೂ ಬಲ ದಂಡೆ ನಾಲೆಗಳನ್ನು ಒಳಗೊಂಡಿರುವ ನಾಲೆಗಳ ನಿರ್ಮಾಣವನ್ನು ರೈತರು ಕಾಂಕ್ರೀಟಿನ ಒಳಪದರವಿರುವ

---

[50] ಲಾಭ ವೆಚ್ಚ ಅನುಪಾತವು ಒಂದು ನೀರಾವರಿ ಯೋಜನೆಯಲ್ಲಿ, ಅಂತಹ ನೀರಾವರಿ ವ್ಯವಸ್ಥೆಯ ವಾರ್ಷಿಕ ವೆಚ್ಚಗಳಿಗೆ ಹೋಲಿಸಿದಲ್ಲಿ, ನೀರಾವರಿ ಪೂರ್ವ ಹಾಗೂ ನಂತರದ ಸ್ಥಿತಿಗತಿಯ ನಡುವೆ ಸಂಚಿತಗೊಂಡಂತಹ ನಿವ್ವಳ ಏರಿಕೆಯ ಪ್ರಯೋಜನ

[51] ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗಾಗಿ ರಾಷ್ಟ್ರೀಯ ಬ್ಯಾಂಕ್

ನಾಲೆಗಳಿಗಾಗಿ[52] ಒತ್ತಾಯಿಸಿದ್ದರಿಂದ ಹಾಗೂ ಈ ಅಂಶವನ್ನು ಟೆಂಡರ್‌ನಲ್ಲಿ ಅನುವು ಮಾಡಿರಲಿಲ್ಲವಾದ್ದರಿಂದ ಕೈಗೆತ್ತಿಕೊಳ್ಳಲಾಗಲಿಲ್ಲ. ಗುತ್ತಿಗೆದಾರರು ನಾಲಾ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗದಿದ್ದರಿಂದ, ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ), ವಿಜಾಪುರ ಇವರು ಜವಾಬ್ದಾರಿ ಮತ್ತು ವೆಚ್ಚವಿಲ್ಲದೆಯೇ ಗುತ್ತಿಗೆ ಕೊನೆಗೊಳಿಸಲು ಅನುಮತಿ ನೀಡಿದರು (ಜುಲೈ 2013). ₹ 1.34 ಕೋಟಿಯ ಅಂತಿಮ ಬಿಲ್ಲನ್ನು ಪಾವತಿಸಲಾಯಿತು (ಅಕ್ಟೋಬರ್ 2013) ಹಾಗೂ ತಾತ್ಕಾಲಿಕ ಮುಕ್ತಾಯ ಪ್ರಮಾಣ ಪತ್ರವನ್ನು ನವೆಂಬರ್ 2013ರಲ್ಲಿ ನೀಡಲಾಯಿತು. ಮಾರ್ಚ್ 2014ರಲ್ಲಿದ್ದಂತೆ, ಭೂಸ್ವಾಧೀನದ ಕಡೆಗೆ ಠೇವಣಿ ಇಡಲಾದ ಮೊತ್ತ (₹ 57.08 ಲಕ್ಷ) ಹಾಗೂ ಸಾದಿಲ್ವಾರು ವೆಚ್ಚ (₹ 6.20 ಲಕ್ಷ) ಸೇರಿದಂತೆ, ಕಾಮಗಾರಿಯ ಮೇಲೆ ಭರಿಸಲಾದ ಒಟ್ಟು ವೆಚ್ಚವು ₹ 1.97 ಕೋಟಿ ಆಗಿದ್ದಿತು.

ಕಾರ್ಯನಿರ್ವಾಹಕ ಇಂಜಿನಿಯರ್‌ರವರ ದಾಖಲೆಗಳ ಪರಿಶೀಲನೆಯು (ನವೆಂಬರ್ 2013), ತಾಂತ್ರಿಕ ಸಲಹಾ ಸಮಿತಿಯು ಯೋಜನೆಗೆ ಅನುಮೋದನೆ ನೀಡುವ ವೇಳೆಯಲ್ಲಿ ಮಿತವ್ಯಯತೆಯನ್ನು ಸಾಧಿಸುವುದಕ್ಕಾಗಿ ಹಾಗೂ ನಿರ್ಮಾಣವನ್ನು ಸುಲಭಗೊಳಿಸುವುದಕ್ಕಾಗಿ ನಾಲೆಗಳಿಗೆ ಅರ್ಧ ಸುತ್ತಿನ ಕೊಳವೆಯನ್ನು ಒದಗಿಸುವಂತೆ ಶಿಫಾರಸು ಮಾಡಿದ್ದಿತು (27 ಆಗಸ್ಟ್ 2007) ಎನ್ನುವುದನ್ನು ತೋರಿಸಿತು. ಮುಖ್ಯ ಇಂಜಿನಿಯರ್‌ರವರು ನೀಡಿದ್ದ ₹ 1.71 ಕೋಟಿ ಅಂದಾಜು ವೆಚ್ಚದ ತಾಂತ್ರಿಕ ಅನುಮೋದನೆಯು, ತಾಂತ್ರಿಕ ಸಲಹಾ ಸಮಿತಿಯು ಮಾಡಿದ್ದ ಶಿಫಾರಸಿನ ಪ್ರಕಾರ, ₹ ಮೂರು ಲಕ್ಷ ಅನುವಿನೊಂದಿಗೆ ನಾಲೆಗಳಿಗೆ ಸೂಕ್ತ ಕಾಂಕ್ರೀಟ್ ಒಳಪದರ ಹಾಕುವುದನ್ನು ಒಳಗೊಂಡಿದ್ದಿತು. ಆದಾಗ್ಯೂ, ನಾಲೆಗೆ ಒಳಪದರವನ್ನು ಹಾಕುವ ಭಾಗವನ್ನು ಟೆಂಡರ್‌ನಲ್ಲಿ ಸೇರಿಸಿರಲಿಲ್ಲ. ಯೋಜನಾ ವೆಚ್ಚವನ್ನು ಕನಿಷ್ಠ ಮೊತ್ತಕ್ಕೆ ತರುವುದಕ್ಕಾಗಿ ಹಾಗೂ ಲಾಭ ವೆಚ್ಚ ಅನುಪಾತದ ಒಳಗೆ ತರುವ ಉದ್ದೇಶದಿಂದ ನಾಲೆಗೆ ಒಳಪದರವನ್ನು ಪರಿಗಣಿಸಲಿಲ್ಲವೆಂದು ಕಾರ್ಯನಿರ್ವಾಹಕ ಇಂಜಿನಿಯರ್‌ರವರು ತಾಂತ್ರಿಕ ಸಲಹಾ ಸಮಿತಿಯು ಗಮನಿಸಿದ್ದ ಅಂಶಗಳಿಗೆ ನೀಡಿದ ಉತ್ತರದಲ್ಲಿ ತಿಳಿಸಿದ್ದರು (ಅಗಸ್ಟ್ 2007). ಆದಾಗ್ಯೂ, ಲಾಭ ವೆಚ್ಚ ಅನುಪಾತವು 2.12ರಷ್ಟು ಅಧಿಕ ಮಟ್ಟದಲ್ಲಿದ್ದಿತಾದ್ದರಿಂದ, ನಾಲೆಗಳಿಗೆ ಒಳಪದರವನ್ನು ಅನುವು ಮಾಡುವುದರಿಂದ ಯೋಜನಾ ಮಿತ್ಯವ್ಯಯತೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿರಲಿಲ್ಲ ಎನ್ನುವುದನ್ನು ಗಮನಿಸಲಾಯಿತು ಹಾಗೂ ಇದರಿಂದಾಗಿ ಟೆಂಡರ್ ಹಂತದಲ್ಲಿ ನಾಲೆಗೆ ಒಳಪದರ ಹಾಕುವ ಅಂಶವನ್ನು ಕೈಬಿಟ್ಟಿದ್ದು ಅಸಮರ್ಥನೀಯವಾಗಿತ್ತು.

ಹೀಗೆ, ಅನುಮೋದಿತ ನಿರ್ದಿಷ್ಟ ನಿರೂಪಣೆಗಳಿಗೆ ಅನುಗುಣವಾಗಿ ಕಾಮಗಾರಿಯನ್ನು ಟೆಂಡರ್‌ಗೆ ಇಡದ ಕಾರಣ ಕಾಲುವೆಗಳು ಪೂರ್ಣವಾಗದಿದ್ದುದು, ರೈತರು ನೇರ ನೀರಾವರಿಯಿಂದ ವಂಚಿತರಾಗುವಲ್ಲಿಗೆ ಹಾಗೂ ₹ 1.97 ಕೋಟಿ ನಿಷ್ಫಲ ವೆಚ್ಚವಾಗುವಲ್ಲಿಗೆ ದಾರಿ ಮಾಡಿಕೊಟ್ಟಿತು.

ವಿಷಯವನ್ನು ಸರ್ಕಾರಕ್ಕೆ ಏಪ್ರಿಲ್ 2014ರಲ್ಲಿ ತಿಳಿಸಲಾಯಿತು; ಅವರ ಉತ್ತರವನ್ನು ನಿರೀಕ್ಷಿಸಲಾಗಿತ್ತು (ಅಕ್ಟೋಬರ್ 2014).

[52] ಸೋರಿಕೆ ನಷ್ಟವನ್ನು ಕಡಿಮೆಗೊಳಿಸುವುದಕ್ಕಾಗಿ, ನೀರಿನ ಸುಗಮ ಹರಿವನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ, ನಿರ್ವಹಣಾ ವೆಚ್ಚವನ್ನು ಕಡಿಮೆಗೊಳಿಸುವುದಕ್ಕಾಗಿ ಹಾಗೂ ನೀರು ಒಂದೇ ಸ್ಥಳದಲ್ಲಿ ನಿಂತುಕೊಳ್ಳುವುದನ್ನು ತಡೆಯುವುದಕ್ಕಾಗಿ, ಒಂದು ನಾಲೆಯ ಭೂ ಮೇಲ್ಪದರಕ್ಕೆ ಕಾಂಕ್ರೀಟು ಪ್ರೀ–ಕಾಸ್ಟ್ ಸ್ಲ್ಯಾಬುಗಳು, ಜಲ್ಲಿ, ಇತ್ಯಾದಿಗಳಿಂದ ಕೂಡಿದ ಒಂದು ಸ್ಥಿರ ಹೊರತಲದ ಪದರವನ್ನು ಹಾಕಲಾಗುವುದು.

## 3.13 ಉಕ್ಕಿನ ಅನಾವಶ್ಯಕ ಬಳಕೆ

**ರಕ್ಷಣಾ ಗೋಡೆಯ ನಿರ್ಮಾಣದ ಕಾಮಗಾರಿಯಲ್ಲಿ ಮೂಲತಃ ಹೇಳಿದ್ದಕ್ಕೆ ಬದಲಾಗಿ ಹೆಚ್ಚಿನ ದರ್ಜೆಯ ಉಕ್ಕಿನ ಬಳಕೆಯಿಂದ ಸಂಭವಿಸಿದ ವಿನ್ಯಾಸದ ಪರಿಷ್ಕರಣೆಯಲ್ಲಿ ವಿಫಲತೆಯು ₹ 1.80 ಕೋಟಿ ಅಧಿಕ ವೆಚ್ಚದಲ್ಲಿ ಪರಿಣಮಿಸಿತು.**

ಸಿಮೆಂಟ್ ಕಾಂಕ್ರೀಟ್ ರಚನೆಗಳಲ್ಲಿ ಬಲವರ್ಧನೆಗಾಗಿ ಉಕ್ಕನ್ನು ಬಳಸಿದಲ್ಲಿ, ಟಿಎಂಟಿ[53] ಎಫ್ಇ[54] 500 ದರ್ಜೆಯ ಉಕ್ಕು, ಟಿಎಂಟಿ ಎಫ್ಇ 415 ದರ್ಜೆಯ ಉಕ್ಕಿಗಿಂತ ಹೆಚ್ಚಿನ ಕರ್ಷಕ (ಟೆನ್ಸೈಲ್) ಬಲವನ್ನು ಹೊಂದಿರುತ್ತದೆ. ಟಿಎಂಟಿ ಎಫ್ಇ 500 ದರ್ಜೆಯ ಉಕ್ಕಿನ ಹೆಚ್ಚಿನ ಕರ್ಷಕ ಬಲದ ಕಾರಣ, ಅದರ ಅಗತ್ಯತೆಯು ಟಿಎಂಟಿ ಎಫ್ಇ 415 ದರ್ಜೆಯ ಉಕ್ಕಿಗೆ ಹೋಲಿಸಿದಲ್ಲಿ ಕಡಿಮೆಯಿರುತ್ತದೆ. ಟಿಎಂಟಿ ಎಫ್ಇ 415 ದರ್ಜೆಯ ಒಂದು ಮೆಟ್ರಿಕ್ ಟನ್ ಉಕ್ಕಿನಿಂದ ಸಿಗುವ ಫಲಿತಾಂಶವನ್ನೇ 0.83 ಮೆಟ್ರಿಕ್ ಟನ್ ಟಿಎಂಟಿ ಎಫ್ಇ 500 ದರ್ಜೆಯ ಉಕ್ಕಿನಿಂದ ಪಡೆಯಬಹುದು. ಬಲವರ್ಧಿತ ಕಾಂಕ್ರೀಟ್ ಕಾಮಗಾರಿಗಳಿಗಾಗಿ, ಪ್ರಾಥಮಿಕ ಉಕ್ಕು ತಯಾರಕರಿಂದ ಉತ್ಪಾದಿಸಲ್ಪಟ್ಟ ಉಕ್ಕನ್ನೇ ಬಳಸುವಂತೆ ಐಎಸ್ ಕೋಡ್ 1786 ನಿರ್ದಿಷ್ಟಪಡಿಸಿದೆ. ಮೈಸೂರಿನ ಸಣ್ಣ ನೀರಾವರಿ ವಲಯದ 2009–10ರ ದರಪಟ್ಟಿಯು ಟಿಎಂಟಿ ಎಫ್ಇ 500 ದರ್ಜೆಯ ಉಕ್ಕಿಗೆ ದರಗಳನ್ನು ಒಳಗೊಂಡಿತ್ತು.

"ಹೊಳೆನರಸೀಪುರ ಪಟ್ಟಣದಲ್ಲಿ ಹೇಮಾವತಿ ನದಿಯ ಬಲದಂಡೆಗೆ ರಕ್ಷಣಾ ಗೋಡೆಯ ನಿರ್ಮಾಣ"ಕ್ಕಾಗಿ ಗುತ್ತಿಗೆಯು, ಓರ್ವ ಗುತ್ತಿಗೆದಾರರಿಗೆ ₹ 35.91 ಕೋಟಿ ವೆಚ್ಚದಲ್ಲಿ 14 ತಿಂಗಳೊಳಗೆ ಮುಗಿಸಲು, ವಹಿಸಲ್ಪಟ್ಟಿತು (ಮಾರ್ಚ್ 2012). ಕಾಮಗಾರಿಯು ಪ್ರಗತಿಯಲ್ಲಿದ್ದಿತು ಹಾಗೂ ಗುತ್ತಿಗೆದಾರರಿಗೆ ಮಾರ್ಚ್ 2014ರ ಅಂತ್ಯದವರೆಗೆ ₹ 33.07 ಕೋಟಿ ಮೊತ್ತವನ್ನು ಪಾವತಿಸಲಾಗಿದ್ದಿತು.

ಕಾಮಗಾರಿಯ ವ್ಯಾಪ್ತಿಯು, ಓರ್ವ ಸಲಹೆಗಾರರು ತಯಾರಿಸಿದ ಅಂದಾಜಿನ ಪ್ರಕಾರ, ಇನ್ನಿತರವುಗಳ ಜೊತೆಗೆ, 1,768.95 ಮೆಟ್ರಿಕ್ ಟನ್ ಟಿಎಂಟಿ ಎಫ್ಇ 415 ದರ್ಜೆಯ ಉಕ್ಕಿನ ಅಗತ್ಯತೆಯ "ರಚನೆಗಾಗಿ ಬಲವರ್ಧಿತ ಉಕ್ಕನ್ನು ಒದಗಿಸುವುದು, ಕಟ್ಟುವುದು ಹಾಗೂ ನಿರ್ದಿಷ್ಟ ಸ್ಥಳದಲ್ಲಿ ಸ್ಥಾಪಿಸುವುದನ್ನು" ಒಳಗೊಂಡಿದ್ದಿತು. ಬಲವರ್ಧನೆ ಅಂಶಗಳಿಗಾಗಿ ಗುತ್ತಿಗೆದಾರರು ಪ್ರತಿ ಮೆಟ್ರಿಕ್ ಟನ್‌ಗೆ ₹ 61,473.93 ಸೂಚಿಸಿದ್ದರು. ಗುತ್ತಿಗೆದಾರರು ವಿನ್ಯಾಸದ ಪ್ರಕಾರ ಇದ್ದಂತಹ ಎಫ್ಇ 415 ದರ್ಜೆಯ ಉಕ್ಕಿನ ಬದಲಾಗಿ ಟಿಎಂಟಿ ಎಫ್ಇ 500 ದರ್ಜೆಯ ಉಕ್ಕನ್ನು ಬಳಸಿದ್ದರು ಎನ್ನುವುದು ದಾಖಲೆಗಳ ಪರಿಶೀಲನೆಯಿಂದ ಗೋಚರವಾಯಿತು (ಜುಲೈ 2013). ಗುತ್ತಿಗೆದಾರರು ಟಿಎಂಟಿ ಎಫ್ಇ 500 ದರ್ಜೆಯ ಉಕ್ಕನ್ನು ಬಳಸಿದ್ದರಾದರೂ, ಕಡಿಮೆ ಪ್ರಮಾಣದ ಉಕ್ಕಿನ ಅಗತ್ಯತೆಯ ಕಾರಣ ವೆಚ್ಚವನ್ನು ಪರಿಣಾಮಕಾರಿಯಾಗಿ ಕಡಿಮೆ ಮಾಡುವ ರೀತಿಯಲ್ಲಿ ಇಲಾಖೆಯು ಉನ್ನತ ದರ್ಜೆಯ ಉಕ್ಕಿನ ಬಳಕೆಯ ಅಂಶಕ್ಕೆ ತಕ್ಕಂತೆ ವಿನ್ಯಾಸವನ್ನು ಪರಿಷ್ಕರಿಸಲಿಲ್ಲ. ಗುತ್ತಿಗೆದಾರರಿಗೆ ಮಾರ್ಚ್ 2014ರವರೆಗೂ 1,720.48 ಮೆಟ್ರಿಕ್ ಟನ್ನುಗಳಿಗೆ ಅದಾಗಲೇ ಪಾವತಿ ಮಾಡಲಾಗಿದ್ದಿತು. ವಿನ್ಯಾಸವನ್ನು ಪರಿಷ್ಕರಿಸುವಲ್ಲಿ ವಿಫಲತೆಯು 292.48 ಮೆಟ್ರಿಕ್ ಟನ್‌ನಷ್ಟು[55] ಉಕ್ಕನ್ನು ಅನಾವಶ್ಯಕವಾಗಿ ಬಳಸುವಲ್ಲಿ ಹಾಗೂ ತತ್ಪರಿಣಾಮವಾಗಿ ಟೆಂಡರ್ ದರದಲ್ಲಿ ₹ 1.80 ಕೋಟಿ[56] ಅಧಿಕ ವೆಚ್ಚದಲ್ಲಿ ಪರಿಣಮಿಸಿತು.

---

[53] ಥರ್ಮೋ–ಸ್ವಯಂಚಾಲಿತವಾಗಿ ಸಂಸ್ಕರಿಸಲ್ಪಟ್ಟಿರುವ

[54] ಐಎಸ್ 1786ರ ಪ್ರಕಾರ, 'ಎಫ್ಇ'ಯನ್ನು ಅನುಸರಿಸುವ ಅಂಕಿಗಳು ಎನ್/ಎಮ್ಎಮ್$^2$ರಲ್ಲಿ ನಿರ್ದಿಷ್ಟ ಕನಿಷ್ಟ ಶೇಕಡಾ 0.2ರಷ್ಟು ದೃಢ ಒತ್ತಡ ಅಥವಾ ಪ್ರತಿಫಲ ಒತ್ತಡವನ್ನು ಸೂಚಿಸುತ್ತವೆ

[55] (ಬಳಸಲಾದ ಉಕ್ಕಿನ ಒಟ್ಟು ಪ್ರಮಾಣ × ಶೇಕಡಾ 17 ಉಳಿತಾಯ) = (1,720.48 × 0.17) = 292.48 ಮೆಟ್ರಿಕ್ ಟನ್

[56] ಗುತ್ತಿಗೆಗೆ ಇಡಲಾಗಿದ್ದ ದರದ ಪ್ರಕಾರ 292.48 ಮೆಟ್ರಿಕ್ ಟನ್ × ₹ 61,473.93/ಮೆಟ್ರಿಕ್ ಟನ್ = ₹ 1,79,79,895

ಇದನ್ನು ಸ್ಪಷ್ಟಪಡಿಸಿದನಂತರ (ಜುಲೈ 2013), ಹಾಸನದ ಸಣ್ಣ ನೀರಾವರಿ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್‌ರವರು ಈ ಕೆಳಗಿನಂತೆ ತಿಳಿಸಿದರು (ಫೆಬ್ರವರಿ ಮತ್ತು ಮೇ 2014):

- ❖ ಕರ್ಷಕ ಬಲ, ಪಟ್ಟಿಗಳ ಅಂತರ ಬಿಡುವಿಕೆ ಹಾಗೂ ಉಕ್ಕಿನ ಕಂಬಿಗಳ ಅಡ್ಡ ಘಟಕ ಪ್ರದೇಶ, ಇವುಗಳನ್ನು ಪರಿಗಣಿಸಲಾಗಿತ್ತು. ಎಫ್‌ಇ 500 ಉಕ್ಕನ್ನು ಕಡಿಮೆ ಪ್ರಮಾಣದಲ್ಲಿ ಬಳಸಿದ್ದಲ್ಲಿ, ಕರ್ಷಕ ಬಲವನ್ನು ಸಾಧಿಸಬಹುದು, ಆದರೆ ಇತರೆ ಪರಿಮಿತಿಗಳು ಪೂರ್ತಿಯಾಗುವುದಿಲ್ಲ. ಎಫ್‌ಇ 500ರ ಬಳಕೆಯು ಉಕ್ಕಿನ ಕಡಿಮೆ ಪ್ರಮಾಣದ ಬಳಕೆಯಲ್ಲಿ ಪರಿಣಮಿಸುತ್ತದೆ ಎಂದೂ ಕಾರ್ಯನಿರ್ವಾಹಕ ಇಂಜಿನಿಯರ್‌ರವರು ತಿಳಿಸಿದರು.
- ❖ ಎರಡು ದರ್ಜೆಗಳ ಉಕ್ಕಿನ ನಡುವಿನ ವ್ಯತ್ಯಾಸವು ಕಡಿಮೆ ಪ್ರಮಾಣದ್ದಾಗಿದ್ದಿತು ಹಾಗೂ ವಿನ್ಯಾಸದಲ್ಲಿನ ಬದಲಾವಣೆಯು ವಿನ್ಯಾಸದ ಕಡೆಗೆ ಹೆಚ್ಚುವರಿ ವೆಚ್ಚ, ಎಫ್‌ಇ 500ಕ್ಕೆ ಅಧಿಕ ದರ ಹಾಗೂ ಪರಿಷ್ಕೃತ ವಿನ್ಯಾಸಗಳನ್ನು ನೀಡುವಲ್ಲಿನ ವಿಳಂಬಕ್ಕೆ ವಿಪರೀತವಾದ ಪರಿಹಾರ ನೀಡುವಲ್ಲಿ ಪರಿಣಮಿಸಬಹುದಿದ್ದಿತು.
- ❖ ವಿನ್ಯಾಸಗಳನ್ನು ಎಫ್‌ಇ 415ರ ಆಧಾರದ ಮೇರೆಗೆ ತಯಾರಿಸಲಾಗಿದ್ದಿತಾದರೂ, ಮಾರುಕಟ್ಟೆಯಲ್ಲಿ ಲಭ್ಯವಿದ್ದಂತೆ ಗುತ್ತಿಗೆದಾರರು ಎಫ್‌ಇ 500 ದರ್ಜೆಯ ಉಕ್ಕನ್ನು ಬಳಸಿದರು.

ಉತ್ತರವನ್ನು ಈ ಕೆಳಗಿನ ಕಾರಣಗಳಿಂದ ಒಪ್ಪುವಂತಿರಲಿಲ್ಲ:

- ❖ ವಿನ್ಯಾಸವನ್ನು, ಬೇರೆ ವ್ಯಾಸದ ಎಫ್‌ಇ 500 ಉಕ್ಕಿನ ಬಳಕೆಯಿಂದ ಹಾಗೂ ಅಡ್ಡ ಜೋಡಣೆಯಿಂದ ಮಾಡಲಾದ ಪ್ರದೇಶಕ್ಕೆ ಪರಿಣಾಮ ಬೀರದಂತೆ ಪಟ್ಟಿಗಳ ಅಂತರ ಬಿಡುವಿಕೆಯನ್ನು ಸೂಕ್ತವಾಗಿ ಹೊಂದಾಣಿಕೆ ಮಾಡುವ ಮೂಲಕ ಸೂಕ್ತವಾಗಿ ಬದಲಾವಣೆ ಮಾಡಬಹುದಾಗಿದ್ದಿತು.
- ❖ ವಿನ್ಯಾಸ ಹಾಗೂ ರೂಪುರೇಖೆಗಳ ತಯಾರಿಕೆಗಾಗಿ ಸಲಹೆಗಾರರಿಗೆ ₹ ನಾಲ್ಕು ಲಕ್ಷ ಮೊತ್ತವನ್ನು ಪಾವತಿಸಲಾಗಿದ್ದಿತು. ಎಫ್‌ಇ 500ನ್ನು ಬಳಸುವಲ್ಲಿ ಪಡೆಯಬಹುದಾದ ಗಮನಾರ್ಹ ಉಳಿತಾಯವನ್ನು ಪರಿಗಣಿಸಿದಲ್ಲಿ, ಭರಿಸಲಾಗಿದ್ದ ಹೆಚ್ಚುವರಿ ವೆಚ್ಚವು ಮೂಲತಃ ಪಾವತಿಸಲಾಗಿದ್ದಕ್ಕಿಂತ ಕಡಿಮೆಯಾಗಿರುತ್ತಿದ್ದಿತು ಹಾಗೂ ಗಣನೆಗೆ ಬಾರದಷ್ಟು ಆಗಿರುತ್ತಿದ್ದಿತು. ಅಲ್ಲದೇ, ಅಂಶದ ಪರಿಮಾಣವನ್ನು ಶೇಕಡಾ 25ರಷ್ಟು ಹೆಚ್ಚಳಗೊಳಿಸಿದಾಗ ಅಥವಾ ಕಡಿತಗೊಳಿಸಿದಾಗ ಗುತ್ತಿಗೆ ಅನುವುಗಳ ಪ್ರಕಾರ ಟೆಂಡರ್ ದರವನ್ನು ಪರಿಷ್ಕರಿಸಲಾಗುವುದು. ಕಾಮಗಾರಿಯ ಪರಿಮಾಣದಲ್ಲಿನ ಕಡಿತವು ಶೇಕಡಾ 17ರಷ್ಟು ಆಗುವುದರಿಂದ ಟೆಂಡರನ್ನು ಪರಿಷ್ಕರಿಸುವ ಅಗತ್ಯತೆ ಇರಲಿಲ್ಲ ಏಕೆಂದರೆ ಸೂಚಿತ ಮಿತಿಗಿಂತ ಪರಿಮಾಣವು ಕಡಿಮೆಯಿತ್ತು.

ಹೀಗೆ, ಕಾಮಗಾರಿಯಲ್ಲಿ ಬಳಸಲಾದ ಉನ್ನತ ದರ್ಜೆಯ ಉಕ್ಕನ್ನು ಗಮನದಲ್ಲಿಟ್ಟುಕೊಂಡು ವಿನ್ಯಾಸವನ್ನು ಪರಿಷ್ಕರಿಸುವಲ್ಲಿನ ವಿಫಲತೆಯು ₹ 1.80 ಕೋಟಿ ಅಧಿಕ ವೆಚ್ಚದಲ್ಲಿ ಪರಿಣಮಿಸಿತು, ಅದನ್ನು ತಪ್ಪಿಸಬಹುದಾಗಿದ್ದಿತು.

ವಿಷಯವನ್ನು ಸರ್ಕಾರಕ್ಕೆ ಮಾರ್ಚ್ 2014ರಲ್ಲಿ ತಿಳಿಸಲಾಯಿತು; ಅವರ ಉತ್ತರವನ್ನು ನಿರೀಕ್ಷಿಸಲಾಗುತ್ತಿತ್ತು (ಅಕ್ಟೋಬರ್ 2014).

**ಜಲ ಸಂಪನ್ಮೂಲ ಇಲಾಖೆ – ತುಂಗಭದ್ರ ಯೋಜನೆ**

## 3.14 ಗುತ್ತಿಗೆದಾರನಿಗೆ ಅನುಚಿತ ಲಾಭ

**ಒಂದು ಕಾಮಗಾರಿಯಲ್ಲಿ, ಟೆಂಡರು ಷರತ್ತುಗಳ ಪ್ರಕಾರ ಅಂತಿಮ ಬಿಲ್ಲಿನಲ್ಲಿ ಪಾವತಿಸಬೇಕಿದ್ದ ಶೇಕಡ 25 ಅಧಿಕ ಮೌಲ್ಯ ₹ 29.17 ಕೋಟಿಯನ್ನು, ಅದಕ್ಕೆ ವಿರುದ್ಧವಾಗಿ ಎರಡನೆಯ ಚಾಲ್ತಿ ಲೆಕ್ಕ ಬಿಲ್ಲಿನಲ್ಲಿ ಪಾವತಿ ಮಾಡಿದ್ದು, ಗುತ್ತಿಗೆದಾರನಿಗೆ ಅನುಚಿತ ಲಾಭದಲ್ಲಿ ಮತ್ತು ರಾಜ್ಯದ ಬೊಕ್ಕಸಕ್ಕೆ ₹ 1.84 ಕೋಟಿ ನಷ್ಟ ಸಂಭವಿಸುವಲ್ಲಿ ಪರಿಣಮಿಸಿತು.**

ಜಲ ಸಂಪನ್ಮೂಲ ಇಲಾಖೆಯ 2011–12 ಮತ್ತು 2012–13 ಸಾಲಿನ ದರಪಟ್ಟಿಯು, ನಾಲೆಯ ಮುಚ್ಚುವ ಅವಧಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸುವುದಕ್ಕಾಗಿ "ನಿರ್ಮಾಣಗಳೂ ಸೇರಿದಂತೆ ನಾಲಾ ಸಂಪರ್ಕಗಳನ್ನು ಆಧುನೀಕರಣಗೊಳಿಸುವ" ಕಾಮಗಾರಿಗಳ ಅಡಿಯಲ್ಲಿನ ಎಲ್ಲಾ ಅಂಶಗಳಿಗೆ ಶೇಕಡಾ 25ರ ಅಧಿಕ ಮೌಲ್ಯ ಪಾವತಿಯನ್ನು ಅನುವು ಮಾಡಿದ್ದಿತು. ಗುತ್ತಿಗೆದಾರರು ಮೂರರಿಂದ ನಾಲ್ಕು ತಿಂಗಳುಗಳ ಏಕ ಮುಕ್ತಾಯ ಅವಧಿಯೊಳಗೆ "ಆಧುನೀಕರಣ ಕಾಮಗಾರಿಗಳ" ಮೌಲ್ಯದ ಶೇಕಡಾ 90ರಷ್ಟು ಕಾಮಗಾರಿಯನ್ನು ಮುಕ್ತಾಯಗೊಳಿಸಿದ್ದಲ್ಲಿ, ಶೇಕಡಾ 25ರಷ್ಟು ಅಧಿಕ ಮೌಲ್ಯ ಪಾವತಿಯನ್ನು ಮಾಡಬೇಕಿದ್ದಿತು. ದರಪಟ್ಟಿಯಂತೆ, ಶೇಕಡಾ 25ರ ಅಧಿಕ ಮೌಲ್ಯ ಪಾವತಿಯನ್ನು ಒಪ್ಪಿಕೊಳ್ಳುವ ಹಾಗೂ ನಿಯಂತ್ರಿಸುವ ಸಲುವಾಗಿ ಒಂದು ಸೂಕ್ತ ಷರತ್ತನ್ನು ಟೆಂಡರ್ ದಾಖಲೆಗಳಲ್ಲಿ ಸೇರಿಸತಕ್ಕದ್ದು.

"ತುಂಗಭದ್ರಾ ಎಡ ದಂಡೆ ನಾಲೆಗಳ 167 ಕಿಮೀನಿಂದ 220 ಕಿಮೀವರೆಗೆ ಹಾಗೂ ಅದರ ವಿತರಕಗಳ (ಆಯ್ದ ಚಾಚುಗಳಲ್ಲಿ) ಆಧುನೀಕರಣಗೊಳಿಸುವ ಕಾಮಗಾರಿಗಳಿಗೆ" ಸಂಬಂಧಿಸಿದಂತೆ 2011–12 ಸಾಲಿನ ದರಪಟ್ಟಿಯ ಆಧಾರದ ಮೇರೆಗೆ ತಯಾರಿಸಲಾಗಿದ್ದ ₹ 136.46 ಕೋಟಿ ಮೊತ್ತದ ಅಂದಾಜಿಗೆ ಮುನಿರಾಬಾದಿನ ನೀರಾವರಿ ಕೇಂದ್ರ ವಲಯದ ಮುಖ್ಯ ಇಂಜಿನಿಯರ್‌ರವರು ಜುಲೈ 2012ರಲ್ಲಿ ತಾಂತ್ರಿಕ ಅನುಮೋದನೆ ನೀಡಿದರು. ಗುತ್ತಿಗೆಯನ್ನು ಓರ್ವ ಗುತ್ತಿಗೆದಾರರಿಗೆ 23 ಜುಲೈ 2013ಕ್ಕೆ ಮೊದಲು ಕಾಮಗಾರಿಯನ್ನು ಪೂರ್ಣಗೊಳಿಸಬೇಕೆಂಬ ಷರತ್ತಿನೊಂದಿಗೆ ಟೆಂಡರು ಆಧಾರದ ಮೇಲೆ ₹ 151.30 ಕೋಟಿಗೆ (ಶೇಕಡಾ 25ರಷ್ಟು ಅಧಿಕ ಮೌಲ್ಯ ಪಾವತಿ ಒಳಗೊಂಡಂತೆ) ವಹಿಸಲಾಯಿತು (ಏಪ್ರಿಲ್ 2013). ಗುತ್ತಿಗೆದಾರರು ನಿರ್ದಿಷ್ಟಪಡಿಸಿದ ದಿನಾಂಕದೊಳಗೆ ಕಾಮಗಾರಿಯನ್ನು ಎಲ್ಲಾ ರೀತಿಯಲ್ಲಿಯೂ ಪೂರ್ಣಗೊಳಿಸಿರಲಿಲ್ಲ ಹಾಗೂ ಎರಡನೆಯ ಚಾಲ್ತಿ ಲೆಕ್ಕ ಬಿಲ್ಲಿನ ಪ್ರಕಾರ 19 ಜುಲೈ 2013ರವರೆಗೆ ಕಾರ್ಯಗತಗೊಳಿಸಲಾಗಿದ್ದ ಕಾಮಗಾರಿಗೆ ಒಟ್ಟಾರೆ ₹ 148.18 ಕೋಟಿಯನ್ನು ಅಕ್ಟೋಬರ್ 2013ರಲ್ಲಿ ಪಾವತಿಸಲಾಗಿದ್ದಿತು.

ನಾಲ್ಕು ವಿತರಕಗಳು, 14 ನೀರಿನ ಹೊರ ತೂಬುಗಳು ಹಾಗೂ 20 ಹರಿಗಟ್ಟೆಗಳಿಗೆ ಸಂಬಂಧಿತ ಕಾಮಗಾರಿಗಳನ್ನು ನಿರ್ದಿಷ್ಟ ಅವಧಿಯ ಒಳಗೆ ಪೂರ್ಣಗೊಳಿಸದ ಹೊರತಾಗಿಯೂ ಒಪ್ಪಂದದ ಷರತ್ತು 2(ಡಿ) ಪ್ರಕಾರ ದಂಡವನ್ನು[57] ವಿಧಿಸಲು ಇಲಾಖೆಯು ಯಾವುದೇ ಕ್ರಮವನ್ನೂ ತೆಗೆದುಕೊಂಡಿರಲಿಲ್ಲ ಎನ್ನುವುದನ್ನು ಕಾರ್ಯನಿರ್ವಾಹಕ ಇಂಜಿನಿಯರ್, ಸಂಖ್ಯೆ 5, ಕಾಲುವೆ ವಿಭಾಗ, ಯರಮರಸ್ ಇವರ ದಾಖಲೆಗಳ ಪರಿಶೀಲನೆಯು (ಫೆಬ್ರವರಿ 2014) ತೋರಿಸಿಕೊಟ್ಟಿತು. ಆದಾಗ್ಯೂ, ದರಪಟ್ಟಿಯಲ್ಲಿ ಹಾಗೂ ಟೆಂಡರ್ ದಾಖಲೆಗಳ ಷೆಡ್ಯೂಲು 'ಬಿ'ನಲ್ಲಿ ನಿರ್ದಿಷ್ಟಪಡಿಸಿರುವಂತೆ ಅಂತಿಮ ಬಿಲ್ಲಿನಲ್ಲಿ ಪಾವತಿಸುವ ಬದಲಾಗಿ ಎರಡನೆಯ ಚಾಲ್ತಿ ಲೆಕ್ಕ ಬಿಲ್ಲಿನಲ್ಲಿ ಗುತ್ತಿಗೆದಾರರಿಗೆ, ₹ 29.17 ಕೋಟಿ ಅಧಿಕ ಮೌಲ್ಯದ ಪಾವತಿಯನ್ನು ಮಾಡಲಾಗಿದ್ದಿತು. ಅಗತ್ಯತೆಗೆ ಬಹಳಷ್ಟು ಮುಂಚಿತವಾಗಿ ₹ 29.17 ಕೋಟಿ ಅಧಿಕ ಮೌಲ್ಯದ ಪಾವತಿಯನ್ನು ಅಕಾಲಿಕವಾಗಿ ಮಾಡಿದ್ದು ಗುತ್ತಿಗೆದಾರರಿಗೆ ಅನಧಿಕೃತ ಲಾಭ ನೀಡಿದಂತಾಯಿತು ಹಾಗೂ ಬಂಡವಾಳ ಕಾಮಗಾರಿಗಳಿಗೆ ಸಾಲಗಳ

[57] ಉಳಿಕೆ ಕಾಮಗಾರಿಯ ಅಂದಾಜು ವೆಚ್ಚದ ಮೇಲೆ ದಿನವೊಂದಕ್ಕೆ ಶೇಕಡಾ ಒಂದರಂತೆ ದಂಡ ಹಾಗೂ ಅದು ಕಾಮಗಾರಿಯ ಅಂದಾಜು ವೆಚ್ಚದ ಶೇಕಡಾ 7.5ರಷ್ಟನ್ನು ಮೀರಕೂಡದು

ಮೂಲಕ ಹಣಕಾಸನ್ನು ಒದಗಿಸಲಾಗುವುದರಿಂದ, ಬಡ್ಡಿಯ ಕಡೆ ರಾಜ್ಯದ ಬೊಕ್ಕಸಕ್ಕೆ ₹ 1.84 ಕೋಟಿ[58] ನಷ್ಟ ಉಂಟು ಮಾಡಿದಂತಾಯಿತು.

ಇದಕ್ಕೆ ಉತ್ತರವಾಗಿ, ಗುತ್ತಿಗೆ ಷರತ್ತುಗಳ ಪ್ರಕಾರ ದಂಡವನ್ನು ವಿಧಿಸಲು ಕ್ರಮಗಳನ್ನು ಕೈಗೊಳ್ಳಲಾಗುವುದು ಹಾಗೂ ಎರಡನೆಯ ಬಿಲ್ಲಿನಲ್ಲಿ ಶೇಕಡಾ 25ರಷ್ಟು ಅಧಿಕ ಮೌಲ್ಯದ ಪಾವತಿಯನ್ನು ಕರ್ನಾಟಕ ನೀರಾವರಿ ನಿಗಮ ನಿಯಮಿತದ ಮುಖ್ಯ ಲೆಕ್ಕಾಧಿಕಾರಿಯವರು ಮಾಡಿದ್ದರು ಎಂದು ಕಾರ್ಯನಿರ್ವಾಹಕ ಇಂಜಿನಿಯರ್‌ರವರು ತಿಳಿಸಿದರು (ಜುಲೈ 2014). ಆದರೆ, ಮುಖ್ಯ ಲೆಕ್ಕಾಧಿಕಾರಿಯಿಂದ ಪಾವತಿಯ ಸಲುವಾಗಿ ಕಾರ್ಯನಿರ್ವಾಹಕ ಇಂಜಿನಿಯರ್‌ರವರು ಬಿಲ್ಲನ್ನು ಒಪ್ಪಿಕೊಂಡಿದ್ದರಾದ್ದರಿಂದ ಅವರೂ ಸಹ ಪಾವತಿಗೆ ಅನುವು ಮಾಡಿದ್ದಕ್ಕಾಗಿ ಜವಾಬ್ದಾರರಾಗಿರುತ್ತಾರೆ.

ಹೀಗೆ, ₹ 29.17 ಕೋಟಿಯನ್ನು ಗುತ್ತಿಗೆದಾರನಿಗೆ ಅಕಾಲಿಕವಾಗಿ ಬಿಡುಗಡೆಗೊಳಿಸಿದ್ದು ಗುತ್ತಿಗೆದಾರನಿಗೆ ಅನುಚಿತ ಹಣಕಾಸಿನ ಲಾಭದ ನೀಡುವಿಕೆಯಲ್ಲಿ ಪರಿಣಮಿಸಿತು ಮತ್ತು ಸರ್ಕಾರಕ್ಕೆ ₹ 1.84 ಕೋಟಿ ಆರ್ಥಿಕ ನಷ್ಟ ಉಂಟುಮಾಡಿತು.

ವಿಷಯವನ್ನು ಸರ್ಕಾರಕ್ಕೆ ಮೇ 2014ರಲ್ಲಿ ತಿಳಿಸಲಾಯಿತು; ಅವರ ಉತ್ತರವನ್ನು ನಿರೀಕ್ಷಿಸಲಾಗಿತ್ತು (ಅಕ್ಟೋಬರ್ 2014).

**ಬೆಂಗಳೂರು** **(ಎಲ್. ಅಂಗಮ್ ಚಂದ್ ಸಿಂಘ್)**
**ದಿನಾಂಕ** **ಪ್ರಧಾನ ಮಹಾಲೇಖಾಪಾಲರು**
**(ಆರ್ಥಿಕ ಮತ್ತು ರಾಜಸ್ವ ವಲಯ ಲೆಕ್ಕಪರಿಶೋಧನೆ)**
**ಕರ್ನಾಟಕ**

**ಮೇಲುರುಜು ಮಾಡಲಾಗಿದೆ**

**ನವದೆಹಲಿ** **(ಶಶಿ ಕಾಂತ್ ಶರ್ಮ)**
**ದಿನಾಂಕ** **ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು**

[58] ಕರ್ನಾಟಕ ಸರ್ಕಾರವು 2013–14ರಲ್ಲಿ ಪಾವತಿಸಿದ್ದ ಸರಾಸರಿ ಬಡ್ಡಿಯ ಆಧಾರದ ಮೇರೆಗೆ, ₹ 29.17 ಕೋಟಿ × 9.45% ದರದಲ್ಲಿ ನವೆಂಬರ್ 2013ರಿಂದ ಜೂನ್ 2014ರವರೆಗೆ ಎಂಟು ತಿಂಗಳಿಗೆ

# ಅನುಬಂಧಗಳು

**ಅನುಬಂಧ 1.1**
**(ಉಲ್ಲೇಖ: ಕಂಡಿಕೆ 1.7.1, ಪುಟ 6)**

**ಸಹಕಾರ ಮತ್ತು ಜಲ ಸಂಪನ್ಮೂಲ (ಸಣ್ಣ ನೀರಾವರಿ) ಇಲಾಖೆಗಳಿಗೆ ಸಂಬಂಧಿಸಿದಂತೆ, ಮಾರ್ಚ್ 2014ರಲ್ಲಿದ್ದಂತೆ, ಬಾಕಿಯಿರುವ ತಪಾಸಣಾ ವರದಿಗಳ ಮತ್ತು ಕಂಡಿಕೆಗಳ ವರ್ಷಾವಾರು ವಿವರಗಳು**

| ನೀಡಿಕೆಯ ವರ್ಷ | ತಪಾಸಣಾ ವರದಿಯ ಅವಧಿ | ಸಹಕಾರ ಇಲಾಖೆ | | ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ) | |
|---|---|---|---|---|---|
| | | ತಪಾಸಣಾ ವರದಿಗಳ ಸಂಖ್ಯೆ | ಕಂಡಿಕೆಗಳ ಸಂಖ್ಯೆ | ತಪಾಸಣಾ ವರದಿಗಳ ಸಂಖ್ಯೆ | ಕಂಡಿಕೆಗಳ ಸಂಖ್ಯೆ |
| 2001–02ರ ವರೆಗೆ | 2000–01ರ ವರೆಗೆ | 37 | 110 | 08 | 13 |
| 2002–03 | 2000–02 | 03 | 11 | – | – |
| | 2001–02 | 01 | 01 | 03 | 03 |
| 2003–04 | 2002–03 | – | – | 07 | 16 |
| 2004–05 | 2001–04 | 01 | 03 | – | – |
| | 2002–04 | 01 | 05 | – | – |
| | 2003–04 | 01 | 01 | 07 | 17 |
| 2005–06 | 2001–05 | 02 | 06 | – | – |
| | 1980–2005 | 01 | 01 | – | – |
| | 1995–2005 | 01 | 01 | – | – |
| 2006–07 | 2003–06 | 01 | 01 | 02 | 04 |
| | 1995–2006 | 01 | 02 | – | – |
| | 2004–06 | – | – | 04 | 06 |
| | 2005–06 | 01 | 01 | 11 | 31 |
| 2007–08 | 2001–07 | 01 | 01 | – | – |
| | 2006–07 | 02 | 02 | 01 | 02 |
| 2008–09 | 2002–08 | 01 | 01 | – | – |
| | 2006–08 | – | – | 08 | 30 |
| | 2007–08 | – | – | 06 | 16 |
| 2009–10 | 2005–09 | 01 | 03 | – | – |
| | 2008–09 | 01 | 02 | 07 | 17 |
| 2010–11 | 2006–10 | 01 | 03 | – | – |
| | 2007–10 | 01 | 08 | – | – |
| | 2008–10 | 02 | 07 | 03 | 06 |
| | 2009–10 | 01 | 01 | 08 | 19 |
| 2011–12 | 2000–11 | 01 | 08 | – | – |
| | 2004–11 | 01 | 14 | – | – |
| | 2005–11 | 01 | 03 | – | – |
| | 2007–11 | 01 | 08 | – | – |
| | 2008–11 | – | – | 01 | 10 |
| | 2010–11 | 02 | 07 | 12 | 36 |
| | 2009–11 | – | – | 01 | 01 |
| 2012–13 | 2010–12 | – | – | 01 | 04 |
| | 2011–12 | 01 | 05 | 17 | 108 |
| 2013–14 | 2008–13 | – | – | 01 | 06 |
| | 2012–13 | 02 | 09 | 17 | 230 |
| | **ಒಟ್ಟು** | **71** | **225** | **125** | **575** |

(ಆಧಾರ: 2013–14ರವರೆಗಿನ ಅವಧಿಗೆ ನೀಡಲಾದ ತಪಾಸಣಾ ವರದಿಗಳು)

**ಅನುಬಂಧ 1.2**
**(ಉಲ್ಲೇಖ: ಕಂಡಿಕೆ 1.7.3, ಪುಟ 6)**

**31 ಜುಲೈ 2014ರಲ್ಲಿದ್ದಂತೆ ಬಾಕಿಯಿರುವ ಇಲಾಖಾ ಟಿಪ್ಪಣಿಗಳ ವಿವರಗಳು**

| ಕ್ರಮ ಸಂಖ್ಯೆ | ಇಲಾಖೆ | 2003–04 | 2004–05 | 2005–06 | 2008–09 | 2009–10 | 2010–11 | 2012–13[@] |
|---|---|---|---|---|---|---|---|---|
| 1 | ವಾಣಿಜ್ಯ ಮತ್ತು ಕೈಗಾರಿಕೆ | – | – | – | 01 | – | – | 04 |
| 2 | ಸಹಕಾರ | – | – | **01** | – | – | – | – |
| 3 | ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ | 01 | – | – | – | – | – | 01 |
| 4 | ತೋಟಗಾರಿಕೆ (ರೇಷ್ಮೋದ್ಯಮ) | – | – | – | – | – | – | **01** |
| 5 | ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ | – | – | – | – | – | – | 01 |
| 6 | ಜಲ ಸಂಪನ್ಮೂಲ (ಸಣ್ಣ ನೀರಾವರಿ) | – | 02 | – | 03 | **01** | – | 01 |
| 7 | ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ | 01 | – | – | – | – | 01 | 07 |
| 8 | ಪ್ರವಾಸೋದ್ಯಮ | – | – | – | – | – | 01 | – |
| | **ಒಟ್ಟು** | **02** | **02** | **01** | **04** | **01** | **02** | **15** |

[@] ಆರ್ಥಿಕ ವಲಯದ ಮೇಲಿನ ವರದಿ

**ಅನುಬಂಧ 1.3**

**(ಉಲ್ಲೇಖ: ಕಂಡಿಕೆ 1.7.3, ಪುಟ 6)**

**31 ಜುಲೈ 2014ರಲ್ಲಿದ್ದಂತೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯಿಂದ ಇನ್ನೂ ಚರ್ಚಿಸಲ್ಪಡಬೇಕಿರುವ ಕಂಡಿಕೆಗಳು**

| ಕ್ರಮ ಸಂಖ್ಯೆ | ಇಲಾಖೆ | 92–93 | 93–94 | 94–95 | 95–96 | 96–97 | 97–98 | 98–99 | 99–00 | 00–01 | 01–02 | 03–04 | 04–05 | 05–06 | 06–07 | 07–08 | 08–09 | 09–10 | 10–11 | 11–12@ | 12–13@ | ಒಟ್ಟು |
|---|---|---|---|---|---|---|---|---|---|---|---|---|---|---|---|---|---|---|---|---|---|---|
| 1 | ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ | 01 | – | 01 | 02 | – | – | – | – | **02** | 03 | 01 | – | – | – | **01** | 02 | – | 02 | **01** | 01 | **17** |
| 2 | ಜಲ ಸಂಪನ್ಮೂಲ | 14 | 07 | 07 | 06 | 08 | 07 | **02** | 02 | **02** | 06 | – | – | – | – | – | – | – | – | – | – | **61** |
| 3 | ಜಲ ಸಂಪನ್ಮೂಲ (ಸಣ್ಣ ನೀರಾವರಿ) | **01** | 05 | 03 | 05 | 04 | 02 | – | – | – | – | **01** | 02 | 01 | – | – | 03 | **02** | 01 | – | 01 | **31** |
| 4 | ಲೋಕೋಪಯೋಗಿ | – | 02 | 02 | 04 | 01 | – | – | – | – | – | 01 | – | – | – | – | – | – | – | – | 07 | 17 |
| 5 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ (ಸಾರ್ವಜನಿಕ ಆರೋಗ್ಯ ಇಂಜಿನಿಯರಿಂಗ್) | – | 01 | – | – | – | – | – | – | – | – | – | – | – | – | – | – | – | – | – | – | 01 |
| 6 | ಸಹಕಾರ | 01 | – | – | – | – | – | – | – | – | – | – | – | **01** | – | – | – | – | – | – | – | 02 |
| 7 | ವಾಣಿಜ್ಯ ಮತ್ತು ಕೈಗಾರಿಕೆ | – | – | – | – | – | 02 | 01 | 01 | – | – | – | – | – | 01 | – | 01 | – | 01 | – | 04 | 11 |
| 8 | ತೋಟಗಾರಿಕೆ (ರೇಷ್ಮೋದ್ಯಮ) | – | – | – | – | – | **01** | 01 | – | – | – | – | – | – | – | – | – | – | – | – | 01 | 03 |
| 9 | ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ | – | – | – | – | – | – | – | – | – | – | **02** | – | – | – | – | – | – | – | – | 01 | 03 |
| 10 | ಪ್ರವಾಸೋದ್ಯಮ | – | – | – | – | – | – | – | – | – | – | – | – | – | – | – | – | – | 01 | – | – | 01 |
| | **ಒಟ್ಟು** | **17** | **15** | **13** | **17** | **13** | **12** | **04** | **03** | **04** | **09** | **05** | **02** | **02** | **01** | **01** | **06** | **02** | **05** | **01** | **15** | **147** |

@ ಆರ್ಥಿಕ ವಲಯದ ಮೇಲಿನ ವರದಿ

**ಅನುಬಂಧ 2.1**
**(ಉಲ್ಲೇಖ: ಕಂಡಿಕೆ 2.1.14, ಪುಟ 30)**

**ಹೊಲಗಾಲುವೆಗಳು ಪೂರ್ಣವಾಗಿದ್ದರೂ ಯೋಜನೆಗಳ ಅಡಿಯಲ್ಲಿ ನೀರಾವರಿಗೊಳಗಾಗದ ಪ್ರದೇಶವನ್ನು ತೋರಿಸುವ ವಿವರಣಾ ಪಟ್ಟಿ**

(ವಿಸ್ತೀರ್ಣ ಹೆಕ್ಟೇರ್‌ನಲ್ಲಿ)

| ಕ್ರಮ ಸಂಖ್ಯೆ | ಯೋಜನೆ | ಮಾರ್ಚ್ 2013ರಲ್ಲಿ ಇದ್ದಂತೆ ಹೊಲಗಾಲುವೆಗಾಗಿ ಸೃಜಿಸಲಾದ ವಿಸ್ತೀರ್ಣ | ಮಾರ್ಚ್ 2014ರಲ್ಲಿ ಇದ್ದಂತೆ ನೀರಾವರಿಗೊಳಗಾದ ವಾಸ್ತವಿಕ ಪ್ರದೇಶ | ನೀರಾವರಿಯಾಗದ ಪ್ರದೇಶ |
|---|---|---|---|---|
| 1 | ಕಬಿನಿ | 44,524 | 42,520 | 2,004 |
| 2 | ಹಾರಂಗಿ | 53,687 | 42,080 | 11,607 |
| 3 | ಹೇಮಾವತಿ | 1,26,420 | 1,04,000 | 22,420 |
| 4 | ಬೆಣ್ಣೆತೊರೆ | 20,234 | 18,993 | 1,241 |
| 5 | ಅಮರ್ಜ | 6,067 | 2,873 | 3,194 |
| 6 | ಭೀಮ ಏತ | 4,888 | 181 | 4,707 |
| 7 | ಕಾರಂಜ | 22,793 | 21,342 | 1,451 |
| 8 | ಕಾಗಿನ | 7,689 | * | 7,689 |
| 9 | ಕೃಷ್ಣ ಮೇಲ್ದಂಡೆ | 5,98,690 | 5,13,299 | 85,391 |
| 10 | ಭೀಮ ಹರಿವು | 12,170 | * | 12,170 |
| 11 | ಮಂಜಿರ ಏತ | 2,752 | * | 2,752 |
| 12 | ಅರೆಶಂಕರ | 1,255 | * | 1,255 |
| 13 | ನಾಗಠಾಣ | 650 | * | 650 |
| 14 | ರಾಮನಹಳ್ಳಿ | 1,943 | * | 1,943 |
| 15 | ಮಲಪ್ರಭ | 2,03,127 | 1,35,102 | 68,025 |
| 16 | ಘಟಪ್ರಭ | 2,76,971 | 2,32,176 | 44,795 |
| **ಒಟ್ಟು** | | **13,83,860** | **11,12,566** | **2,71,294** |

* ನೀರಾವರಿಯಾಗಿಲ್ಲ

**ಅನುಬಂಧ 3.1**
**(ಉಲ್ಲೇಖ: ಕಂಡಿಕೆ 3.1.4.1, ಪುಟ 43)**

**ಸರ್ಕಾರದಿಂದ ಬ್ಯಾಂಕ್‌ಗಳಿಗೆ ಮಾಡಲಾದ ಏಕಕಾಲ ತೀರುವಳಿ ಕಡೆಗೆ ಪಾವತಿಗಳು**

| ಸಹಕಾರಿ ಸಕ್ಕರೆ ಕಾರ್ಖಾನೆಯ ಹೆಸರು | ಬ್ಯಾಂಕ್‌ನ ಹೆಸರು | ಮೊತ್ತ (₹ ಕೋಟಿಯಲ್ಲಿ) | | ಒಟ್ಟು (₹ ಕೋಟಿಯಲ್ಲಿ) |
|---|---|---|---|---|
| | | ಅಸಲು | ಬಡ್ಡಿ | |
| ವಾಣಿವಿಲಾಸ | ಅಪೆಕ್ಸ್ ಬ್ಯಾಂಕ್ | 4.47 | 1.74 | 6.21 |
| | ಡಿಸಿಸಿ ಬ್ಯಾಂಕ್, ತುಮಕೂರು | 1.30 | 0.84 | 2.14 |
| | ಡಿಸಿಸಿ ಬ್ಯಾಂಕ್, ದಾವಣಗೆರೆ | 3.41 | 2.24 | 5.65 |
| | ಡಿಸಿಸಿ ಬ್ಯಾಂಕ್, ಚಿತ್ರದುರ್ಗ | 4.46 | 2.14 | 6.60 |
| | ***ಉಪ ಮೊತ್ತ*** | ***13.64*** | ***6.96*** | ***20.60*** |
| ಕರ್ನಾಟಕ | ಅಪೆಕ್ಸ್ ಬ್ಯಾಂಕ್ | 9.04 | 3.24 | 12.28 |
| | ಡಿಸಿಸಿ ಬ್ಯಾಂಕ್, ತುಮಕೂರು | 3.00 | 1.81 | 4.81 |
| | ಡಿಸಿಸಿ ಬ್ಯಾಂಕ್, ಧಾರವಾಡ | 0.45 | 0.29 | 0.74 |
| | ***ಉಪ ಮೊತ್ತ*** | ***12.49*** | ***5.34*** | ***17.83*** |
| ಪಾಂಡವಪುರ | ಅಪೆಕ್ಸ್ ಬ್ಯಾಂಕ್ | 5.24 | 1.10 | 6.34 |
| | ಡಿಸಿಸಿ ಬ್ಯಾಂಕ್, ಮೈಸೂರು | 3.98 | 2.07 | 6.05 |
| | ಡಿಸಿಸಿ ಬ್ಯಾಂಕ್, ಶಿವಮೊಗ್ಗ | 3.22 | 0.50 | 3.72 |
| | ಡಿಸಿಸಿ ಬ್ಯಾಂಕ್, ದಕ್ಷಿಣ ಕನ್ನಡ | 3.38 | 1.20 | 4.58 |
| | ***ಉಪ ಮೊತ್ತ*** | ***15.82*** | ***4.87*** | ***20.69*** |
| ಭಾಗ್ಯಲಕ್ಷ್ಮಿ | ಅಪೆಕ್ಸ್ ಬ್ಯಾಂಕ್ | 4.33 | 4.92 | 9.25 |
| | **ಒಟ್ಟು** | **46.28** | **22.09** | **68.37** |

**ಅನುಬಂಧ 3.2**
**(ಉಲ್ಲೇಖ: ಕಂಡಿಕೆ 3.3, ಪುಟ 47)**

**ವೆಚ್ಚದ ವ್ಯತ್ಯಾಸದ ಸಂಗ್ರಹಣೆಯಲ್ಲಿ ವಿಳಂಬದಿಂದ ಬಡ್ಡಿಯ ನಷ್ಟವನ್ನು ತೋರಿಸುವ ವಿವರಣಾ ಪಟ್ಟಿ**

| ಕ್ರಮ ಸಂಖ್ಯೆ | ಹಂಚಿಕೆದಾರನ ಹೆಸರು | ಬೇಡಿಕೆ ಇಟ್ಟ ದಿನಾಂಕ | ಅನುಮೋದನೆ ಮತ್ತು ಬೇಡಿಕೆಯ ನಡುವೆ ಪೂರ್ಣಗೊಂಡ ತಿಂಗಳು | ಸಂಗ್ರಹಿಸಲಾದ ವೆಚ್ಚ ವ್ಯತ್ಯಾಸ (₹ನಲ್ಲಿ) | ಬಡ್ಡಿಯ ನಷ್ಟ (₹ನಲ್ಲಿ) | | | ಒಟ್ಟು |
|---|---|---|---|---|---|---|---|---|
| | | | | | ಅನುಮೋದನೆಯ 30 ದಿನಗಳ ನಂತರ 31.3.09ರವರೆಗೆ ಬಡ್ಡಿ ಶೇಕಡ 7 ದರದಲ್ಲಿ | 1.4.09ರಿಂದ 31.3.11ರವರೆಗೆ ಬಡ್ಡಿ ಶೇಕಡ 8.1 ದರದಲ್ಲಿ | 1.4.11ರಿಂದ ಬೇಡಿಕೆಯ ದಿನದವರೆಗೆ ಬಡ್ಡಿ ಶೇಕಡ 8.25 ದರದಲ್ಲಿ | |
| **1** | **ಮಾಲೂರು 3ನೇ ಹಂತ ಕೈಗಾರಿಕಾ ಪ್ರದೇಶ (31.03.2008ರಂದು ಅಂತಿಮ ದರಗಳು ಅನುಮೋದನೆಯಾದವು)** | | | | | | | |
| 1 | ಧನವಂತ್ರಿ ಬಟಾನಿಕಲ್ಸ್ | 23.06.2012 | 49 | 30,81,521 | 1,97,731 | 4,99,206 | 2,96,596 | 10,07,657 |
| 2 | ಪಿಇಪಿ ಚಾರ್ಲ್ಸ್ ಲಿಂಪನ್ಸ್ ಪ್ರೈ ಲಿ | 10.05.2012 | 48 | 10,29,335 | 66,049 | 1,66,752 | 91,997 | 3,29,516 |
| 3 | ಪ್ರಿಸೈಸ್ ಹೈಡ್ರಾಲಿಕ್ಸ್ | 27.08.2012 | 51 | 9,76,444 | 62,655 | 1,58,184 | 1,07,409 | 3,32,724 |
| 4 | ಅಮರ್ ಪ್ರಿಂಟ್ ಪ್ಯಾಕ್ ಇಂಡಸ್ಟ್ರೀಸ್ | 22.10.2011 | 41 | 2,46,412 | 15,811 | 39,919 | 10,164 | 67,024 |
| 5 | ಪೊನ್ನಿ ಇಂಡಸ್ಟ್ರೀಸ್ | 07.09.2012 | 52 | 2,42,900 | 15,586 | 39,350 | 28,389 | 84,438 |
| 6 | ಟ್ರಾಕ್‌ಟೆಕ್ ಇಂಟರ್‌ನೇಶನಲ್ ಪ್ರೈ ಲಿ | 27.04.2012 | 47 | 9,78,381 | 62,779 | 1,58,498 | 80,716 | 3,06,478 |
| 7 | ಶ್ರೀ ದುರ್ಗ ಬಯೋಟೆಕ್ | 28.09.2012 | 52 | 3,92,200 | 25,166 | 63,536 | 45,838 | 1,36,338 |
| 8 | ಪ್ಯೂರ್ ಕೆಮಿಕಲ್ಸ್ ಲ್ಯಾಬ್ ಪ್ರೈ ಲಿ | 28.09.2012 | 52 | 4,11,175 | 26,384 | 66,610 | 48,056 | 1,42,934 |
| 9 | ಗಾಯತ್ರಿ ಕೆಮಿಕಲ್ಸ್ | 28.09.2012 | 52 | 5,06,784 | 32,519 | 82,099 | 59,230 | 1,76,170 |
| 10 | ಕಾಮತ್ ಕ್ಲೋರ್‌ಟೆಕ್ | 28.09.2012 | 52 | 3,92,442 | 25,182 | 63,576 | 45,867 | 1,36,423 |
| 11 | ಎಎಂಪಿ ಆಟೋ ಕಾಂಪೊನೆಂಟ್ಸ್ | 17.08.2012 | 51 | 4,44,631 | 28,530 | 72,030 | 48,909 | 1,51,507 |
| 12 | ಗುಡ್‌ವಿನ್ ಇಂಜಿನಿಯರ್ಸ್ & ಮೆಶಿನಿಷ್ಟ್ | 11.10.2012 | 53 | 4,90,256 | 31,458 | 79,421 | 60,669 | 1,73,795 |
| 13 | ಲಕ್ಷ್ಮೀ ಇನ್ಫ್ರಾಸ್ಟ್ರಕ್ಚರ್ ಅಂಡ್ ಪ್ರೊಫೈಲ್ಸ್ | 20.07.2012 | 50 | 5,14,769 | 33,031 | 83,393 | 53,086 | 1,71,869 |
| 14 | ಆಟೋ ಇಂಡ್ ಫೋರ್ಜಿಂಗ್ (ಇಂಡಿಯ)ಪ್ರೈಲಿ | 23.01.2013 | 56 | 2,51,358 | 16,129 | 40,720 | 36,290 | 94,291 |
| 15 | ಮಹಿನೂರ್ ಗೋಲ್ಡನ್ ರಾಕ್ಸ್ | 06.12.2012 | 55 | 1,76,741 | 11,341 | 28,632 | 24,302 | 65,085 |
| 16 | ಎಎಂಪಿ ಆಟೋ ಪ್ರಾಡಕ್ಟ್ಸ್ | 27.06.2012 | 49 | 5,14,769 | 33,031 | 83,393 | 49,547 | 1,68,330 |
| 17 | ಫ್ಲೋಲೈನ್ ಫ್ಯೂಲ್ಸ್ | 15.12.2012 | 55 | 7,17,662 | 46,050 | 1,16,261 | 98,679 | 2,64,279 |
| **2** | **ಬಿಡದಿ ಕೈಗಾರಿಕಾ ಪ್ರದೇಶ (31.03.2008ರಂದು ಅಂತಿಮ ದರಗಳು ಅನುಮೋದನೆಯಾದವು)** | | | | | | | |
| 18 | ಇಂಗರ್‌ಸಾಲ್ ರಾಂಡ್ ಇಂಟರ್‌ನೇಶನಲ್ (ಇಂಡಿಯ) ಲಿ | 22.03.2012 | 46 | 1,06,64,414 | 6,84,300 | 17,27,635 | 8,06,496 | 32,67,309 |
| 19 | ಪ್ರೇಂ ಪ್ಯಾಕೇಜಿಂಗ್ ಇಂಡಸ್ಟ್ರೀಸ್ | 10.12.2012 | 55 | 18,29,616 | 1,17,400 | 2,96,398 | 2,51,572 | 6,73,756 |

| 3 | ಬೊಮ್ಮಸಂದ್ರ ಜಿಗಣಿ ಲಿಂಕ್ ರಸ್ತೆ ಕೈಗಾರಿಕಾ ಪ್ರದೇಶ (28.05.2008ರಂದು ಅಂತಿಮ ದರಗಳು ಅನುಮೋದನೆಯಾದವು) | | | | | | | |
|---|---|---|---|---|---|---|---|---|
| 20 | ಶೋಭ ಇಂಟೀರಿಯರ್ಸ್ ಪ್ರೈ ಲಿ | 16.07.2012 | 48 | 2,51,37,105 | 13,19,698 | 40,72,211 | 25,92,264 | 80,78,437 |
| 21 | ಫ್ಯೂಚರಿಸ್ಟಿಕ್ ಡಯಾಗ್ನೋಸ್ಟಿಕ್ ಇಮೇಜಿಂಗ್ ಸೆಂಟರ್ ಪ್ರೈ ಲಿ | 27.03.2013 | 56 | 2,30,52,627 | 12,10,263 | 37,34,526 | 34,86,710 | 85,17,946 |
| 22 | ಕೋಬ್ರ ಕಾರ್ಬೈಡ್ ಪ್ರೈ ಲಿ | 27.08.2012 | 49 | 30,01,030 | 1,57,554 | 4,86,167 | 3,30,113 | 9,85,088 |
| 23 | ಶೋಭ ಡೆವೆಲಪರ್ಸ್ ಲಿ | 26.07.2012 | 48 | 1,19,95,967 | 6,29,788 | 19,43,347 | 12,37,084 | 38,55,204 |
| 24 | ಎಕೋಮೇಟ್ ಸಿಸ್ಟಂಸ್ ಇಂಡಿಯ (ಪಿ)ಲಿ | 14.05.2012 | 46 | 14,85,964 | 78,013 | 2,40,726 | 1,32,808 | 4,57,119 |
| 25 | ಆರ್‌ಕೆ ಎಕ್ಸ್‌ಪೋರ್ಟ್ಸ್ | 15.01.2013 | 54 | 53,54,111 | 2,81,091 | 8,67,366 | 7,73,000 | 19,41,535 |
| 26 | ಗಾರ್ನಿಯರ್ ಸೀಟಿಂಗ್ಸ್ | 15.01.2013 | 54 | 7,41,314 | 38,919 | 1,20,093 | 1,07,027 | 2,68,819 |
| 27 | ಪುನೀತ್ ರೀಚ್ ಲಾಜಿಸ್ಟಿಕ್ಸ್ | 08.03.2011 | 32 | 75,14,810 | 3,94,528 | 11,66,674 | – | 15,89,382 |
| 28 | ಲಕ್ಷ್ಮಿ ಮೆಶಿನ್ ಟೂಲ್ಸ್ ಅಂಡ್ ಕ್ಯಾಸ್ಟಿಂಗ್ಸ್ | 23.01.2012 | 42 | 7,41,314 | 38,919 | 1,20,093 | 45,869 | 2,07,661 |
| 29 | ಮಾಡರ್ನ್ ಇಂಡಸ್ಟ್ರೀಸ್ | 15.05.2012 | 46 | 13,80,785 | 72,491 | 2,23,687 | 1,23,408 | 4,24,764 |
| 30 | ಪಾರಾಗಾನ್ ಆರ್ಟ್ಸ್ ಅಂಡ್ ಎಕ್ಸ್‌ಪೋರ್ಟ್ಸ್ | 07.02.2013 | 55 | 28,87,415 | 1,51,589 | 4,67,761 | 4,36,722 | 10,66,900 |
| 31 | ಕ್ವಾಲಿಟಿ ಆಟೋ ಪ್ರಾಡಕ್ಟ್ಸ್ ಪ್ರೈ ಲಿ | 04.12.2012 | 53 | 7,41,314 | 38,919 | 1,20,093 | 1,01,931 | 2,63,723 |
| 32 | ಉಮ ಇಂಜಿನಿಯರಿಂಗ್ ವರ್ಕ್ಸ್ | 16.10.2012 | 51 | 12,52,900 | 65,777 | 2,02,970 | 1,55,046 | 4,28,492 |
| 33 | ಡಾಲ್ಫಿನ್ ಡೈ ಕ್ಯಾಸ್ಟ್ (ಪ್ರೈ) ಲಿ | 06.11.2012 | 52 | 14,90,040 | 78,227 | 2,41,386 | 1,94,636 | 5,19,837 |
| 34 | ಸೆಂಟರ್ ಫಾರ್ ಸಿಂಬಯೋಸಿಸ್ ಆಫ್ ಟೆಕ್ನಾಲಜಿ, ಎನ್‌ವೈರನ್ಮೆಂಟ್ ಅಂಡ್ ಮೇನೇಜ್ಮೆಂಟ್ | 28.09.2012 | 50 | 28,45,532 | 1,49,390 | 4,60,976 | 3,32,572 | 9,53,609 |
| 35 | ಮಂಜುನಾಥ ಇಂಡಸ್ಟ್ರೀಸ್ | 06.12.2012 | 53 | 4,24,097 | 22,265 | 68,704 | 58,313 | 1,50,872 |
| 36 | ಓಂಕೋ ಥೆರಪೀಸ್ ಲಿ | 21.01.2013 | 54 | 57,63,714 | 3,02,595 | 9,33,722 | 8,32,136 | 20,90,067 |
| 37 | ಅಗಿಲ ಸ್ಪೆಷಾಲಿಟೀಸ್ ಪ್ರೈ ಲಿ | 16.01.2013 | 54 | 92,85,180 | 4,87,472 | 15,04,199 | 13,40,548 | 33,67,038 |
| | | | **ಒಟ್ಟು** | **12,89,57,029** | | | | **4,27,29,916** |

## ಅನುಬಂಧ 3.3
## (ಉಲ್ಲೇಖ: ಕಂಡಿಕೆ 3.7; ಪುಟ 55)

### ಅಧಿಕ ಪಾವತಿ ಮಾಡಿರುವುದನ್ನು ತೋರಿಸುವ ವಿವರಣಾ ಪಟ್ಟಿ

(ಮೊತ್ತ ₹ನಲ್ಲಿ)

| ಕ್ರಮ ಸಂಖ್ಯೆ | ಭೂಸ್ವಾಧೀನ ಪ್ರಕರಣ ಸಂಖ್ಯೆ | ಸರ್ವೆ ಸಂಖ್ಯೆ | ವಿಸ್ತೀರ್ಣ (ಎ–ಗುಂ–ಆ) * | ಹೆಸರು | ಮಾಡಬೇಕಿರುವ ಒಟ್ಟು ಪಾವತಿ | ಮಾಡಿದ ಒಟ್ಟು ಪಾವತಿ | ಮಾಡಿದ ಅಧಿಕ ಪಾವತಿ |
|---|---|---|---|---|---|---|---|
| 1 | 24/1988 | 38/33 | 0–3–0 | ಜಿನ್ನಪ್ಪ ತುಪಾಲೆ | 1,64,602 | 2,08,123 | 43,521 |
| 2 | 26/1988 | 43/1 | 0–6–0 | ಧನಪಾಲ್ ದಾದ ಮುಗ್ಧಂ ಮತ್ತು ಇತರರು | 3,42,817 | 4,71,242 | 1,28,425 |
| 3 | 28/1988 | 46/2,46/3 | 0–3–0 | ರಾಮ ಎ ಗುರವ | 1,90,486 | 3,23,357 | 1,32,871 |
| 4 | 30/1988 | 48 | 0–13–0 | ಗಂಗಣ್ಣ ಕೆ ಅಥಣಿ | 7,50,639 | 13,04,068 | 5,53,429 |
| 5 | 31/1988 | 16 | 0–16–0 | ಲಗಮಣ್ಣ ಎ ಗಾಯಕ್ವಾಡ್ | 9,46,973 | 20,07,038 | 10,60,065 |
| 6 | 32/1988 | 50/2 | 0–7–0 | ಭೀಮಪ್ಪ ಬಿ ಗಾಯಕ್ವಾಡ್ | 3,97,836 | 5,63,735 | 1,65,899 |
| 7 | 34/1988 | 56/2 | 0–12–0 | ಈಶ್ವರ್ ಎ ದೇಸಾಯಿ | 6,70,429 | 9,79,458 | 3,09,029 |
| 8 | 35/1988 | – | 0–12–0 | ಅಣ್ಣ ಕೆ ಸುರೋಶಿ | 6,45,522 | 13,26,627 | 6,81,105 |
| 9 | 37/1988 | 80 | 0–15–0 | ಮಾಲಗೌಡ ಎ ಪಾಟೀಲ್ | 8,62,353 | 12,10,712 | 3,48,359 |
| 10 | 38/1988 | 84/4 | 0–4–0 | ಕಲ್ಲು ಪಿ ತುಪಾಲೆ ವಾರಸುದಾರರು | 2,28,605 | 4,70,188 | 2,41,583 |
| 11 | 39/1988 | 39/88 | 0–8–0 | ಭರ್ಮ ಭೀಮ ಬಲೋಲ್ | 4,83,555 | 7,22,004 | 2,38,449 |
| 12 | 40/1988 | 85/1 | 0–6–0 | ಕಲ್ಲಪ್ಪ ಸಿದ್ರಾಂ ಹಲಬತ್ತಿ | 3,43,065 | 4,84,241 | 1,41,176 |
| 13 | 41/1988 | 86,87/1,87/2 | 0–14–0 | ಮಾಲಗೊಂಡ ಎ ಪಾಟೀಲ್ | 7,98,710 | 12,55,379 | 4,56,669 |
| 14 | 42/1988 | 85/2 | 0–3–0 | ಧರೆಪ್ಪ ಪರಿಸ | 1,71,391 | 2,71,091 | 99,700 |
| 15 | 43/1988 | 87/3, 87/4 | 0–8–0 | ಬಾಬಾಸಾಹೇಬ್ ರಾಮು ದುಬಾಲೆ | 4,51,398 | 7,22,399 | 2,71,001 |
| 16 | 44/1988 | 88/1 | 0–7–0 | ತಾತ್ಯ ಎನ್ ಬಿರಾದಾರ | 3,75,992 | 4,59,570 | 83,578 |
| 17 | 45/1988 | 88/3 | 0–4–0 | ಅಪ್ಪ ಪಿ ಬಿರಾದಾರ್ | 2,15,359 | 2,60,247 | 44,888 |
| 18 | 47/1988 | 89/5 | 0–4–0 | ಭೀಮ ಅಣ್ಣು ಗುರವ್ | 2,28,538 | 3,53,647 | 1,25,109 |
| 19 | 48/1988 | 76/1, 92/2 | 0–9–0 | ಅಪ್ಪಣ್ಣ ಬಾಬು ಕೊಗನೊಲಿ | 3,51,344 | 9,63,875 | 6,12,531 |
| 20 | 49/1988 | 92/4 | 0–8–0 | ಅಪ್ಪಣ್ಣ ಬಾಬು ಕೊಗನೊಲಿ | 4,46,883 | 7,22,004 | 2,75,121 |
| 21 | 52/1988 | 100/2 | 0–4–8 | ಅಣ್ಣಪ್ಪ ಉ। ಜಿನ್ನಪ್ಪ | 2,56,767 | 3,66,151 | 1,09,384 |
| 22 | 53/1988 | 100/6 | 0–5–8 | ಭೀಮಪ್ಪ ಜಿ ಎ | 3,13,834 | 3,31,410 | 17,576 |
| 23 | 106/1989 | 95/1 | 0–8–0 | ಅಪ್ಪಾಸಾಬ್ ಡಿ ಪಾಟೀಲ್ | 4,63,814 | 11,17,397 | 6,53,583 |
| 24 | 109/1989 | 39 | 1–15–0 | ತಮ್ಮಾಜಿ ಕೆ ಕುಲಕರ್ಣಿ | 31,67,005 | 60,38,404 | 28,71,399 |
| 25 | 114/1989 | 51 | 0–10–0 | ರತ್ನಾಬಾಯಿ ಮಾಲಗೌಡ ಪಾಟೀಲ್ | 5,82,124 | 10,40,451 | 4,58,327 |
| 26 | 115/1989 | 52/1+2 | 0–5–0 | ಬಾಪುಗೌಡ ಆರ್ ಪಾಟೀಲ್ | 2,88,236 | 5,13,923 | 2,25,687 |
| 27 | 117/1989 | 54 | 0–3–0 | ಬಾಲು ಲಕ್ಷ್ಮಣ್ ಕುರುಬರ್ | 1,71,515 | 2,71,191 | 99,676 |
| 28 | 119/1989 | 62 | 0–25–0 | ಹೀರಾಚಂದ್ ಪ್ರೇಮಚಂದ್ ಷಹಾ | 14,42,999 | 30,19,383 | 15,76,384 |
| 29 | 120/1989 | 63 | 0–28–0 | ನರ್ಶಿಂಹ ಜೆ ಮೊಹಿತೆ | 16,42,117 | 33,81,608 | 17,39,491 |
| 30 | 121/1989 | 148 | 0–25–0 | ಜಿನ್ನಪ್ಪ ಬಿ ಕಮತೆ | 13,45,482 | 29,54,527 | 16,09,045 |
| 31 | 122/1989 | – | 0–21–0 | ನರ್ಶಿಂಹ ಬಿ ಕುಲಕರ್ಣಿ | 12,06,713 | 21,81,916 | 9,75,203 |
| 32 | 123/1989 | 350 | 0–26–0 | ನರಸಪ್ಪ ಎ ಖುರ್ಪೆ | 15,04,534 | 30,38,890 | 15,34,356 |
| 33 | 124/1989 | 352/1 | 0–11–0 | ಹೀರಾಚಂದ್ ಪಿ ಷಹಾ | 6,45,110 | 12,36,962 | 5,91,852 |
| 34 | 125/1989 | 1 | 0–7–0 | ನಾಮದೇವ್ ನೇಮಣ್ಣ ಮೆಹರ್ | 3,99,947 | 5,66,483 | 1,66,536 |
| 35 | 126/1989 | 2 | 0–25–0 | ಅಣ್ಣ ಎನ್ ಮಗನ್ | 14,28,061 | 20,12,814 | 5,84,753 |
| 36 | 127/1989 | 41, 37 | 0–25–0 | ಅಪ್ಪಾಸಾಬ್ ಅಣ್ಣ ಮಂಜರಿ | 14,66,388 | 26,89,733 | 12,23,345 |
| 37 | 128/1989 | 38/1, 43/3, 53/2, 100/4 | 0–23–0 | ದುರ್ಯೋದನ್ ಭೀಮ ಮಗದುಂ | 13,10,256 | 16,90,063 | 3,79,807 |
| 38 | 133/1989 | 47/1 | 0–6–0 | ವಿಕಾಸ್ ಬಿ ಖೋತ್ | 3,16,723 | 4,30,844 | 1,14,121 |
| 39 | 134/1989 | 46/5, 57/2, 57/4 | 0–20–0 | ಧನಪಾಲ್ ಎ ನಿಡಗುಂಡಿ | 11,57,336 | 20,25,161 | 8,67,825 |
| 40 | 135/1989 | 51/1, 51/2 | 0–6–0 | ಮಲ್ಲು ಭೀಮ ಕನವಾಡೆ | 3,32,243 | 4,65,120 | 1,32,877 |
| 41 | 136/1989 | 59 | 0–5–0 | ಕಲ್ಲಪ್ಪ ನಿಂಗಪ್ಪ ಕಾಂಬ್ಳೆ | 2,82,399 | 3,21,629 | 39,230 |
| 42 | 138/1989 | 74 | 0–38–0 | ತಿಪ್ಪಣ್ಣ ಲಗಣ್ಣ ಮಂಜರಿ | 21,50,899 | 33,65,215 | 12,14,316 |
| 43 | 141/1989 | 76/2 | 0–3–0 | ಸಾವಂತ್ ಧಾರೆಪ್ಪ ಚೌಗಲೆ | 1,67,822 | 2,59,718 | 91,896 |
| 44 | 142/1989 | 77 | 0–3–0 | ದಾದು ಧಾರೆಪ್ಪ ಚೌಗಲೆ | 1,67,648 | 2,23,865 | 56,217 |
| 45 | 143/1989 | 78 | 0–6–0 | ಸುಂದರಾಬಾಯಿ ರಾಮು ದುಬಾಲೆ | 3,51,365 | 4,85,559 | 1,34,194 |
| 46 | 144/1989 | 83 | 0–15–0 | ಅಪ್ಪ ಅಣ್ಣು ಗುರವ | 8,47,539 | 13,58,255 | 5,10,716 |
| 47 | 146/1989 | 85/3 | 0–3–0 | ಧಾರೆಪ್ಪ ಭೂಪಾಲ ಕಗನೋಲಿ | 1,70,594 | 2,74,579 | 1,03,985 |
| 48 | 147/1989 | 89/1 | 0–5–0 | ಹೊನ್ನಪ್ಪ ಎಸ್ ಗುರವ | 2,93,686 | 5,64,428 | 2,70,742 |

| | | | | | | | |
|---|---|---|---|---|---|---|---|
| 49 | 149/1989 | 90 | 0–17–0 | ಮಲ್ಲಪ್ಪ ಭೀಮಪ್ಪ ಗುರವ | 9,60,542 | 15,50,639 | 5,90,097 |
| 50 | 153/1989 | 94/5, 95/3, 95/4 | 0–11–0 | ಭರ್ಮ ಬಿ ಕಲಪಾಟೀಲ್ | 8,08,033 | 9,96,941 | 1,88,908 |
| 51 | 154/1989 | 152 | 0–15–0 | ದತ್ತು ರಾಮ ಗುರವ | 8,63,308 | 14,86,960 | 6,23,652 |
| 52 | 155/1989 | 1/1, 1/18 | 0–9–0 | ಶಂಕರ್ ಎಂ ಕಾಂಬ್ಳೆ | 4,98,453 | 7,19,988 | 2,21,535 |
| 53 | 158/1989 | 1/–4 | 0–6–0 | ನಾಗಪ್ಪ ಯೆಲ್ಲಪ್ಪ ಕಾಂಬ್ಳೆ | 3,45,904 | 5,98,838 | 2,52,934 |
| 54 | 159/1989 | – | 0–13–0 | ರಾಮು ಕೆ ಐತ್ವಾಟೆ | 7,50,639 | 13,87,247 | 6,36,608 |
| 55 | 160/1989 | 1/–7 | 0–3–0 | ಅಮ್ಮಣ್ಣ ಅಬ ಕಾಂಬ್ಳೆ | 1,71,357 | 2,43,430 | 72,073 |
| 56 | 161/1989 | 1/9ಎ | 0–3–0 | ಲಕ್ಷ್ಮಣ್ ಭೀಮ ಕಾಂಬ್ಳೆ | 1,71,357 | 2,60,378 | 89,021 |
| 57 | 163/1989 | 1/–1ಎ | 0–5–8 | ಬಸಪ್ಪ ಎಲ್ ಕಾಂಬ್ಳೆ | 3,17,485 | 5,84,042 | 2,66,557 |
| 58 | 168/1989 | 96 | 0–9–0 | ವಿಮಲ್ ಖೋತೆ | 5,20,664 | 10,62,595 | 5,41,931 |
| 59 | 172/1989 | 100/1 | 0–9–0 | ಪರಿಸ ಆರ್ ಬಲೋಲ್ | 5,13,569 | 7,28,324 | 2,14,755 |
| 60 | 173/1989 | 101/1, 105ಎ | 0–6–0 | ಶಾನಕ್ಕ ಮಂಜರಿ | 3,40,289 | 5,52,797 | 2,12,508 |
| 61 | 174/1989 | 101/1, 5ಬಿ | 0–6–0 | ಕೃಷ್ಣ ಟಿ ಮಂಜರಿ | 3,46,451 | 6,31,168 | 2,84,717 |
| 62 | 175/1989 | 101/6 | 0–5–0 | ಮಹಾವೀರ್ ಭೀಮಶೆಟ್ಟಿ | 2,85,318 | 5,27,518 | 2,42,200 |
| 63 | 176/1989 | 102/ಅ | 0–5–0 | ಬಾಲಗೌಡ ಪಾಟೀಲ್ | 2,88,181 | 5,13,841 | 2,25,660 |
| 64 | 177/1989 | – | 0–14–0 | ಶಿದಗೌಡ ಬಿರಾದಾರ್ | 8,11,762 | 16,42,147 | 8,30,385 |
| 65 | 179/1989 | 103/2ಬಿ | 0–4–0 | ಭೀಮು ವೈ ನಂದಲಿ | 2,28,637 | 3,46,920 | 1,18,283 |
| 66 | 182/1989 | 105/2ಬಿ, 105/3 | 0–2.5–0 | ಬಾಲಗೌಡ ಆರ್ ಬಿರಾದಾರ್ | 1,44,099 | 2,49,989 | 1,05,890 |
| 67 | 184/1989 | 106/1+2ಅ | 0–9–0 | ಅಣ್ಣಾಸಾಬ್ ಯು ಪಾಟೀಲ್ | 4,82,546 | 5,94,070 | 1,11,524 |
| 68 | 186/1989 | 106/3+4, 117/1ಎ, 117/1ಬಿ | 0–27.5–0 | ಮಾಲಗೌಡ ಎಸ್ ಭರ್ಮದೆ | 15,68,498 | 25,16,025 | 9,47,527 |
| 69 | 188/1989 | 106/8, 106/9 | 0–4–0 | ಮಾಲಗೌಡ ಆರ್ ಪೀರಣ್ಣವರ್ | 2,31,848 | 4,22,501 | 1,90,653 |
| 70 | 189/1989 | 106/14 | 0–2–0 | ರಮ ಎಸ್ ಪೀರಣ್ಣವರ್ | 1,15,452 | 2,05,069 | 89,617 |
| 71 | 190/1989 | 106/15 | 0–3–0 | ರಾಮು ಬಿ ಪೀರಣ್ಣವರ್ | 1,71,722 | 2,62,325 | 90,603 |
| 72 | 191/1989 | 107/2, 108/2, 121/1, 121/2 | 1–7–0 | ಬಸಗೌಡ ನಂದನಿ | 26,85,283 | 42,18,857 | 15,33,574 |
| 73 | 196/1989 | 106/8, 106/9 | 0–3–0 | ಮುಕುಂದ್ ಕೆ ನಂದನಿ | 1,61,573 | 2,03,528 | 41,955 |
| 74 | 197/1989 | 112/2ಃ | 0–3–0 | ಶಿವಗೌಡ ಕೆ ನಂದನಿ | 1,61,590 | 3,26,742 | 1,65,152 |
| 75 | 201/1989 | 114/1 | 0–19–0 | ಶಶಿಕಾಂತ್ ಬಿ ಕುಲಕರ್ಣಿ | 11,01,043 | 20,52,912 | 9,51,869 |
| 76 | 202/1989 | 115/1, 121/6, 121/7 | 0–13–0 | ಬಸಗೌಡ ಎಸ್ ಪಾಟೀಲ್ | 7,00,254 | 8,58,033 | 1,57,779 |
| 77 | 203/1989 | 115/2, 115/4 | 0–5–0 | ಅಪ್ಪಾಸಾಬ್ ಬಿ ತೊಮ್ಮನೆ | 2,85,899 | 4,48,389 | 1,62,490 |
| 78 | 205/1989 | 115/5, 123/11 | 0–15–0 | ನರಸಪ್ಪ ಬಿ ಬೋರ್ಗಾವೆ | 8,49,240 | 14,14,001 | 5,64,761 |
| 79 | 206/1989 | 89/4, 121/3, 121/7 | 0–11–8 | ಶಂಕರ್ ಎ ಗುರವ್ | 6,63,059 | 11,14,208 | 4,51,149 |
| 80 | 208/1989 | 116/3 | 0–5–0 | ಮಲ್ಲಪ್ಪ ಆರ್ ಶಿವನೂರ್ | 2,85,401 | 4,38,527 | 1,53,126 |
| 81 | 209/1989 | 116/4ಎ, 116/4ಬಿ | 0–12–0 | ಸಾವಂತ್ ಡಿ ಗಣೇಶ್‌ವಾಡಿ | 6,76,769 | 10,90,141 | 4,13,372 |
| 82 | 210/1989 | – | 0–11–0 | ಲಗಮವ್ವ ಎಲ್ ನಾವಿ | 6,40,484 | 8,26,552 | 1,86,068 |
| 83 | 212/1989 | 118/3, 118/5 | 0–4–0 | ಕಲ್ಲು ಕೆ ಸುಣದಾಲೆ | 1,95,442 | 3,83,727 | 1,88,285 |
| 84 | 213/1989 | – | 0–3–8 | ಮಲ್ಲು ಟಿ ಮಂಜರಿ | 2,03,037 | 3,39,069 | 1,36,032 |
| 85 | 214/1989 | 102/1ಬಿ, 122/1 | 0–18–0 | ಜವಾಹರ್ ಬಿ ಪಾಟೀಲ್ | 10,73,814 | 20,54,147 | 9,80,333 |
| 86 | 215/1989 | 122/2 | 0–12–0 | ಪಾರ್ವತಿ ಎಸ್ ಕನ್ವಾಡೆ | 6,84,604 | 10,93,640 | 4,09,036 |
| 87 | 218/1989 | 122/5 | 0–2–0 | ಬಾಲಗೌಡ ಎನ್ ಪಾಟೀಲ್ | 1,14,346 | 1,73,249 | 58,903 |
| 88 | 219/1989 | 122/7 | 0–3–0 | ಸತ್ತೆವ್ವ ಐ ತರಲ್ | 1,71,183 | 2,42,639 | 71,456 |
| 89 | 220/1989 | 123/2 | 0–3–0 | ಎಸ್ ಜೆ ಚಂಬರ್ | 1,73,216 | 2,42,775 | 69,559 |
| 90 | 221/1989 | 123/1, 123/4, 123/5, 123/6ಎ | 0–13–8 | ಬಾಬು ಭೀಮ ಅವರಾದಿ | 7,78,076 | 17,59,912 | 9,81,836 |
| 91 | 222/1989 | 123/3, 123/6ಬಿ | 0–4–8 | ಅಪ್ಪಾಸಾಬ್ ಎಂ ನಿಂಗಣ್ಣವರ್ | 2,59,406 | 5,32,149 | 2,72,743 |
| 92 | 223/1989 | 101/3, 102/1ಎ | 0–5–0 | ರಾಮಗೊಂಡ ಕೆ ಪಾಟೀಲ್ | 2,85,608 | 4,11,897 | 1,26,289 |
| | | | | **ಒಟ್ಟು** | **5,60,25,094** | **9,56,13,530** | **3,95,88,436** |

* (**ಎ**–ಎಕರೆ; **ಗು**–ಗುಂಟೆ; **ಆ**–ಆಣೆ)   (16 ಆಣೆ–1 ಗುಂಟೆ; 40 ಗುಂಟೆ–1 ಎಕರೆ)